ಸಂಪುಟ: 22 ಸಂಚಿಕೆ : 41-42 ಅಕ್ಟೋಬರ್ 8, 2000 ಬೆಲೆ: ರೂ. 7.00

ಐಕ್ಯರಂಗ

ವಿಶೇಷಾಂಕ



ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ

ಐಕ್ಯರಂಗ
ವಾರಪತ್ರಿಕೆ

ಸಂಪುಟ 22 ಸಂಚಿಕೆ 41-42
ಅಕ್ಟೋಬರ್ 8,2000 ಬೆಲೆ ರೂ. 7.00
ಸ್ವಾತಂತ್ರ್ಯ ವಿಶೇಷಾಂಕ


"ತೊಲಗು ತೊಲಗಾಚೆ ಬಿಳಿದೊಗಲ ಸುಲಿಗೆಗಾರ
ನಾವಲ್ಲ ತೊತ್ತು, ನಿನಗಲ್ಲ ತುತ್ತು ನಮ್ಮಾಸೆ, ನುಡಿ, ವಿಚಾರ
ಹೋ ಎಂಬ ವೀರಮಂತ್ರ ಮಾರ್ಮಲೆದುದಭ್ರದಲ್ಲಿ"

ಇದು ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಭಾರತದ ಉದ್ದಗಲಕ್ಕೂ ಹರಡಿದ್ದ ಸ್ಫೂರ್ತಿಯುತ ಸಮರಶೀಲ ಭಾವನೆ. ಕೋಟಿಗಟ್ಟಲೆ ಜನರು ಸ್ವಾತಂತ್ರ್ಯ ಹೋರಾಟಕ್ಕೆ ಧುಮಿಕಿದ್ದು 'ಭೀರು ಭೀರುಗಳೆ ವೀರ ಧೀರರಾಗಿ' ತ್ಯಾಗ ಬಲಿದಾನ ಮಾಡಿದ್ದು ನೆಲವೆ ಬಾಯಿ ಬಿಟ್ಟಂತೆ ತೆರೆದ ಸೆರೆಮನೆಯ ನರಕಲೋಕವನ್ನು ಪ್ರವೇಶಿಸಿದ್ದು ಗುಂಡಿಗೆ ಎದೆಯೊಡ್ಡಿ ಸಾವಿರಾರು ಮಂದಿ ಬಲಿದಾನ ಮಾಡಿದ್ದು ಈ ಭಾವನೆಯಿಂದ. ಇದೇ ಸ್ವಾತಂತ್ರ್ಯ ಚಳುವಳಿಯ ಮೂಲಮಂತ್ರ. ಸಾರ್ವಭೌಮತೆಯ ತಿರುಳು.

ಬ್ರಿಟಿಷರನ್ನು ಹೊಡೆದೋಡಿಸಿ ಸ್ವಾತಂತ್ರ್ಯವನ್ನು ಪಡೆದೆವು ಎಂದು ಭಾರತದ ಎಳೆ ಮಕ್ಕಳಿಗೂ ಗೊತ್ತು. ಆದರೆ, ಸಾರ್ವಭೌಮತೆ ಎಂದರೇನು? ಇದೊಂದು ಅರ್ಥವಾಗದ

ಸಂಪಾದಕೀಯ.....

ಪದ. ಇಂಗ್ಲೀಷಿನ 'sovereignityr'(ಸಾವರಿನಿಟಿ) ಎಂಬುದಕ್ಕೆ ಸಂವಾದಿಯಾದ ಪದ. ಪದ ಅರ್ಥವಾಗದದ್ದಾದರೂ ಈ ಪರಿಕಲ್ಪನೆ, ಭಾವನೆ ಜನರೆಲ್ಲರಿಗೂ ಪ್ರಿಯವಾದದ್ದು. 'ನಾವಲ್ಲ ತೊತ್ತು, ನಿನಗಲ್ಲ ತುತ್ತು, ನಮ್ಮಾಸೆ ನುಡಿ, ವಿಚಾರ' ಎಂಬುದೇ ಸಾರ್ವಭೌಮತೆಯ ಹೃದಯ. ನಮ್ಮ ದೇಶದ ಎಲ್ಲಾ ಅಧಿಕಾರವೂ ಈ ದೇಶದವರಾದ ನಮ್ಮ ಪ್ರಜೆಗಳದ್ದು.



ಗುಲಾಮರಂತೆ ದುಡಿದ ಭಾರತದ ಜನತೆ

ಇದರಲ್ಲಿ ಬೇರೆ ಯಾರಿಗೂ ಮಧ್ಯಪ್ರವೇಶ ಮಾಡುವ ಅಧಿಕಾರವಿಲ್ಲ ಎನ್ನುವುದೇ ಸಾರ್ವಭೌಮತೆ. ನಮ್ಮ ದೇಶದ ಸಂವಿಧಾನದಲ್ಲಿ ಆರಂಭದಲ್ಲಿಯೇ "ಭಾರತದ ಜನರಾದ ನಾವು ನಮಗೆ ಈ ಸಂವಿಧಾನವನ್ನು ಕೊಟ್ಟು ಕೊಂಡಿದ್ದೇವೆ" ಎಂದು

ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ



ಅಲ್ಜೀರಿಯದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ದಂಗೆಗಳು ಯುರೋಪಿಯನ್ ದಬ್ಬಾಳಿಕೆಗಾಗಿ ಮನೆಯ ಪಿಠೋಪಕರಣಗಳನ್ನು ಬೀದಿಗಳಲ್ಲಿ ಬೆಂಕಿ ಹಾಕಿ ಸುಡುತ್ತಿರುವುದು

ಘೋಷಿಸಿಕೊಂಡಿರುವುದು ಸ್ವಾತಂತ್ರ್ಯ ಚಳುವಳಿಯ ಹೃದಯವಾದ ಸಾರ್ವಭೌಮತೆಯನ್ನು ಸಾಕಾರಗೊಳಿಸುವುದಕ್ಕಾಗಿಯೇ.

ಇಂದು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಗಳ ಮೇಲೆ ಎಡೆಬಿಡದೆ ಧಾಳಿ ನಡೆಯುತ್ತಿರುವಾಗ ಈ ಪರಿಕಲ್ಪನೆಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕು. ಈ ಅರಿವು ಮೂಡಿಸುವ ಎಚ್ಚರದಿಂದ ದೇಶವನ್ನು, ನಮ್ಮನ್ನು ನಾವೇ ಕಾಪಾಡಿಕೊಳ್ಳಬೇಕು.

ಸ್ವಾತಂತ್ರ್ಯ, ಸಾರ್ವಭೌಮತೆಗಳಿಗಾಗಿ ನಡೆದ ಚಳುವಳಿ ನಮ್ಮ ದೇಶವನ್ನು ಮಾತ್ರವಲ್ಲ ಇಡೀ ವಿಶ್ವವನ್ನೇ ವ್ಯಾಪಿಸಿದ ಚಳುವಳಿ. ಇಂದಿನ ವಿಶ್ವದ ಭೂಪಟವನ್ನು ರೂಪಿಸಿದ ಮಹಾ ಚಳುವಳಿ. 20ನೇಯ ಶತಮಾನದ ಎರಡು ಕ್ರಾಂತಿಕಾರಿ ಚಳುವಳಿಗಳಲ್ಲೊಂದು. ಸಮಾಜವಾದಿ ಕ್ರಾಂತಿಯ ಯುಗ ನಿರ್ಮಾಪಕ ಕ್ರಾಂತಿಗಳ ಜೊತೆಗಾರನಾದ ರಾಷ್ಟ್ರೀಯ ವಿಮೋಚನಾ ಚಳುವಳಿಗಳ ಪ್ರಭಾವದಿಂದಾಗಿಯೇ ಇಂದು 180 ಕ್ಕೂ ಹೆಚ್ಚು ದೇಶಗಳು ರೂಪುಗೊಂಡಿವೆ.

20ನೆಯ ಶತಮಾನ ಮೂಡುವ ವೇಳೆಗೆ ಕೇವಲ ಆರು ದೇಶಗಳು ಜಗತ್ತನ್ನೆಲ್ಲಾ ಹರಿದು ಹಂಚಿಕೊಂಡಿದ್ದವು. ಹೀಗಾಗಿ ಜಗತ್ತಿನಲ್ಲೆಲ್ಲೂ ಕೇವಲ ಬ್ರಿಟಿಷ್, ಫ್ರೆಂಚ್, ರಷ್ಯನ್ ಝಾರ್, ಜರ್ಮನ್, ಅಮೆರಿಕ, ಜಪಾನ್, ಬೆಲ್ಜಿಯಂ, ಹಾಲೆಂಡ್(ಡಚ್), ಇಟಲಿ ದೇಶದ ವಸಾಹತುಗಳೇ. ಇದರಲ್ಲಿ ಅರ್ಧಭಾಗ ಬ್ರಿಟಿಷ್ ಪ್ರಭುತ್ವದ ಕಾಲಡಿಯಲ್ಲಿ ಸಿಕ್ಕು ನರಳುತ್ತಿದ್ದ ದೇಶಗಳು.

ಈ ಆರೆಂಟು ವಸಾಹತುಶಾಹಿ ದೇಶಗಳ ಶೋಷಣೆ, ದಮನಗಳಿಗೆ ತುತ್ತಾಗಿದ್ದ ದೇಶಗಳಲ್ಲಿ ಸ್ವಾತಂತ್ರ್ಯದ ಭಾವನೆ ಚಿಗುರೊಡೆದು ವಿಶ್ವ ಬೆಳೆಯಲಾರಂಭಿಸಿತು. 1905 ರ ವೇಳೆಗೆ ವಿಶ್ವದ ಗಮನವನ್ನು ಸೆಳೆಯುವ ಚಳುವಳಿಗಳಾಗಿ ರೂಪುಗೊಂಡುವು. 1917 ರ ರಷ್ಯನ್ ಕ್ರಾಂತಿಯ ನಂತರ ವಿಶ್ವಾದ್ಯಂತ ಸ್ವಾತಂತ್ರ್ಯ ಚಳುವಳಿಗಳು ತೀವ್ರಗೊಂಡು ವಿಶ್ವವನ್ನೇ ವ್ಯಾಪಿಸಲಾರಂಭಿಸಿದವು. ಎರಡನೇ ಮಹಾಯುದ್ಧದಲ್ಲಿ ಈ ಸಾಮ್ರಾಜ್ಯಶಾಹಿ ದೇಶಗಳ ನಡುವೆ ದೊಡ್ಡ ಯುದ್ಧವಾಗಿ ಎಲ್ಲಾ ಸಾಮ್ರಾಜ್ಯಗಳೂ ದುರ್ಬಲಗೊಂಡವು. ಅದೇ ಸಮಯದಲ್ಲಿ ಯುದ್ಧದ ಬೇಗೆಯಿಂದ ಬಳಲಿದ ಜನರ ಸ್ವಾತಂತ್ರ್ಯ ಚಳುವಳಿಯೂ ತೀವ್ರವಾಯಿತು.

ಭಾರತದ ಸ್ವಾತಂತ್ರ್ಯ ಚಳುವಳಿ ಈ ಸ್ವಾತಂತ್ರ್ಯ ಚಳುವಳಿಗಳ ಮಹಾ ಸಾಗರಕ್ಕೆ ಸೇರಿದ ದೊಡ್ಡ ನದಿ ಭಾರತದ ಚಳುವಳಿ. ವಸಾಹತುಗಳಾಗಿದ್ದ ದೇಶಗಳಲ್ಲೆಲ್ಲಾ ಗಮನ ಸೆಳೆದ ಸ್ವಾತಂತ್ರ್ಯ ಚಳುವಳಿ.

ಎರಡನೇ ಮಹಾಯುದ್ಧದ ನಂತರ ಒಂದೊಂದಾಗಿ ಬಹಳಷ್ಟು ದೇಶಗಳು ಸ್ವಾತಂತ್ರ್ಯ ಪಡೆದಯಲಾರಂಭಿಸಿದವು. 1970 ರ ವೇಳೆಗ ಬಹಳ ದೇಶಗಳು ಸ್ವಾತಂತ್ರ್ಯ ಪಡೆದಿದ್ದವು. ಹೀಗೆ ಶತಮಾನಗಳ ಕಾಲ ಶೋಷಣೆ, ದಬ್ಬಾಳಿಕೆಯನ್ನನುಭವಿಸಿದ ದೇಶಗಳು ಬಿಡುಗಡೆಗೊಂಡು ಕೇವಲ 4-5 ದಶಕಗಳಾಗಿವೆ. ಮತ್ತೆ ಸಾಮ್ರಾಜ್ಯಶಾಹಿ ತನ್ನ ಹಿಡಿತಕ್ಕೆ ಇಡೀ ವಿಶ್ವವನ್ನು ತೆಗೆದುಕೊಳ್ಳುವ ಆತುರದಲ್ಲಿ ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶಗಳ ಸಾರ್ವಭೌಮತೆಯ ಮೇಲೆ ದಿನನಿತ್ಯ ಪ್ರಹಾರ ಮಾಡಲಾರಂಭಿಸಿದೆ. ಈ ಧಾಳಿಗಳ ವಿರುದ್ಧ ಮತ್ತೆ ದೇಶ ವ್ಯಾಪಿ, ವಿಶ್ವವ್ಯಾಪಿ ಚಳುವಳಿಗಳು ಅಲೆಯಾಗಿ, ಪ್ರವಾಹವಾಗಿ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನೇ ಕೊಚ್ಚಿಹಾಕಬೇಕಾಗಿದೆ.

ಈ ಹೋರಾಟದಲ್ಲಿ ನೆರವಾಗಲೆಂದು ಈ ಸಂಚಿಕೆಯಲ್ಲಿ ವಸಾಹತು ಕಾಲದ ಶೋಷಣೆಯನ್ನು, ಸ್ವಾತಂತ್ರ್ಯಾ ನಂತರ ಗಳಿಸಿದ ಅಧಿಕಾರವನ್ನು ಪ್ರಭುತ್ವವನ್ನು ಏಕೆ ಉಳಿಸಿಕೊಳ್ಳಬೇಕಾಗಿದೆ ಎಂದು ವಿವರಿಸಿದ ವಿಶ್ವಾದ್ಯಂತದ ಸ್ವಾತಂತ್ರ್ಯ ಚಳುವಳಿಯ ಸ್ವರೂಪವನ್ನು ನಿಮ್ಮ ಮುಂದಿಡುವಂತಹ ಲೇಖನಗಳನ್ನು ನೀಡಲಾಗಿದೆ. ಸ್ವಾತಂತ್ರ್ಯದ ಫಲ ಕರ್ನಾಟಕದ ಜನತೆಗೆ ದಕ್ಕಿರುವ ಅತ್ಯಲ್ಪ ಪ್ರಮಾಣದ ಬಗ್ಗೆ ಚಿತ್ರಣ ನೀಡುವ ಅಂಕಿ ಅಂಶಗಳನ್ನು ಹಾಗೂ ಭೂಪಟಗಳನ್ನು ನೀಡಲಾಗಿದೆ.

ಅಂದು ಸ್ವಾತಂತ್ರ್ಯ ಪಡೆಯುವುದಕ್ಕಾಗಿ ಚಳುವಳಿ
ಇಂದು ಸ್ವಾತಂತ್ರ್ಯ ಉಳಿಸಿಕೊಳ್ಳುವುದಕ್ಕಾಗಿ ಚಳುವಳಿ

- ಸಂಪಾದಕ

ಭಾರತದ ವಸಾಹತುಶಾಹಿ ಶೋಷಣೆ - ಆರ್ಥಿಕ ಮೂಲ

ಜಿ.ಎನ್.ನಾಗರಾಜ್

'ಬಂಗಾಲದ ಲೂಟಿ ಲಂಡನ್‌ಗೆ ಬಂದ ತಕ್ಷಣದಲ್ಲಿಯೇ ಗಮನಾರ್ಹ ಪರಿಣಾಮ ಬೀರಿತು. ಬಂಗಾಲವನ್ನು ಕೈವಶಮಾಡಿಕೊಳ್ಳಲು 1757 ರಲ್ಲಿ ಪ್ಲಾಸಿ ಕದನ ನಡೆಯಿತು. 1759 ರಲ್ಲಿ ಬ್ರಿಟಿಷ್ ಇಂಪಿರಿಯಲ್ ಬ್ಯಾಂಕ್(ಅಲ್ಲಿಯ ರಿಸರ್ವ್ ಬ್ಯಾಂಕ್) ಮೊತ್ತ ಮೊದಲ ಬಾರಿಗೆ 10 ಹಾಗೂ 15 ಪೌಂಡುಗಳ ನೋಟುಗಳನ್ನು ಬಿಡುಗಡೆ ಮಾಡಿತು. ಬ್ರಿಟನ್ ಕೈಗಾರಿಕಾ ಕ್ರಾಂತಿ 1760 ರಲ್ಲಿ ಆರಂಭವಾಯಿತು. ಹೀಗೆಂದು ಬ್ರೂಕ್ ಆಡಮ್ಸ್ ಎಂಬ ಇಂಗ್ಲೀಷ್ ಲೇಖಕ ಬರೆಯುತ್ತಾನೆ.

ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಳ್ಳಲು ನಡೆಸಿದ ಹಲವಾರು ಯುದ್ಧಗಳಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಇಲ್ಲಿಯ ಭೂಮಿ, ಅದರಿಂದ ಭೂ ಕಂದಾಯ, ಭೂಮಿಯಲ್ಲಿ ಬೆಳೆದ ನೀಲಿ, ಹತ್ತಿ, ಭೂಮಿಯೊಳಗೆ ಹುಡುಗಿದ್ದ ಕಬ್ಬಿಣ, ಚಿನ್ನಗಳ ಮೇಲೆ ವ್ಯಾಪಾರದ ಲಾಭಗಳ ಕಡೆಗೆ ಗಮನ. ಆದರೆ ಇಲ್ಲಿ ಯುದ್ಧಗಳನ್ನು ನಡೆಸಿದ ಕ್ಲೈವ್, ವಾರನ್ ಹೇಸ್ಟಿಂಗ್ಸ್, ಕಾರನ್ ವಾಲಿಸ್, ಮುನ್ರೊ ಮೊದಲಾದ ಸಾವಿರಾರು ಸೈನಿಕ ದಳಪತಿಗಳು ಹಾಗೂ ಆಡಳಿತಗಾರರಿಗೆ ಸೈನಿಕ ವಿಜಯಗಳ ನಂತರ ಮಾಡಿದ ಲೂಟಿಯ ಮೇಲೆ ಕಣ್ಣು. ಹೀಗೆ ಟಿಪ್ಪುಸುಲ್ತಾನ್‌ನನ್ನು ಸೋಲಿಸಿದಾಗ ಶ್ರೀರಂಗಪಟ್ಟಣದಲ್ಲಿ ನಡೆದ ಲೂಟಿಯಲ್ಲಿ ಅಲ್ಲಿನ ಪ್ರತಿಯೊಂದು ಮನೆಗೂ ನುಗ್ಗಿ ಒಡವೆ, ವಸ್ತುಗಳನ್ನು ಲೂಟಿ ಮಾಡಲಾಯಿತು. ಟಿಪ್ಪುವಿನ ರಾಜಭಂಡಾರ, ಸಿಂಹಾಸನ ಇಂತಹುಗಳನ್ನು ಸೇರಿಸಿ ಲೂಟಿಯನ್ನು ಸೈನ್ಯಕ್ಕೆಲ್ಲಾ ಹಂಚಲಾಯಿತು. ಅಂದಿನ ಒಬ್ಬ ಸಾಮಾನ್ಯ ದಳಪತಿಗೆ ಅಂದಿನ ಬೆಲೆಯಲ್ಲಿ (1799) ಒಂದು ಲಕ್ಷ ಪೌಂಡಿಗಿಂತಲೂ ಹೆಚ್ಚು ಹಣ ದೊರೆಯಿತು.

ಹಾಗೇ ಕಂಪನಿಯ ವ್ಯಾಪಾರದ ಜೊತೆಗೆ ಅದರ ಅಧಿಕಾರಿಗಳ ಖಾಸಗಿ ವ್ಯಾಪಾರ, ಅವರ ಸಂಬಳ, ಸಾರಿಗೆಗಳು ಸೇರಿ ಲಂಡನ್‌ಗೆ ಸಾಗಿದ ಲೂಟಿ ಅಲ್ಲಿ ಮೊತ್ತ ಮೊದಲ ಬಾರಿಗೆ 10, 15 ಪೌಂಡ್‌ಗಳ ನೋಟುಗಳು ಮುದ್ರಣವಾಗುವಂತೆ ಮಾಡಿದವು. ಅಲ್ಲಿನ ಕೈಗಾರಿಕಾ ಕ್ರಾಂತಿಗೆ ಬಂಡವಾಳವನ್ನು ಒದಗಿಸಿದವು.

ವ್ಯಾಪಾರದ ಮೂಲಕ ಲೂಟಿ

1822-23 ರಲ್ಲಿ ಬಂಗಾಲಕ್ಕೆ ಆಮದಾಗುತ್ತಿದ್ದ ಬಟ್ಟೆ ಒಟ್ಟು ಪ್ರಮಾಣ 1813-14 ಕ್ಕೆ ಹೋಲಿಸಿದರೆ ಏಳುಪಟ್ಟು. ಹೀಗೆ ವರ್ಷದಿಂದ ವರ್ಷಕ್ಕೆ ಬಟ್ಟೆಯ ಆಮದಿನ ಪ್ರಮಾಣ ಏರುತ್ತಾ ಹೋಯಿತು. ಇದರಿಂದ ಭಾರತದ ಜನರು ಬಳಸುತ್ತಿದ್ದ ಒಟ್ಟು ಬಟ್ಟೆಯ ಪ್ರಮಾಣದಲ್ಲಿ ವಿಲಾಯಿತಿ ಬಟ್ಟೆಯ ಪ್ರಮಾಣ ಹೀಗೆ ಏರಿತು.

1813 - 15 - ಶೇ 3.9, 1856 - 60 - ಶೇ 35.3, 1880 - 81 - ಶೇ 58. 4

ಹೀಗೆ ಭಾರತದ ಅರ್ಧಜನಕ್ಕೆ ಬಟ್ಟೆ ಮಾರುವಷ್ಟು.

ಬಟ್ಟೆ ಆಮದಿನಿಂದಾಗಿ ನೇಕಾರರು ಕೆಲಸ ಕಳೆದುಕೊಂಡು ಒರಿಸ್ಸಾ, ಬಂಗಾಲ, ಬಾಂಗ್ಲಾದೇಶ, ಆಂಧ್ರ, ಗುಜರಾತ್‌ಗಳಲ್ಲಿದ್ದ ಉತ್ತಮ ಬಟ್ಟೆಗಳ ನೇಕಾರರು ಕೂಲಿಕಾರರಾದರು.

ಬಟ್ಟೆ ಮಾತ್ರವೇ ಅಲ್ಲದೆ ಹತ್ತಿಯು ನೂಲನ್ನು ಕೂಡ 1826-27 ರಿಂದ ಆಮದು ಮಾಡಿಕೊಳ್ಳಲಾರಂಭಿಸಿದರು. ಇದರಿಂದಾಗಿ ಮತ್ತಷ್ಟು ಜನ ಕೆಲಸ ಕಳೆದುಕೊಂಡರು.

ಕೃಷಿ: ಅದೇ ಸಮಯದಲ್ಲಿ ಭಾರತದಲ್ಲಿ ಆಹಾರದ ಬೆಳೆಗಳಿಗೆ ಬದಲಾಗಿ ಬ್ರಿಟಿಷ್ ದೇಶದ ಬಟ್ಟೆ ಉದ್ಯಮಕ್ಕೆ ಅಗತ್ಯವಾದ ಹತ್ತಿ, ನೀಲಿ ಮೊದಲಾದ ಬೆಳೆಗಳನ್ನು ಒತ್ತಾಯಪೂರ್ವಕವಾಗಿ ಬೆಳೆಸಲಾಯಿತು. ಸಕ್ಕರೆ, ಅಕ್ಕಿ, ಗೋಧಿಯಂತಹ ಆಹಾರದ ವಸ್ತುಗಳನ್ನು ಭಾರತದಿಂದ ರಫ್ತು ಮಾಡಿದರು. ಅದೇ ಸಮಯದಲ್ಲಿ ನೀರಾವರಿ ಮೊದಲಾದ ಯಾವ ಸೌಕರ್ಯವನ್ನೂ ಒದಗಿಸಲಿಲ್ಲ. ಭಾರತದ ಬಹಳ ಭಾಗದಲ್ಲಿ ತಲೆತಲಾಂತರದಿಂದ ಬಂದ ನೀರಾವರಿ ಕೆರೆ, ಕಾಲುವೆಗಳು ಗಮನ ನೀಡುವವರಿಲ್ಲದೆ ನಿರುಪಯುಕ್ತವಾಗತೊಡಗಿದವು. ಕ್ಷಾಮ, ಡಾಮರಗಳು ಹೆಚ್ಚಿದವು. ದೇಶಾದ್ಯಂತ ಜಾನಪದದಲ್ಲಿ ಹರಡಿರುವ ಬರಗಾಲದ ಗೀತೆ, ಕಥೆಗಳನ್ನು ನೋಡಿದರೆ ಈ ಕ್ಷಾಮದ ತೀವ್ರತೆ ಗೊತ್ತಾಗುತ್ತದೆ.

ಇದರ ಪರಿಣಾಮವಾಗಿಯೇ ದ.ರಾ.ಬೇಂದ್ರೆಯವರು

"ಹತ್ತಿ ಬಿತ್ತಿ ಬೆಳೆಕೊಂಡೆವು ಹಾಳು
ತಿನ್ನಲು ದೊರೆಯದು ತುಸು ಕಡಿಕಾಳು"

ಎಂದು ಬರೆದದ್ದು. ಜೊತೆಗೆ ಭೂಮಿಯಿಂದ ಕಂದಾಯ ವಸೂಲಿ ಮಾಡಲು ಜಮೀನ್ದಾರಿ ಮುಂತಾದ ಪದ್ಧತಿಗಳನ್ನು ಜಾರಿಗೆ ತಂದು ಕಂದಾಯಗಳನ್ನು ಹೆಚ್ಚಿಸಿದರು. ಸಾಲದ ಹೊರೆಯೂ ಹೆಚ್ಚಾಗಿ ಭೂಮಿ

ವ್ಯಾಪಾರಿಗಳ ವಶವಾಯಿತು.

ಸೃಷ್ಟಿಯಿಲ್ಲದ ನಾಶ

ಕೈಗಾರಿಕಾ ಕ್ರಾಂತಿಗಳಾದ ದೇಶಗಳಲ್ಲಿ ಕುಶಲಕರ್ಮಿಗಳ ಉದ್ಯೋಗ ನಷ್ಟವಾದಾಗ ಕೃಷಿಯಲ್ಲಿ ಜನರು ಹೆಚ್ಚಾದಾಗ ಅವರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ದೊರೆಯಿತು. ಆದರೆ ಭಾರತದಲ್ಲಿ ಇಂತಹ ಯಾವ ಕೈಗಾರಿಕೆಗಳೂ ಸ್ಥಾಪನೆಯಾಗದಂತೆ ತಡೆದರು. ಭಾರತದಿಂದ ವಸ್ತುಗಳನ್ನು ಸಾಗಿಸುವುದಕ್ಕೆ ಹಾಗೂ ಭಾರತಕ್ಕೆ ವಸ್ತುಗಳನ್ನು ತಂದು ಮಾರುವುದಕ್ಕೆ ಸಾವಿರಾರು ಕಿ.ಮಿ. ರೈಲು ಮಾರ್ಗಗಳನ್ನು ಸ್ಥಾಪಿಸಿದರು. ಈ ರೈಲ್ವೆ ಮಾರ್ಗಗಳಿಗೆ ಕಬ್ಬಿಣ ತಯಾರು ಮಾಡಲು, ರೈಲ್ವೆ ಇಂಜಿನ್ ತಯಾರು ಮಾಡಲು ಬೇಕಾದ ಕೈಗಾರಿಕೆಗಳನ್ನು ಸ್ಥಾಪಿಸಲಿಲ್ಲ. ಮಾತ್ರವಲ್ಲ ತಮ್ಮ ದೇಶಗಳಿಂದಲೇ ಅಥವಾ ಇತರ ಮಿತ್ರ ದೇಶಗಳಿಂದಲೇ ಅವನ್ನು ಆಮದು ಮಾಡಲು ಒತ್ತಾಯಿಸಿದರು. ಹೀಗಾಗಿ ಕೈಗಾರಿಕೆಗಳು ಬೆಳೆಯುವುದಕ್ಕೆ ಬದಲಾಗಿ ರೈಲು ಮಾರ್ಗಗಳನ್ನು ಸ್ಥಾಪಿಸಲು ವೆಚ್ಚ ಮಾಡಿದ ಬಂಡವಾಳದ ಹೊರೆಯನ್ನು ಭಾರತದ ಜನತೆ ಹೊರಬೇಕಾಯಿತು.

ಹೀಗೆ ಭಾರತದಿಂದ ಮಾತ್ರವಲ್ಲ ಇಡೀ ವಿಶ್ವದಿಂದ ಲೂಟಿ ಮಾಡಿದರು. ಲ್ಯಾಟಿನ್ ಅಮೆರಿಕಾದಿಂದ ಸ್ಪೇನ್ ಮಾಡಿದ ಲೂಟಿ, ಇಂಡೋನೇಶ್ಯಾದಲ್ಲಿ ಪೋರ್ಚುಗೀಸರು, ಡಚ್ಚರು ಮಾಡಿದ ಲೂಟಿ, ಫ್ರೆಂಚರು ಆಫ್ರಿಕಾದಲ್ಲಿ ಗುಲಾಮರ ವ್ಯಾಪಾರದಿಂದ ಗಳಿಸಿದ ಅಮಾನವೀಯ ದುರ್ಲಾಭಗಳು ಭಾರತದ ಲೂಟಿಯ ಜೊತೆಗೆ ಸೇರುತ್ತವೆ. ಕೇವಲ ಭಾರತದಿಂದ 19ನೇ ಶತಮಾನದ ವೇಳೆಗಾಗಲೇ 50 ಕೋಟಿಯಿಂದ 1000 ಕೋಟಿ ಪೌಂಡ್‌ಗಳಷ್ಟು ಲಾಭ ಪಡೆದಿದ್ದರೆ, ವಿಶ್ವದೆಲ್ಲೆಡೆಯಿಂದ 1800 ರ ವೇಳೆಗೆ 100 ಕೋಟಿ ಪೌಂಡ್‌ಗಳಿಗಿಂತ ಹೆಚ್ಚು ಲೂಟಿ ಮಾಡಲಾಗಿತ್ತು. ಇದರ ಬೆಲೆ ಯುರೋಪಿನಲ್ಲಿದ್ದ ಎಲ್ಲಾ ಆಧುನಿಕ ಕೈಗಾರಿಕೆಗಳ(ಆವಿ ಯಂತ್ರಗಳಿಂದ ನಡೆಯುತ್ತಿದ್ದವು) ಮೇಲೆ ಹೂಡಿದ್ದ ಬಂಡವಾಳಕ್ಕಿಂತ ಹೆಚ್ಚಾಗಿತ್ತು. ಕೇವಲ ಭಾರತ ಮತ್ತು ವೆಸ್ಟ್ ಇಂಡೀಸ್ ದ್ವೀಪಗಳಿಂದ ಬರುತ್ತಿದ್ದುದೇ ಬ್ರಿಟನ್‌ನಲ್ಲಿ ಹೂಡಲಾದ ಬಂಡವಾಳದ ಶೇ 70 ಕ್ಕಿಂತ ಹೆಚ್ಚಾಗಿತ್ತು.

ಹೀಗೆ ವಸಾಹತುಗಳು ಬಡವಾಗಿ ಬ್ರಿಟನ್ ಮತ್ತಿತರ ಯುರೋಪಿನ ದೇಶಗಳ ಕೈಗಾರಿಕಾ ಕ್ರಾಂತಿಗೆ ಬಂಡವಾಳವನ್ನು ಒದಗಿಸಿದವು. ಆ ಕೈಗಾರಿಕೆಗಳಲ್ಲಿ ತಯಾರಾದ ವಸ್ತುಗಳಿಗೆ ಮಾರುಕಟ್ಟೆಯನ್ನೊದಗಿಸಿದವು.

ಈ ಲಾಭಗಳನ್ನು ನೋಡಿ ಯುರೋಪಿನ ಸಾಮ್ರಾಜ್ಯಶಾಹಿ ದೇಶಗಳು ವಿಶ್ವಾದ್ಯಂತ ಆಕ್ರಮಣ ಮಾಡಲು ತರಾತುರಿ ಮಾಡಿದವು. 19ನೇ ಶತಮಾನದ ಅಂತ್ಯದ ವೇಳೆಗೆ ಇಡೀ ವಿಶ್ವವಸಾಹತುಗಳಾಗಿ ಬಿಟ್ಟಿತ್ತು. ನೇರವಾಗಿ ಆಕ್ರಮಣವಾಗದ ಚೀನಾ, ಇರಾನ್, ಥೈಲಾಂಡ್ ಮೊದಲಾದ ದೇಶಗಳು, ಸ್ಪೇನಿನ ಆಕ್ರಮಣದಿಂದ 1830 ರ ದಶಕದಲ್ಲಿಯೇ ಬಿಡಿಸಿಕೊಂಡ ಲ್ಯಾಟಿನ್ ಅಮೆರಿಕದ ದೇಶಗಳೂ ಹೆಸರಿಗೆ ಸ್ವತಂತ್ರವಾದರೂ ಸಾಮ್ರಾಜ್ಯಶಾಹಿ ದೇಶಗಳ ವ್ಯಾಪಾರಿ ಆಕ್ರಮಣಕ್ಕೆ "ರಕ್ಷಣೆ"ಗೆ ಒಳಗಾಗಿದ್ದವು. ಹೀಗೆ ವಿಶ್ವದ ಶೋಷಣೆ ನಡೆಯಿತು. ಇಂದೂ ಅದು ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆ ಹಾಗೂ ಅಂತರರಾಷ್ಟ್ರೀಯ ಹಣಕಾಸು ನಿಧಿಯ ನಿಯಂತ್ರಣದಲ್ಲಿ ಆರಂಭವಾಗಿವೆ. ❍

ಸೆಸಿಲ್ ರ್ಹೋಡ್ಸ್ ಹೇಳಿದ್ದು

ಸೆಸಿಲ್ ರ್ಹೋಡ್ಸ್ ಇಂಗ್ಲೆಂಡಿನ ಹಣಕಾಸು ಬಂಡವಾಳದ ಒಡೆಯರಲ್ಲೊಬ್ಬ. ಆಫ್ರಿಕಾವನ್ನು ಬ್ರಿಟಿಷ್ ವಸಾಹತುವನ್ನಾಗಿ ಮಾಡಲು ಶ್ರಮಿಸಿದವನು. ಆತನ ಹೆಸರಿನಲ್ಲಿಯೇ ರೋಡಿಸಿಯಾ ಎಂದು ಕರೆಯಲ್ಪಟ್ಟ ದೇಶ ಇಂದು ಜಿಂಬಾಬ್ವೆ ಎಂಬ ಮೂಲ ಹೆಸರಿನೊಂದಿಗೆ ಸ್ವತಂತ್ರ ದೇಶವಾಗಿದೆ. ಅವನು ಆಫ್ರಿಕಾವನ್ನೆಲ್ಲಾ ತನ್ನ ಕಾಲತುಳಿದಲ್ಲಿ ನುಜ್ಜುಗುಜ್ಜು ಮಾಡುತ್ತಿರುವಾಗ, ಲಕ್ಷಾಂತರ ಕಪ್ಪು ಜನರ ರಕ್ತ ಹರಿಸುತ್ತಿರುವಾಗ ಅದನ್ನು ಸಮರ್ಥಿಸಿಕೊಳ್ಳಲು ಮಾಡಿದ ವಾದ ಹೀಗಿದೆ-



"ನಾನು ಲಂಡನ್ನಿನ ಪೂರ್ವಭಾಗದಲ್ಲಿ (ಬಡವರು ವಾಸಿಸುತ್ತಿದ್ದ ಜಾಗ) ನಡೆದ ನಿರುದ್ಯೋಗಿಗಳ ಸಭೆಯೊಂದಕ್ಕೆ ಹೋಗಿದೆ. ಅಲ್ಲಿ ಮಾಡಲಾದ ಭೀಕರ ಭಾಷಣಗಳನ್ನು ಕೇಳಿದೆ. ಅನ್ನ, ಅನ್ನ ಎಂಬ ಕೂಗು ಅದರಲ್ಲಿ ಪ್ರತಿಧ್ವನಿಸಿತು. ಆಗ ನನಗೆ ಸಾಮ್ರಾಜ್ಯಶಾಹಿಯ ಪ್ರಾಮುಖ್ಯತೆಯ ಬಗ್ಗೆ ಹೆಚ್ಚು ಹೆಚ್ಚು ಮನವರಿಕೆಯಾಯಿತು. ನಿರುದ್ಯೋಗದ ಸಾಮಾಜಿಕ ಸಮಸ್ಯೆಗೆ ನನ್ನ ನೆಚ್ಚಿನ ಪರಿಹಾರವೆಂದರೆ - ಬ್ರಿಟನ್ನಿನ ನಾಲ್ಕು ಕೋಟಿ ನಿವಾಸಿಗಳನ್ನು ಒಂದು ಆಂತರಿಕ ಯುದ್ಧದಿಂದ(ಹಸಿವಿನ ನಿರುದ್ಯೋಗದ ಯುದ್ಧ) ರಕ್ಷಿಸಬೇಕಾದರೆ ನಾವು ಇಲ್ಲಿನ ಫ್ಯಾಕ್ಟರಿ, ಗಣಿಗಳಲ್ಲಿ ಉತ್ಪಾದಿಸುವ ವಸ್ತುಗಳಿಗೆ ಹೊಸ ಮಾರುಕಟ್ಟೆಯನ್ನು ಒದಗಿಸಲು ಹೆಚ್ಚಾದ ಜನರನ್ನು ಹೊಸ ದೇಶಗಳಲ್ಲಿ ನೆಲೆಸುವಂತೆ ಮಾಡಲು ಹೊಸ ದೇಶಗಳನ್ನು (ನೆಲವನ್ನು) ಆಕ್ರಮಿಸಿಕೊಳ್ಳಬೇಕು. ಸಾಮ್ರಾಜ್ಯವೆಂದರೆ ಅದು ಅನ್ನದ ಪ್ರಶ್ನೆ. ನೀವು ಅಂತರ್ಯುದ್ಧವನ್ನು ತಪ್ಪಿಸಬೇಕೆಂದರೆ ಸಾಮ್ರಾಜ್ಯಶಾಹಿಗಳಾಗಬೇಕು"

ಹೀಗೆ ರ್ಹೋಡ್ಸ್ ಅಂದು ಹೇಳಿದ್ದು ಸಾಮ್ರಾಜ್ಯಶಾಹಿಗಳಿಗೆ ಇಂದೂ ಕೂಡ ಮಾನ್ಯವಾಗಿದೆ. ಇಂದೂ ಕೂಡ ಅವರ ದೇಶಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗವನ್ನು ಭಾರತದಂತಹ ಬಡ ದೇಶಗಳಿಗೆ ವರ್ಗಾಯಿಸಲು 'ಮುಕ್ತ ವ್ಯಾಪಾರ'ದ ಒತ್ತಾಯ ಮಾಡಲಾಗುತ್ತಿದೆ.

ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ:

ರಾಷ್ಟ್ರೀಯ ಪ್ರಭುತ್ವದ ಪಾತ್ರ

ಎಸ್.ವೈ.ಗುರುಶಾಂತ್

> ಈ ಜಾಗತೀಕರಣವನ್ನು ಭಾವುಕತೆಯಿಂದ ಸ್ವೀಕರಿಸುವ ಕಾಲವಂತೂ ಇದಲ್ಲ. ಯಾರು ಏಷ್ಟೇ ಬೊಬ್ಬೆ ಹೊಡೆದರೂ ಇದರ ಹೂರಣ, ಹುನ್ನಾರಗಳು ಬಯಲಾಗಿವೆ. ಸ್ವತಃ ಭಾರತ, ಮತ್ತಿತರೆ ದೇಶಗಳ ಅನುಭವ ಕಣ್ಣೆದುರೇ ಇದೆ. ಸುಲಿಗೆಯ ತನ್ನ ಕಬಂಧ ಬಾಹುಗಳ ವಿಸ್ತರಣೆಗಾಗಿಯೇ ಜಾಗತೀಕರಣವನ್ನು ಸಾಮ್ರಾಜ್ಯಶಾಹಿಯು ರೂಪಿಸಿದೆ. ಅಂದರೆ ತನ್ನ ಬಂಡವಾಳಶಾಹಿಯ ಸುಲಿಗೆಯನ್ನು ಜಾಗತಿಕವಾಗಿ ಹರಡಲು ಜಾಗತೀಕರಣವನ್ನು ಬಳಸುತ್ತಿದೆ.

ಸ್ವಾತಂತ್ರ್ಯದ ನೆನಪು ಹಲವು ಭಾವನೆಗಳನ್ನು ಚಿಮ್ಮಿಸುತ್ತದೆ. ಬ್ರಿಟಿಶ್ ವಸಾಹತುಶಾಹಿ ವಿರುದ್ಧ ಭಾರತದ ಜನತೆ ನಡೆಸಿದ ತ್ಯಾಗ ಬಲಿದಾನದ ಮಹಾಸಮರ. ನಂತರ 53 ವರ್ಷಗಳಲ್ಲಿ ದೇಶ ಸಾಗಿಬಂದ ಹಾದಿ - ಈಗ, ಗಳಿಸಿದ ಸ್ವಾತಂತ್ರ್ಯ ಉಳಿಸಿಕೊಳ್ಳಲಾಗುವುದೇ? ಭಾರತ ಒಂದು ಬಲಿಷ್ಟ ಸ್ವತಂತ್ರ ಸಾರ್ವಭೌಮತೆ, ಸ್ವಾವಲಂಬನೆಯ ರಾಷ್ಟ್ರವಾಗಿ ಉಳಿಯಬಲ್ಲುದೇ? ಎಂಬ ಆತಂಕಿತ ಪ್ರಶ್ನೆಗಳು.

ಇದು ಜಾಗತೀಕರಣದ ಯುಗ. ಇಡೀ ಜಗತ್ತೇ ಒಂದಾಗುತ್ತಿದೆ. ಇಲ್ಲಿ ಜಗತ್ತೇ ಒಂದು ಹಳ್ಳಿ. ಇನ್ನೇತಕ್ಕೆ ದೇಶಗಳು, ಗಡಿಗಳೆಂಬ ಅಡ್ಡಗೋಡೆ? ಆ ದೇಶಗಳೊಳಗೇಕೆ ಸರಕಾರಗಳು, ಆಡಳಿತ-ಪ್ರಭುತ್ವ. ಹೇಗೋ ಇದ್ದಾರಲ್ಲ ಜಿ-9 ಎಂಬ ಶ್ರೀಮಂತ ಹಿರಿಯಣ್ಣಗಳು, ಅದರ ದಂಡನಾಯಕ ಅಮೆರಿಕ ಅವರಿಗೆ ಎಲ್ಲಾ ಉಸ್ತುವಾರಿ ವಹಿಸಿದರೆ ಆಗದೇ? ಎಂದು ಹೇಳುವವರು ಜಾಗತೀಕರಣ ಆರಾಧಕರು. 'ಜಾಗತೀಕರಣದ ಬಗ್ಗೆ ಮಥನ ಮಾಡೋಣ. ಆದರೆ ಈ ದೇಶ, ರಾಷ್ಟ್ರ-ಆಡಳಿತ, ಗಡಿಗಳು ಬಂಡವಾಳಗಾರರ ಮಾರುಕಟ್ಟೆ ಹಿತಗಳಿಗಾಗಿಯೇ ಇರುವಂಥಹವು. ಇದು ಪುಡಿಗಟ್ಟಿದರಷ್ಟೆ ಆಳುವವರ ಶಕ್ತಿ ಕುಂದುತ್ತದೆ. ಕ್ರಾಂತಿ ಸುಲಭವಾಗಿ ಬಿಡುತ್ತದೆ. ಎಂದು ಕ್ರಾಂತಿಯ ಅಣಿ ಮುತ್ತು ಉದುರಿಸುವ ಸುರುಸುರು ಬಾಣ ಬಿರುಸಿನ ನಕ್ಸಲೀಯ ಕ್ರಾಂತಿಕಾರರು! "ಉತ್ತರಾಂಚಲ ಆಗಲಿ, ಝಾರ್‌ಖಂಡ್ ರಚನೆಯಾಗಲಿ ಬಿಡಿ, ಪಂಜಾಬ್‌ಗೂ ಅಂಥದ್ದೇನನ್ನಾದರೂ ಮಾಡಿ, ರಚನೆಗೆ ನಮ್ಮ ಬೆಂಬಲ, ಏನು ಮಾಡೋಕಾಗುತ್ತೋ ಹೇಳಿ, ಅದು ಜನರ ಆಶೋತ್ತರ. ಅದಕ್ಕೆ ಮನ್ನಣೆ'" ಎಂದು ಚಿಕ್ಕ ರಾಜ್ಯಗಳ ನಿರ್ಮಾಣವನ್ನು ಚೊಕ್ಕವಾಗಿ ಬೆಂಬಲಿಸಿ, ಸಮರ್ಥಿಸುವ ಕೆಲವು ಕಮ್ಯುನಿಸ್ಟ್ ಧಾರಿಗಳು.....

ತಣಿಯದ ಸುಲಿಗೆಯ ದಾಹ

ಈ ನಡುವೆ ಮತ್ತೆ ಮತ್ತೆ ಬರುವ ಪ್ರಶ್ನೆಗಳು..ಈ ಜಾಗತೀಕರಣದ ಆಧುನಿಕತೆ ಬೇಡವೇ? ಭಾರತದಂತಹ ಮೂರನೇ ಜಗತ್ತಿನ ರಾಷ್ಟ್ರಗಳ ಪ್ರಭುತ್ವ - ಅದರ ಆಡಳಿತ ಸ್ವಾಯತ್ತತೆ, ಸಾರ್ವಭೌಮತೆ, ಗಡಿಗಳು ಇರಬೇಡವೇ? ಇಂಥ ದೇಶಗಳ ರಾಷ್ಟ್ರಪ್ರಭುತ್ವ 'ಜಾಗತೀಕರಣ ಧಾಳಿಗಳನ್ನು ತಡೆಯಲು ಸಾಧ್ಯವೇ? ಸಮರ್ಥವೇ? ಈ ದೇಶಗಳು ಅಸ್ತಿತ್ವದಲ್ಲಿ ಇರಬೇಕೆ ಬೇಡವೇ?

ಈಗಾಗಲೇ ಅಮೆರಿಕದಂತಹ, ಸಾಮ್ರಾಜ್ಯಶಾಹಿಯ, ಬಹುರಾಷ್ಟ್ರೀಯ ಕಂಪನಿಗಳು ಹಲವಾರು ದೇಶಗಳನ್ನು ಅಪೋಶನ ಮಾಡಿ, ಇನ್ನೂ ತಣಿಯದ ದಾಹಕ್ಕೆ ಅನೇಕ ಅಭಿವೃದ್ಧಿಶೀಲ, ಮೂರನೇ ಜಗತ್ತಿನ ರಾಷ್ಟ್ರಗಳನ್ನು ನುಂಗಲು ಹೊರಟಿರುವ ಹಾದಿಯೇ ಇದು. ಎಲ್ಲಾ ಕಡೆಗೂ 'ನೆರವು ನೀಡುವ' ಮಹಾ 'ಸಂಕಷ್ಟಹರ'ರಾಗಿ ಹಣದ ಚೀಲ ಹಿಡಿದು ತಿರುಗುವ ಐಎಂಎಫ್ -ವಿಶ್ವಬ್ಯಾಂಕ್‌ಗಳು ಇದೇ ಸಾಮ್ರಾಜ್ಯಶಾಹಿಯ ಸೂತ್ರದಾರ, ನಾಯಕ.

ಸೋವಿಯತ್ ಒಕ್ಕೂಟ ಹಾಗೂ ಮತ್ತಿತರೆ ಸಮಾಜವಾದಿ ವ್ಯವಸ್ಥೆ ಪತನವಾದ ನಂತರ 'ಯಾರಿಹರು ಎನ್ನ ಸಮಾನರು?' ಎಂದೆಲ್ಲಾ ಹೂಂಕರಿಸಿದ್ದ ಬಂಡವಾಳಶಾಹಿ ವ್ಯವಸ್ಥೆ ತಾನು ಎದುರಿಸುತ್ತಿರುವ ಬಿಕ್ಕಟ್ಟಿನಿಂದ ಪಾರಾಗಲು ಸಾಧ್ಯವೇ ಆಗಲಿಲ್ಲ. ಸ್ವತಹ ಐಎಂಎಫ್ ವ್ಯವಸ್ಥಾಪಕ ನಿರ್ದೇಶಕ ಮೈಕೆಲ್ ಕಾಮ್‌ಡೆಸ್ ಹೇಳುವಂತೆ "ಇದು ದೇಶವೊಂದರ ಬಿಕ್ಕಟ್ಟಲ್ಲ. ವ್ಯವಸ್ಥೆಯೇ ಬಿಕ್ಕಟ್ಟಿನಲ್ಲಿದೆ......"

ಈ ಬಿಕ್ಕಟ್ಟಿನಿಂದ ಪಾರಾಗಲು ಸಾಮ್ರಾಜ್ಯಶಾಹಿಯು ಅನ್ಯ ದೇಶಗಳನ್ನೇ ಬಲಿತೆಗೆದುಕೊಳ್ಳಲು ಹವಣಿಸುತ್ತಿದೆ. ಈ ದಶಕದಲ್ಲಿ ಭಾರತದಂತಹ ಅನೇಕ ಅಭಿವೃದ್ಧಿಶೀಲ ದೇಶಗಳಲ್ಲಿ ತನ್ನ ನೀತಿಗಳನ್ನು ಜಾರಿಗೊಳಿಸಲು ಅನೇಕ ಕಸರತ್ತು ಮಾಡುತ್ತಿದೆ. ವಿವಿಧ ರಾಷ್ಟ್ರಗಳ ಪ್ರಭುತ್ವಗಳ ಮೂಲಕ ಜಾರಿಯಾಗುವಂತೆ ನೋಡಿಕೊಳ್ಳುತ್ತಿದೆ. ಕೃಷಿ, ಕೈಗಾರಿಕೆ, ತಂತ್ರಜ್ಞಾನ, ವಿಜ್ಞಾನ, ಶೋಧನೆ, ಸಂಪನ್ಮೂಲಗಳ ರಂಗಗಳಲ್ಲಿ



ಆಳುವವರೊಂದಿಗೆ ಜಟಾಪಟಿ ಹೋರಾಟ

ದೇಶದ ಅಭಿವೃದ್ಧಿ ಯೋಜನೆಗಳಲ್ಲಿ ತನ್ನ ಒಂದು ಕೈಯಾಟ ಆಡುತ್ತಿದೆ. ವಿಪರೀತ ಒತ್ತಡ ಹೇರುತ್ತಿದೆ. ದೇಶಗಳ ಸಂವಿಧಾನಗಳನ್ನೇ ತಿದ್ದುಪಡಿ ಮಾಡಿ ತಮ್ಮ ಜಾಗತಿಕ ಬಂಡವಾಳ ಮುಕ್ತವಾಗಿ ಸಂಚರಿಸಿ ಮೆರೆಯಲು ಬಯಸಿದೆ. ಆದರೆ ತನ್ನ ತಾಳಕ್ಕೆ ತಕ್ಕಂತೆ ಎಲ್ಲವನ್ನೂ ಕುಣಿಸಲು, ತನಗನ್ನಿಸಿದ್ದೆಲ್ಲಾ ಮಾಡಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಎಷ್ಟೋ ಕಡೆ(ಏಶಿಯಾ, ಮಲೇಶಿಯಾ) ಸಾಮ್ರಾಜ್ಯಶಾಹಿ ಮುಗ್ಗರಿಸಿದೆ. ಮೂತಿ ಕೆತ್ತಿಸಿಕೊಂಡಿದೆ. ಕೆಲವೆಡೆ ಕಾಲು ತೆಗೆಯಬೇಕಾಗಿ ಬಂದಿದೆ. ತನ್ನ ಸುಲಿಗೆಯ ಸೂತ್ರಗಳನ್ನು ಕೈಬಿಡಬೇಕಾಗಿ ಬಂದಿದೆ. ಅಂದುಕೊಂಡಷ್ಟು ಸುಲಭದ ಹಾದಿ ಅದಕ್ಕಿಲ್ಲ ಎಂಬುದು ‘ಅದಕ್ಕಾಗಿ ಕಿತ್ತಾಟ, ತಳ್ಳಾಟ ನಡೆದಿದೆ.

ಈ ಜಾಗತಿಕ ಬಂಡವಾಳದ ‘ಅಶ್ವಮೇಧ’ ಯಾಗದ ಕುದರೆಯ ಖರಪುಟ ಕರ್ಕಶ ಧ್ವನಿ ಅಡಗಿಸಲು ಸಾಧ್ಯವಿಲ್ಲವೇ? ಇದನ್ನು ತಡೆಯಲಾಗದೆ? ಜಗತ್ತೇ ಒಂದು ಹಳ್ಳಿಯಂತೆ ಆಗುತ್ತಿರುವಾಗ, ಆ ಹಳ್ಳಿಗೆ ಒಬ್ಬ ಯಜಮಾನ, ಅವನ ಆಶ್ರಯದಲ್ಲಿ ನಾವೆಲ್ಲಾ ಬದುಕಿದರಾಯಿತೇ? ವಿಶ್ವಬಂಡವಾಳಗಾರ ಪ್ರಭುತ್ವದಡಿ ವಿಲೀನವಾದರೆ ಸಾಕು ಏನಿದ್ದರೂ ಊರೊಳಗಿನ ಕೇರಿಗಳಂತೆ ನಮ್ಮ ದೇಶಗಳಿದ್ದರೆ ಸಾಕೆ?

ವಿಶ್ವ ಬ್ಯಾಂಕಿನ ನೆಂಟಸ್ತಿಕೆ


ಹಿಂದೆ ಬ್ರಿಟಿಶ್, ಫ್ರಾನ್ಸ್ ಮುಂತಾದವರ ವಸಾಹತುವಾಗಿದ್ದು ಸ್ವತಂತ್ರಗೊಂಡ ದೇಶಗಳ, ಆಳುವವರು ತಮ್ಮದೇ ಆದ ರಾಜಕೀಯ ಸಾಮಾಜಿಕ ಬೆಳವಣಿಗೆಗೆ ಅಗತ್ಯವಾದ ಹಾದಿಯನ್ನು ಹಿಡಿದಿದ್ದರು. ಆದರೆ ಮತ್ತೆ ನವ ವಸಾಹತುಶಾಹಿ ತೆಕ್ಕೆಗೆ ಬೀಳತೊಡಗಿವೆ. 1980 ರ ದಶಕದ ಆರಂಭದಲ್ಲೇ ಭಾರತ ಐಎಂಎಫ್-ವಿಶ್ವಬ್ಯಾಂಕ್ ನ ನೆಂಟಸ್ತಿಕೆ ಬಯಸಿತು. 1984 ರ ನಂತರದಿಂದ ಬಿರುಸಿನಿಂದ ಅದರ ನಿರ್ದೇಶನಗಳ ಜಾರಿಗೆ ಇಳಿಯಿತು. ಸ್ವದೇಶಿವಾಲಾ ವಾಜಪೇಯಿ ಸರ್ಕಾರ ಕೇವಲ ಆರ್ಥಿಕ ಮಾತ್ರವಲ್ಲದೇ ದೇಶದ ರಾಜಕೀಯ, ಆಡಳಿತ, ಮಿಲಿಟರಿ ಕ್ಷೇತ್ರಗಳಲ್ಲಿ ಪೂರ್ಣ ಸಹಯೋಗ ಬಯಸಿದೆ, ಸ್ವಾವಲಂಬಿ ನಿಲುಮೆ ಬಿಟ್ಟು ಅಮೆರಿಕಾದತ್ತ ವಾಲುತ್ತಿದೆ. ಜೂನಿಯರ್ ಪಾರ್ಟನರ್ ಆಗಲು ಹವಣಿಸಿದೆ. ಹಾಗೆ ನೋಡಿದರೆ ಈ ಜಾಗತೀಕರಣದ ನೀತಿಗಳು ಜಾರಿಯಾಗುತ್ತಿರುವುದು ರಾಷ್ಟ್ರದ ಪ್ರಭುತ್ವದ ಮೂಲಕ. ತಮ್ಮ ಆಳ್ವಿಕೆಯುದ್ದಕ್ಕೂ ಭೂಮಾಲೀಕ, ಬಂಡವಾಳಶಾಹಿ ಆರ್ಥಿಕ ನೀತಿ ಅನುಸರಿಸಿದ ಈ ಪ್ರಭುತ್ವಗಳು ತಾವೇ ಸೃಷ್ಟಿಸಿಕೊಂಡ ಬಿಕ್ಕಟ್ಟುಗಳಿಂದ ಪಾರಾಗಲು ಐಎಂಎಫ್-ವಿಶ್ವಬ್ಯಾಂಕ್ ಮೊರೆ ಹೊಗುತ್ತಿವೆ, ಅವಲಂಬಿಸುತ್ತಿವೆ. ಹಾಗೆ ನೋಡಿದರೆ ಈ ರಾಷ್ಟ್ರೀಯ ಪ್ರಭುತ್ವಗಳ ಹೊಸ ಹಾದಿ, ಪರ್ಯಾಯ ಶೋಧನೆಯನ್ನು ಕೈಬಿಟ್ಟಿವೆ. ಯಾವ ಸರ್ಕಾರಗಳು ಬದಲಾದರೂ, ಬೇರೆ ಪಕ್ಷಗಳು ಬಂದರೂ ಅಬಾಧಿತವಾಗಿ ತಮ್ಮ ಅಭಿವೃದ್ಧಿಗಾಗಿ ಈ ಎಲ್.ಪಿ.ಜಿ. (ಉದಾರೀಕರಣ, ಖಾಸಗೀಕರಣ, ಜಾಗತೀಕರಣ) ಜಾರಿಯಾಗುತ್ತಿದೆ. ಹೀಗೆ ಸಾಮ್ರಾಜ್ಯಶಾಹಿಯೂ ಸಹ ಹೆಚ್ಚು ಹೆಚ್ಚು ಒಳನುಗ್ಗುವಿಕೆಗಾಗಿ ಒತ್ತಡ ಹೇರುತ್ತಿವೆ. ಹೆಚ್ಚು ಹೆಚ್ಚು ತನ್ನ ಜಾಗತಿಕ ಬಂಡವಾಳದ ಊಹಾತ್ಮಕ, ಲಾಭಕೋರತನದಿಂದಾಗಿ ಲೂಟಿಯನ್ನು ಬಯಸುತ್ತಿದೆ. **ವಿದೇಶಿ ಬಂಡವಾಳ ಬೆಳಗುತಿದೆ ನೋಡಿ ಎಂದೆಲ್ಲಾ ಬಣ್ಣಿಸುತ್ತಿದ್ದ ಏಶಿಯಾ, ಜಪಾನ್ ಈ ಹೊರೆಯಿಂದ ತತ್ತರಿಸಿ ಆರ್ಥಿಕತೆ ಕುಸಿದೇ ಹೋಗುವ ಹಂತ ತಲುಪಿತ್ತು. ಈ ಸ್ಥಿತಿಯ ಸ್ವಲ್ಪ ಮೊದಲು ಅನಿರ್ಬಂಧಿತವಾಗಿ ಬಂಡವಾಳ ಕ್ಷೇತ್ರಗಳಲ್ಲಿಯೂ ಹರಿದಾಡಲು ಸಂವಿಧಾನವನ್ನೇ ಬದಲಾಯಿಸಬೇಕೆಂದು ಇಲ್ಲವಾದರೆ ಐಎಂಎಫ್ ಸದಸ್ಯತ್ವ ಅಸಾಧ್ಯವೆಂದು ಏಶಿಯಾದ ಮೇಲೆ ಪಟ್ಟು ಹಿಡಿದಿತ್ತು.** ಇಂತಹದ್ದೇ ಒತ್ತಡವನ್ನು ಒಪ್ಪದ ಮಲೇಶಿಯಾದ ನಿಲುವನ್ನು ಐಎಂಎಫ್ ಉಗ್ರವಾಗಿ ಖಂಡಿಸಿತು. ಇಷ್ಟನ್ನು ಸಹಿಸದ ಎಂಎಐ(ಹೂಡಿಕೆಯ ಮೇಲಿನ ಬಹುಮುಖೀಯ ಒಪ್ಪಂದ-MAI) ಗೆ ಮುಕ್ತ ಅವಕಾಶ ಕೊಡಬೇಕು ಎಂದು ದಬಾಯಿಸುತ್ತಿದೆ. ಅಂದರೆ ಈ ಹಣಕಾಸು ಹೂಡಿಕೆ, ಅದರ ಹರಿದಾಟಕ್ಕೆ ಯಾವುದೇ ರಂಗಕ್ಕಾದರೂ ರಾಷ್ಟ್ರಗಳು ಆಡಳಿತ ಹಾಗೂ ಸರ್ಕಾರಗಳಿಗೆ ಒಂದಿನಿತೂ ಸಂಬಂಧವಿರುವುದಿಲ್ಲ. ಅದು ಗೂಳಿಯಂತೆ ಎಲ್ಲಿಬೇಕಾದರೂ ನುಗ್ಗಬಹುದು. ಏನನ್ನೂ ನುಂಗಬಹುದು. ಇಂತಹ ಅವಕಾಶಗಳನ್ನು ಅದು ಜಾಗತೀಕರಣದ ನಿಜ ಜಾರಿ ಎನ್ನುವುದು.

ಬೆಳೆಯುತ್ತಿರುವ ಪ್ರತಿರೋಧ

ಇದಕ್ಕೆಲ್ಲಾ ಪ್ರತಿರೋಧ ಇಲ್ಲವೆಂದಲ್ಲ, ಇದೆ. **ಯಾವ ರಾಷ್ಟ್ರಗಳು ತಮ್ಮ ಆಡಳಿತದ ಮೂಲಕವೇ ಜಾರಿಗೊಳಿಸುತ್ತಿವೆಯೋ ಅದರ ಮೂಲಕವೇ ಪ್ರತಿರೋಧ ಒಡ್ಡಬಹುದು. ಒಡ್ಡಲು ಸಾಧ್ಯವಿದೆ. ಇಂತಹ ಪ್ರತಿರೋಧಕ್ಕೆ ರಾಷ್ಟ್ರದ ಪ್ರಭುತ್ವ ಒಂದು ಪರಿಣಾಮಕಾರಿ**

ಜಪಾನ್,ದ.ಕೊರಿಯಗಳಲ್ಲಿಯೂ ಸ್ಫೋಟಗೊಂಡ ಕಾರ್ಮಿಕ ವರ್ಗದ ಪ್ರತಿರೋಧ





ಕೃಷಿರಂಗದ ವಿನಾಶಕ್ಕೆ ಎದುರಾಗಿ

ಆಯುಧ ಕೂಡ. ಆದರೆ ಆಳುವವರ ಮರ್ಜಿಗೆ ಇದನ್ನು ಬಿಟ್ಟು ಕೊಡಬೇಕಿಲ್ಲ, ಬಿಟ್ಟುಬಿಡಬೇಕಿಲ್ಲ. ಆಯಾ ದೇಶಗಳೊಂದಿಗೆ ದೇಶದ ಸ್ವಾಯತ್ತತೆ, ಸಾರ್ವಭೌಮತ್ವ ಮಾರುವ ನೀತಿಗಳ ವಿರುದ್ಧ ಜನತೆಯ ಪ್ರತಿರೋಧ ಬೆಳೆಯಬೇಕು, ವ್ಯಾಪಕಗೊಳ್ಳಬೇಕು. 1995 ರಲ್ಲಿ ಯುರೋಪಿನಲ್ಲಿ, ಫ್ರಾನ್ಸ್ ದೇಶದೊಳಗೆ ದುಡಿಯುವ ವರ್ಗ ಒಂದು ವಾರಗಳ ಸಾರ್ವತ್ರಿಕ ಮುಷ್ಕರವನ್ನು ನಡೆಸಿತು. ಏಶಿಯಾ ದೇಶದಲ್ಲಿ, ದಕ್ಷಿಣ ಕೋರಿಯಾದ ಸಮರಶೀಲ ಹೋರಾಟಗಳು ಚಿಮ್ಮಿದವು. ಭಾರತದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಹಲವಾರು ಅಖಿಲ ಭಾರತ ಮುಷ್ಕರಗಳು ನಡೆದಿವೆ. ಇವು ಪರಿಣಾಮ ಬೀರಿವೆ. ಭಾರತದ ಅನುಭವದಂತೆ ಈ ನೀತಿಗಳ ವಿರುದ್ಧ ನಡೆದ ದುಡಿಯುವ ವರ್ಗದ ಪ್ರತಿರೋಧದಿಂದಾಗಿ, ಆಳುವವರು ಅದೆಷ್ಟೇ ತೀವ್ರವಾಗಿ ಜಾರಿಗೆ ತಂದರೂ ಅಂದುಕೊಂಡಷ್ಟು ವೇಗದಲ್ಲಿ ಸಾಧ್ಯವಾಗಿಲ್ಲ. ಅದರ ವೇಗ ತಗ್ಗಿಸಲಾಗಿದೆ, ಕೆಲವೆಡೆ ತಡೆಯಲಾಗಿದೆ. 'ಬಂಡವಾಳದ ನಿಯಂತ್ರಣ'ದ ಮುಖ್ಯ ಪ್ರಶ್ನೆಯಲ್ಲಿ ಸ್ವತಂತ್ರ ನಿಲುವು ತಳೆದು ಇನ್ನೂ ಉಳಿಸಿಕೊಳ್ಳಲಾಗಿದೆ. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ **ಈ ನೀತಿಗಳ ವಿರುದ್ಧ ಹೋರಾಡಬಲ್ಲ ಶಕ್ತಿ ಇರುವುದು ಆಧುನಿಕ ಸಮಾಜದಲ್ಲಿ ದುಡಿಯುವ ವರ್ಗಕ್ಕೆ ಮಾತ್ರ. ಇಂತಹ ಹೋರಾಟಗಳ ಮೂಲಕ ಕಾರ್ಮಿಕ ವರ್ಗ ತನ್ನ ದೇಶದಲ್ಲಿಯೂ ಮುಂಚೂಣಿಯ ಪಾತ್ರ ವಹಿಸುತ್ತಾ, ಎಲ್ಲಾ ರೈತರ, ಕೃಷಿ ಕೂಲಿಕಾರ ಮುಂತಾದ ದುಡಿಯುವ ಜನ ಸಮೂಹಗಳನ್ನು ಒಂದುಗೂಡಿಸುತ್ತಾ ಅಂತಿಮವಾಗಿಯೂ ಪರಮಾಧಿಕಾರ ಗಳಿಸಬಲ್ಲದು. ತಾನೇ ಒಂದು ರಾಷ್ಟ್ರವಾಗಬಲ್ಲದು.** ಇದು ಜಗತ್ತಿನೆಲ್ಲೆಡೆ ಒಮ್ಮೆಗೆ ಹೋರಾಟ ನಡೆದು ಬಂಡವಾಳಶಾಹಿಯನ್ನು ಮಟ್ಟಹಾಕಿ, ಜಾಗತಿಕ ಕ್ರಾಂತಿ ನಡೆಸಬಹುದೆಂದೂ ಒಂದುದೇಶದಲ್ಲಿ ನಾವೇನು ಮಾಡಲು ಸಾಧ್ಯ ಎಂಬ ಹತಾಶೆಯ, ಶರಣಾಗತಿ ಮೂಲಕ ಸಾಮ್ರಾಜ್ಯಶಾಹಿ ಸುಲಿಗೆಯನ್ನು ತೀವ್ರಗೊಳಿಸಿ ಅದನ್ನೇ ಮುಂದುವರಿಸುವ ನಿಲುವಿಗೆ ಭಿನ್ನವಾಗಿದೆ. **ದೇಶದೊಳಗಣ ನಡೆಯುವ ಕ್ರಾಂತಿಕಾರಿ ಹೋರಾಟಗಳು ಮತ್ತು ರಾಷ್ಟ್ರದ ಪ್ರಭುತ್ವ ಕಾರ್ಮಿಕ ವರ್ಗದ ನೇತೃತ್ವದಲ್ಲಿ ರಚನೆಯಾದಾಗ ಜಾಗತಿಕವಾಗಿ ಸಾಮ್ರಾಜ್ಯಶಾಹಿಗೆ ಹೊಡೆತ ನೀಡಿದಂತೆ ಹಾಗೂ ಜಾಗತಿಕ ಕ್ರಾಂತಿಕಾರಿ ಪ್ರತಿಕ್ರಿಯೆ ಬಲಗೊಂಡು ವ್ಯಾಪಕವಾಗಲು ಸಹಾಯಕವಾಗುತ್ತದೆ.** ಜಾಗತಿಕ ಸಾಮ್ರಾಜ್ಯಶಾಹಿಗಳ ವೈರುಧ್ಯಗಳ ಹಿನ್ನೆಲೆಯಲ್ಲಿ ಯುರೋಪ್‌ನ ರಾಷ್ಟ್ರಗಳು ಪ್ರತಿರೋಧಿಸುವ ಸಂದರ್ಭವಿದೆ. ಅದು ಮೂರನೇ ಜಗತ್ತಿನ ರಾಷ್ಟ್ರಗಳಿಗೂ ಬಲ ತರುವುದು, ದೇಶದೊಳಗಿನ ಆಳುವವರೂ ಸಹ ಈ ನೀತಿಗಳಿಗೆ ಅಲ್ಪಪ್ರತಿರೋಧ ತೋರಿದರೂ, ಅದನ್ನೆಲ್ಲಾ ಒಂದು ವಿಶಾಲವೇದಿಕೆಗೆ ಕಾರ್ಮಿಕವರ್ಗ ಸೆಳೆಯಬೇಕು. ಭಾರತದಲ್ಲಿಯೂ, ಇಂತಹ ಪ್ರಕ್ರಿಯೆ ಬಲಗೊಳ್ಳಲು, ಜಾಗತೀಕರಣದ ವಿರುದ್ಧ ಪ್ರತಿರೋಧವನ್ನು ಒಡ್ಡುವಲ್ಲಿ ಕಮ್ಯುನಿಸ್ಟ್ ಹಾಗೂ ಇತರೆ ಎಡಪಕ್ಷಗಳ ಪಾತ್ರ ಗಮನಾರ್ಹ.


ದುಡಿಯುವ ವರ್ಗದ ಶಕ್ತಿ ಎಷ್ಟೇ ಇರಲಿ, ಸಂಘಟಿತ ಶಕ್ತಿ ಎಷ್ಟೆ ಇರಲಿ ಅಷ್ಟನ್ನು ಹೋರಾಟದಲ್ಲಿ ತೊಡಗಿಸುವುದು ಕಾರ್ಮಿಕವರ್ಗದ ನೇತೃತ್ವಕ್ಕೆ ಮುನ್ನೆಜ್ಜೆ ಎಂಬ ವಿಚಾರವನ್ನು ಮರೆಯಬಾರದು. ಈ ಸಂದರ್ಭದಲ್ಲಿ ಮೈತ್ರಿಕೂಟದ ಸ್ವರೂಪ ಹೇಗಿರಬೇಕು ಎಂಬುದು ಕ್ರಾಂತಿಕಾರಿ ಪಕ್ಷಕ್ಕೆ ಮಹತ್ವದ್ದಾಗಿದೆ.

ಜಾಗತೀಕರಣ-ಉದಾರೀಕರಣದ ನೀತಿಗಳು ಜಾರಿಯಾಗತೊಡಗಿದಂತೆ ಜನಸಮೂಹಗಳು ಭಾರಿ ಸಂಕಷ್ಟಕ್ಕೆ ಸಿಲುಕಿವೆ. ಅತೃಪ್ತಿಯೂ ಹೆಚ್ಚಿ ಪ್ರತಿಭಟನೆ ಸ್ಫೋಟಗೊಳ್ಳುತ್ತಿದೆ. ಅನೇಕ ಪಕ್ಷಗಳ ಸರ್ಕಾರಗಳು ಬದಲಾಗುತ್ತಿವೆ. ರಾಜಕೀಯ ಅಸ್ಥಿರತೆ ರೂಪದಲ್ಲಿ ಇದು ಕಂಡಿದೆ, ಕಾಡಿದೆ. ಈ ಸನ್ನಿವೇಶದಲ್ಲೇ ಜನಾಂಗೀಯವಾದ ಮತ್ತು ಧಾರ್ಮಿಕ ಸಂಘರ್ಷಗಳ ಉಲ್ಬಣದ ಅಪಾಯಕಾರಿ ತಿರುವುಗಳನ್ನು ಪಡೆಯುತ್ತಿದೆ. ರಾಷ್ಟ್ರೀಯತೆಯ ಸಮಸ್ಯೆಗಳು ಹುಟ್ಟಿವೆ.

ಸಂಕಷ್ಟದಲ್ಲಿ ಜನತೆ, ಪ್ರತಿಗಾಮಿಗಳ ಹೂಂಕಾರ

ಮೂರನೇಯ ಜಗತ್ತಿನ ರಾಷ್ಟ್ರಗಳಲ್ಲಿ ಈ ಪ್ರತಿಗಾಮಿ ಶಕ್ತಿಗಳು ಬೆಳೆಯುತ್ತಿವೆ. ಅಫಘಾನಿಸ್ತಾನದಲ್ಲಿ ತಾಲಿಬಾನ್, ಅಲ್ಜೀರಿಯಾ ದೇಶದಲ್ಲಿ ಹಾಗೆ ಇಸ್ಲಾಮಿಕ್ ದೇಶಗಳಲ್ಲಿ ಮತೀಯವಾದಿಗಳು, ಉಗ್ರಮೂಲಭೂತವಾದಿ ಶಕ್ತಿಗಳು ತಲೆ ಎತ್ತಿವೆ. ಭಾರತದಲ್ಲಿ ಹಿಂದೂ ಮತೀಯವಾದ

ಜಾಗತೀಕರಣದ ವೇಗಕ್ಕೆ ತಡೆಯೊಡ್ಡಿದ ಸಾರ್ವತ್ರಿಕ ಮುಷ್ಕರಗಳು .



ಹೂಂಕರಿಸಿದೆ. ದೇಶ ವಿಭಾಜಕ ಶಕ್ತಿಗಳು ಸಕ್ರಿಯವಾಗಿವೆ. ಇವೆಲ್ಲವುಗಳನ್ನು ಸಾಮ್ರಾಜ್ಯಶಾಹಿಯು ತನ್ನ ಜಾಗತಿಕ ಅಧಿಪತ್ಯದ ಕಾರ್ಯತಂತ್ರಕ್ಕೆ ಅನುಗುಣವಾಗಿ ಬಳಸುತ್ತಿದೆ. ಬೆಳೆಸುತ್ತಿದೆ. ಈ ಶಕ್ತಿಗಳನ್ನು ಜೊತೆಗಿರಿಸಿ ಕೊಂಡಿದೆ. ಆದ್ದರಿಂದ ರಾಷ್ಟ್ರೀಯ ದುಡಿಯುವ ವರ್ಗದ ಚಳುವಳಿಯು ಜನಾಂಗೀಯ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದು ಮುಖ್ಯ ಕರ್ತವ್ಯವಾಗಿದೆ. ಹಿಂದಿನ ಸೋವಿಯತ್ ಯೂನಿಯನ್, ಯುಗೋಸ್ಲಾವಿಯಾ ದೇಶಗಳಲ್ಲಿ ದಾರ್ಮಿಕ, ಜನಾಂಗೀಯವಾದದ ಅತ್ಯಂತ ದ್ವೇಷಪೂರಿತ ಸಂಘರ್ಷಗಳು ನಡೆದಿವೆ. ಬಂಡವಾಳದ ಆಡಳಿತದ ಮರೆಸಲು ಸಾಮ್ರಾಜ್ಯಶಾಹಿಯು ಇಂತಹ ಘರ್ಷಣೆಗಳಿಗಾಗಿ ಜನಾಂಗೀಯ, ಧಾರ್ಮಿಕ ಮತ್ತು ರಾಷ್ಟ್ರೀಯತೆಯನ್ನು ಬಳಸುತ್ತಲೇ ಇದೆ. ಹಲವು ರಾಷ್ಟ್ರಗಳನ್ನು ಒಡೆದಿದೆ. ಜೆಕ್ ಮತ್ತು ಸ್ಲಾವಿಕ್, ಯೋಗೋಸ್ಲಾವಿಯ, ಸೋವಿಯತ್ ರಶಿಯಾ, ಹೀಗೆ ದೇಶಗಳನ್ನು ಒಡೆಯಲಾಗಿದೆ. ರಾಷ್ಟ್ರದ ಪ್ರಭುತ್ವದ ಪಾತ್ರವನ್ನು ದುರ್ಬಲಗೊಳಿಸುವುದು ಇದರ ಉದ್ದೇಶ. ಚಿಕ್ಕ ರಾಜ್ಯಗಳ ನಿರ್ಮಾಣವೂ ಸಹ ಇದೇ ಗುರಿಯಲ್ಲಿರುವುದು.

ಜಾಗತಿಕ ಪ್ರಾಬಲ್ಯ, ಮಾರುಕಟ್ಟೆ ಹಿಡಿತಕ್ಕಾಗಿ ಬಂಡವಾಳಗಾರರ ನಡುವಿನ ಘರ್ಷಣೆಗಳು ಎರಡು ಮಹಾಯುದ್ಧಗಳನ್ನೇ ಹುಟ್ಟಿಹಾಕಿದೆ. ಬೂರ್ಷ್ವಾಗಳ ನೇತೃತ್ವವು ದೇಶ ದೇಶಗಳ ನಡುವಿನಲ್ಲಿಯೂ ದ್ವೇಷ-ಸ್ಪರ್ಧೆ ಹುಟ್ಟಿಸಿದೆ. ಆದರೆ ದುಡಿಯುವ ವರ್ಗವು ಎಲ್ಲೆಲ್ಲಿ ರಾಷ್ಟ್ರೀಯ ಪರಮಾಧಿಕಾರ ಪಡೆದಿದೆಯೊ ಅಲ್ಲಿ ಸೌಹಾರ್ದತೆ, ನೈಜ ಪ್ರಗತಿ ಸಾಧ್ಯವಾಗಿದೆ. ಛಿದ್ರಕಾರಿ ರಾಷ್ಟ್ರೀಯತೆಯನ್ನು ತೊಲಗಿಸಲಾಗಿದೆ. ಆದ್ದರಿಂದ ಈ ರಾಷ್ಟ್ರೀಯ ಪ್ರಭುತ್ವ ವರ್ಗ-ಹೋರಾಟ ಅಷ್ಟೇ ಅಗತ್ಯವಾಗಿದ್ದು, ಅಂತರಾಷ್ಟ್ರೀಯತೆ ಬೆಳೆಸಲು ಸಾಧ್ಯ.

ಆಳುವ ಸ್ಥಾನಕ್ಕೆ ಶ್ರಮಿಕವರ್ಗವು ಬಂದು ಆಡಳಿತ ಚುಕ್ಕಾಣಿ ಹಿಡಿಯಬೇಕು. ಆಳುವ ವರ್ಗವಾಗಬೇಕು. ಹಾಗೂ ಪ್ರಜಾಪ್ರಭುತ್ವದ ಸಮರವನ್ನು ಗೆಲ್ಲಬೇಕು. ಈ ಗೆಲುವಿಗಾಗಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಸಹ ಕಟ್ಟುವುದು ಅತ್ಯಗತ್ಯ. ಇಲ್ಲಿ ಜನಾಂಗೀಯ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವುದು ಈ ಚಳುವಳಿಯ ಭಾಗವಾಗಬೇಕು. ಇದಕ್ಕಾಗಿ ಸಿದ್ಧಾಂತ ಮತ್ತು ಪ್ರಯೋಗಶೀಲತೆ ಅಗತ್ಯವಾದುದು. ಜನಾಂಗೀಯ ಹಾಗೂ ರಾಷ್ಟ್ರೀಯತೆ ಸಮಸ್ಯೆಗಳನ್ನು ಪ್ರಜಾಸತ್ತಾತ್ಮಕವಾಗಿಯೇ ಪರಿಹರಿಸಬೇಕು. ಛಿದ್ರಕಾರಿ, ಪ್ರತ್ಯೇಕವಾಕವಾದವು ಸಣ್ಣದಿರಲಿ, ದೊಡ್ಡದಿರಲಿ ಕಾರ್ಮಿಕವರ್ಗವು ಅದನ್ನೆದುರಿಸಿ ಹೋರಾಡಬೇಕು. ಅಂದರೆ ಕಾರ್ಮಿಕವರ್ಗವೇ ಒಂದು ರಾಷ್ಟ್ರವಾಗಬೇಕು. ಇದು ಬೂರ್ಷ್ವಾಗಳ ಪದಕೋಶದಂತೆ ಅಲ್ಲ. ಆದ್ದರಿಂದ ಭೂಮಾಲೀಕ, ಬಂಡವಾಳಗಾರರ ಪ್ರಭುತ ಇರುವಾಗಲೂ ಸಹ ಕಾರ್ಮಿಕ ವರ್ಗವು ಸ್ವಾಯತ್ತತೆ, ಅಧಿಕಾರದ ಪ್ರಜಾಪ್ರಭುತ್ವೀಕರಣ, ಆಡಳಿತ ವಿಕೇಂದ್ರೀಕರಣದ ಸಲುವಾಗಿ ಹೋರಾಡುವುದು ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಮಹತ್ವ ಪಡೆದಿವೆ. ಆದ್ದರಿಂದ ಸಾಮ್ರಾಜ್ಯಶಾಹಿಗಳ ಆಕ್ರಮಣದ ಎದುರು ಸ್ವಾತಂತ್ರ್ಯ, ಸಾರ್ವಭೌಮತೆ ಉಳಿಸಲು ರಾಷ್ಟ್ರದ ಪ್ರಭುತ್ವದ ಉಳಿವು ಅಗತ್ಯ.

- ಪ್ರಕಾಶ್ ಕಾರಟ್‌ರವರ ಲೇಖನದ ಆಧಾರದಿಂದ.
Globalisation, The Nation state and Class struggle
'The Marxist' ಡಿ. 1998 ನಿಂದ

'ಸೂರ್ಯ ಮುಳುಗದ ಸಾಮ್ರಾಜ್ಯ'ಗಳ ಸೂರ್ಯ ಮುಳುಗಿದ್ದು



ಶರತ್‌ಚಂದ್ರ

ವಸಾಹತುಶಾಹಿ-ಸಾಮ್ರಾಜ್ಯಶಾಹಿಯನ್ನು ಕಿತ್ತೊಗೆದ ಹೋರಾಟ, ಸಮಾಜವಾದಿ ವ್ಯವಸ್ಥೆಯ ಸ್ಥಾಪನೆ-ಇಪ್ಪತ್ತನೇ ಶತಮಾನದ ಎರಡು ಮಹಾನ್ ಬೆಳವಣಿಗೆಗಳು. ಇವು ಮಾನವ ಸಮಾಜದ ಬೆಳವಣಿಗೆಯಲ್ಲಿ ಪ್ರಮುಖ ಮುನ್ನೆಗೆತಗಳು. ಈ ಎರಡರಲ್ಲೂ ಇಪ್ಪತ್ತೊಂದನೆ ಶತಮಾನದ ಆರಂಭದ ಹೊತ್ತಿಗೆ ಹಿನ್ನಡೆಗಳೂ ಆಗಿವೆ. ಕೆಲವು ಸಮಾಜವಾದಿ ದೇಶಗಳಲ್ಲಿ ಆದ ಹಿನ್ನಡೆಯಿಂದ, ಸಾಮ್ರಾಜ್ಯಶಾಹಿ ಬಲಗೊಂಡಿದೆ. ಪುನಃ ಆಫ್ರಿಕಾ, ಲ್ಯಾಟಿನ್ ಅಮೆರಿಕಾ, ಏಶ್ಯಾದ ದೇಶಗಳನ್ನು ವಸಾಹತುಗಳಂತೆ ಮಾಡುವ ಹುನ್ನಾರದಲ್ಲಿದೆ. ಈ ಹಿನ್ನೆಲೆಯಲ್ಲಿ ವಸಾಹತುಶಾಹಿ ಮತ್ತು ಅದರ ವಿರುದ್ಧ ಹೋರಾಟದ ಕೆಲವು ವಿವರಗಳ ಚಿತ್ರಣ ಈ ಲೇಖನ ಮಾಲೆಯಲ್ಲಿದೆ.

ಬ್ರಿಟಿಷ್ ಸಾಮ್ರಾಜ್ಯವನ್ನು 'ಸೂರ್ಯಮುಳುಗದ ಸಾಮ್ರಾಜ್ಯ' ಎಂದು ಕರೆಯುತ್ತಿದ್ದರು - 20ನೇ ಶತಮಾನದ ಆರಂಭದಲ್ಲಿ. ಜಗತ್ತಿನ ಎಲ್ಲಾ ಖಂಡಗಳಲ್ಲಿರುವ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡು ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿದ್ದರಿಂದ ಈ ಹೆಸರು. ಯಾವುದೇ ಹೊತ್ತಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಯಾವುದೇ ಭಾಗದಲ್ಲಿ ಬೆಳಗಾಗಿರುತ್ತಿತ್ತು. 20ನೇ ಶತಮಾನದ ಆರಂಭದ ಹೊತ್ತಿಗೆ ಯುರೋಪಿನ ಹಲವು ದೇಶಗಳು - ಮುಖ್ಯವಾಗಿ ಫ್ರಾನ್ಸ್, ಸ್ಪೈನ್, ಪೋರ್ಚುಗಲ್, ಡಚ್- ಇದೇ ರೀತಿಯ ಸೂರ್ಯ ಮುಳುಗದ ಸಾಮ್ರಾಜ್ಯ ಕಟ್ಟಿದ್ದವು. ಯುರೋಪಿನ ಈ ಸಾಮ್ರಾಜ್ಯಶಾಹಿ ದೇಶಗಳು ಇಡೀ ಜಗತ್ತನ್ನು ತಮ್ಮೊಳಗೆ ಹಂಚಿಕೊಂಡಿದ್ದವು. ತಮ್ಮ ಈ ವಸಾಹತುಗಳನ್ನು ಕೊಳ್ಳೆ ಹೊಡೆದಿದ್ದವು. ಆ ದೇಶ-ಪ್ರದೇಶಗಳ ಸ್ವಾಭಾವಿಕ ಸ್ವಯಂ-ನಿರ್ಧಾರಿತ ಬೆಳವಣಿಗೆಗಳನ್ನು ಹೊಸಕಿ ಹಾಕಿದ್ದವು. ಆರ್ಥಿಕವನ್ನು ನಿರ್ನಾಮ ಮಾಡಿದ್ದವು. ಬಂಡವಾಳಶಾಹಿ-ಪೂರ್ವ ಸಾಮಾಜಿಕ-ಆರ್ಥಿಕ ಪದ್ಧತಿಯನ್ನು ನಾಶ ಮಾಡಿದ್ದವು. ಬಂಡವಾಳಶಾಹಿ ಶೋಷಣೆಯನ್ನು ಹೊರಿಸಿದ್ದವು.

ಬ್ರಿಟನ್ 20ನೇ ಶತಮಾನದ ಹೊತ್ತಿಗೆ ಅತ್ಯಂತ ದೊಡ್ಡ 'ಸಾಮ್ರಾಜ್ಯ' ಹೊಂದಿದ್ದರೂ, ವಸಾಹತುಗಳನ್ನು ಗೆದ್ದುಕೊಂಡು, ವಶಪಡಿಸಿಕೊಂಡು ಸಾಮ್ರಾಜ್ಯಗಳನ್ನು ಕಟ್ಟಲು ಆರಂಭಿಸಿದವರಲ್ಲಿ ಸ್ಪೈನ್ ಮತ್ತು ಪೋರ್ಚುಗಲ್ ಮೊದಲಿಗರು. ವಸಾಹತೀಕರಣ 16ನೇ ಶತಮಾನದಲ್ಲೇ ಆರಂಭವಾಯಿತು. 17-18 ನೇ ಶತಮಾನದಲ್ಲಿ ತಾರಕಕ್ಕೇರಿತ್ತು. 17ನೇ ಶತಮಾನದ ಕೊನೆ ಹೊತ್ತಿಗೆ ಇಡೀ ಲ್ಯಾಟಿನ್ ಅಮೆರಿಕ ಖಂಡ(ಮೆಕ್ಸಿಕೋವರೆಗಿನ ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೇರಿಕಾ) ವನ್ನು ಸ್ಪೈನ್ ಮತ್ತು ಪೋರ್ಚುಗಲ್‌ಗಳು ಹಂಚಿಕೊಂಡಿದ್ದವು. 19ನೇ ಶತಮಾನದ ಕೊನೆಯ ಹೊತ್ತಿಗೆ ಇಡೀ ಆಫ್ರಿಕಾ, ಏಶ್ಯಾ ಖಂಡವನ್ನು ಎಲ್ಲಾ ಸಾಮ್ರಾಜ್ಯಶಾಹಿಗಳು ಹಂಚಿಕೊಂಡಿದ್ದರು. ಸ್ವತಂತ್ರ ದೇಶಗಳೇ ಇಲ್ಲ ಎನ್ನುವಷ್ಟರ ಮಟ್ಟಿಗೆ. ಬ್ರಿಟನ್, ಫ್ರಾನ್ಸ್, ಸ್ಪೈನ್, ಪೋರ್ಚುಗಲ್, ರಶ್ಯಾ, ಜಪಾನ್, ಜರ್ಮನಿ, ಬೆಲ್ಜಿಯಂ, ಇಟಲಿಗಳ ನಡುವೆ ಇಡೀ ಆಫ್ರಿಕಾ ಮತ್ತು ಏಶ್ಯಾ ಹಂಚಿ ಹೋಗಿತ್ತು.

ಈ ಲೇಖನ ಮಾಲೆಯಲ್ಲಿ ಮೂರು ಖಂಡಗಳಲ್ಲಿ - ಆಫ್ರಿಕಾ, ಏಶ್ಯಾ, ಲ್ಯಾಟಿನ್ ಅಮೆರಿಕಾ ವಸಾಹತುಶಾಹಿಯ ಹಿಡಿತ ಮತ್ತು ಅದರ ವಿರುದ್ಧ ಹೋರಾಟದ ಬಗ್ಗೆ ಕೆಲವು ಟಿಪ್ಪಣಿಗಳನ್ನು ಕೊಡಲಾಗಿದೆ. ಪ್ರತಿ ಖಂಡದಲ್ಲಿ ವಸಾಹತುಶಾಹಿ ಹಿಡಿತ ತಾರಕಕ್ಕೆ ಹೋಗಿದ್ದಾಗ ಅದರ ಚಿತ್ರ, ವಸಾಹತುಶಾಹಿ ವಿರುದ್ಧ ಸ್ವಾತಂತ್ರ್ಯ-ಸಾರ್ವಭೌಮತೆಗೆ ವಿರುದ್ಧ ಹೋರಾಟಗಳ, ಪ್ರಮುಖ ನಾಯಕರ ಸ್ಥೂಲ ಚಿತ್ರಣ ಇದೆ. ಪ್ರತಿ ಖಂಡಕ್ಕೆ ಈಗಿನ ಸ್ವತಂತ್ರ ದೇಶಗಳ ರಾಜಕೀಯ ಭೂಪಟ ಮತ್ತು ವಸಾಹತುಶಾಹಿ ತಾರಕದಲ್ಲಿದ್ದಾಗ ಭೂಪಟ ಎರಡನ್ನೂ ಕೊಡಲಾಗಿದೆ.

ಉತ್ತರ ಅಮೇರಿಕ ಮತ್ತು ಆಸ್ಟ್ರೇಲಿಯಾವನ್ನು ಇಲ್ಲಿ ಸೇರಿಸಲಾಗಿಲ್ಲ. ಅಲ್ಲೂ ವಸಾಹತುಶಾಹಿ ಇರಲಿಲ್ಲವೆಂದಲ್ಲ. ಒಂದೇ ವ್ಯತ್ಯಾಸವೆಂದರೆ ಈ ಖಂಡಗಳನ್ನು ವಸಾಹತುಗಳನ್ನಾಗಿ ಮಾಡಿಕೊಂಡಿದ್ದು ನಿಜ. ಆದರೆ ಅಲ್ಲಿನ ಮೂಲನಿವಾಸಿಗಳನ್ನು ಹೇಳ ಹೆಸರಿಲ್ಲದಂತೆ ನಿರ್ನಾಮ ಮಾಡಿದರು. ಅಲ್ಲಿ ದುಡಿದು ತಮ್ಮ ಮೂಲ ದೇಶಗಳಿಗೆ ಸಂಪಾದನೆಯನ್ನು ಸಂದಾಯ ಮಾಡಲು ಅಲ್ಲಿನ ದುಡಿಯುವ ಜನರನ್ನು ಒತ್ತಾಯದಿಂದ ದೂಡಲಾಯಿತು. ಮೂಲ ನಿವಾಸಿಗಳಲ್ಲಿ ಅಳಿದುಳಿದ ಜನರು ಇಂದು ಅಮೆರಿಕ, ಆಸ್ಟ್ರೇಲಿಯಾಗಳಲ್ಲಿ ತಮ್ಮ ಹಕ್ಕಿಗಾಗಿ ಹೋರಾಟ ನಡೆಸುತ್ತಿದ್ದಾರೆ. 20ನೆಯ ಶತಮಾನದ ಆರಂಭದಲ್ಲಿ ವಿಶ್ವದ ಅನೇಕ ವಸಾಹತು ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿ ಅಥವಾ ಸ್ವಾತಂತ್ರ್ಯ ಚಳುವಳಿಗಳು ಆರಂಭವಾದವು. ಎರಡನೇ ಮಹಾಯುದ್ಧದ ನಂತರ ಬಿರುಸುಗೊಂಡವು. ಆಗ ಆರಂಭವಾದ ಸ್ವಾತಂತ್ರ್ಯ ಪ್ರಕ್ರಿಯೆ 1964 ರ ವೇಳೆಗೆ ಬಹಳ ಪೂರ್ಣವಾಯಿತು. ಹಾಂಕಾಂಗ್ ಮಕಾವೋ ಪ್ರದೇಶಗಳು ಇತ್ತೀಚೆಗೆ ವಸಾಹತು ದೇಶಗಳಿಂದ ವಿಮೋಚನೆಗೊಂಡು ತಮ್ಮ ದೇಶದ ಭಾಗವಾದವು. ಆದರೆ ಇಂದಿಗೂ-ವಿಶ್ವಸಂಸ್ಥೆಯ ಒಂದು ಕಮಿಷನ್ ಪ್ರಕಾರ ಸುಮಾರು 17(ಹೆಚ್ಚಿನವು ದ್ವೀಪಗಳು) - ಪೂರ್ವ ತೈಮೋರ್, ಪಶ್ಚಿಮ ಸಮಾವೋ ಮುಂತಾದವು ವಸಾಹತುಗಳಾಗಿವೆ.

ಆಫ್ರಿಕಾ ಕತ್ತಲ ಖಂಡದಲ್ಲಿ ಮೂಡಿದ ಬೆಳಗು

ಎರಡನೇ ಮಹಾಯುದ್ಧದ ನಂತರದ ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಬಲಹೀನವಾಗಿದ್ದು, ಆಫ್ರಿಕನ್ ವಸಾಹತುಶಾಹಿ ದಮನದಿಂದ ಇರಿಸಿಕೊಳ್ಳಲು ಅಶಕ್ತವಾಗಿದ್ದವು. ಎಲ್ಲಾ ದೇಶಗಳಲ್ಲಿ ಭಾರಿ ಹೋರಾಟಗಳು ಆರಂಭವಾದವು. 1984 ರಲ್ಲಿ ಉತ್ತರ ಆಫ್ರಿಕಾದ ಅಲ್ಜೀರಿಯಾದಲ್ಲಿ ಫ್ರೆಂಚ್ ಆಡಳಿತದ ವಿರುದ್ಧ ಆರಂಭವಾದ ಹೋರಾಟವೇ ಪ್ರಥಮ ಪ್ರಮುಖ ಹೋರಾಟ.

ಆಫ್ರಿಕಾವನ್ನು 'ಕತ್ತಲ ಖಂಡ' ಎನ್ನುತ್ತಾರೆ. ಜಗತ್ತಿನ ಅತ್ಯಂತ ದಟ್ಟ ದರಿದ್ರರು ಇರುವ 20ನೇ ಶತಮಾನದ 'ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆಯ ಬೆಳಕು' ಕಾಣದ ಖಂಡ. ಈ ಭೂಮಿಯಲ್ಲಿ ಪ್ರಥಮ ಮಾನವ ನಡೆದಾಡಿದ ಜಾಗ ಎಂದು ಹೇಳಲಾದ ಖಂಡ. ಆದರೂ ಬೆಳವಣಿಗೆಯಲ್ಲಿ ಅತ್ಯಂತ ಹಿಂದುಳಿದ ಖಂಡ. ಇದಕ್ಕೆ ಕಾರಣ ಕಳೆದ ಮೂರು-ನಾಲ್ಕು ಶತಮಾನಗಳಲ್ಲಿ ಯುರೋಪಿನ ಸಾಮ್ರಾಜ್ಯಶಾಹಿ ದೇಶಗಳು ಇಲ್ಲಿ ಮಾಡಿದ ಲೂಟಿ. ಈ ಖಂಡದ ಪ್ರಾಕೃತಿಕ, ಮಾನವಿಕ ಸಂಪತ್ತನ್ನು ಲೂಟಿ ಮಾಡಿ, ಈ ಪ್ರದೇಶದ ಬೆಳವಣಿಗೆಯನ್ನು ಕುಂಟಿತಗೊಳಿಸಿದ್ದು. ಆಫ್ರಿಕಾದ ಸ್ವಾಭಾವಿಕ ಬೆಳವಣಿಗೆಯನ್ನು ತಡೆ ಹಿಡಿದು, ವಿಕೃತಗೊಳಿಸಿದ್ದು. ಸಾಮ್ರಾಜ್ಯಶಾಹಿಗಳು ಆಫ್ರಿಕಾವನ್ನು ಹೀಗೆ 'ಕತ್ತಲ ಖಂಡ' ಮಾಡಿದರು. ಆದರೂ ಅಲ್ಲಿನ ಜನ ಸಾಮ್ರಾಜ್ಯಶಾಹಿ ಹೊರಿಸಿದ ಕತ್ತಲನ್ನು ಹರಿದು ಹೇಗೆ ಬೆಳಕು ಮೂಡಿಸಿದರು ಎಂಬುದರ ಬಗ್ಗೆ ಕಿರು ಪರಿಚಯ.


ಪೋರ್ಚುಗೀಸರು 1482 ರಲ್ಲಿ ಆಫ್ರಿಕಾದ ಪಶ್ಚಿಮ ತೀರಗಳಲ್ಲಿ ಹಲವು ವ್ಯಾಪಾರಿ ನೆಲೆಗಳನ್ನು ಸ್ಥಾಪಿಸುವುದರಿಂದ ಯುರೋಪಿಯನ್ನರ ಆಗಮನ ಆಫ್ರಿಕಾದಲ್ಲಿ ಆಯಿತು. ಪೋರ್ಚುಗೀಸರ ಹಿಂದೆ ಬ್ರಿಟಿಷರು, ಡಚ್ಚರು, ಫ್ರೆಂಚರು ಬಂದರು. ಆಫ್ರಿಕಾದ ಚಿನ್ನ, ದಂತ ಮತ್ತು ಯುರೋಪಿನ ಕಬ್ಬಿಣ, ಶಸ್ತ್ರಾಸ್ತ್ರಗಳು, ಬಟ್ಟೆಗಳು ವ್ಯಾಪಾರ ವಿನಿಮಯದ ಸರಕುಗಳಾಗಿದ್ದವು. ಆಫ್ರಿಕಾದ ಬುಡಕಟ್ಟು ಜನರನ್ನು ಗುಲಾಮರಾಗಿ ಅಮೆರಿಕಕ್ಕೆ ಸಾಗಿಸುವುದು - ಈ ವ್ಯಾಪಾರದ ಭಾಗವಾಯಿತು. ಈ ಗುಲಾಮರ ಮತ್ತು ಇತರ ವ್ಯಾಪಾರಕ್ಕೆ ಯುರೋಪಿಯನ್ನರ ನಡುವೆ ಸ್ಪರ್ಧೆ ಆರಂಭವಾಯಿತು. ಅಲ್ಲದೆ ಆಫ್ರಿಕಾದ ಪ್ರಾಕೃತಿಕ ಸಂಪತ್ತನ್ನು ರಫ್ತು ಮಾಡಲು ವಶಪಡಿಸಿಕೊಳ್ಳಲಿಕ್ಕೆ ಅಲ್ಲಿನ ನೆಲದ ಮೇಲೆ ಹಿಡಿತ ಸಾಧಿಸಲಿಕ್ಕೆ, ಸ್ಥಳೀಯ ರಾಜರ/ಆಳುವವರ ಜೊತೆ ಸ್ಪರ್ಧೆ, ಯುದ್ಧ, ಸಂಧಾನಗಳಾದವು. ಆಫ್ರಿಕಾದ ಹೆಚ್ಚಿನ ಪ್ರದೇಶಗಳಲ್ಲಿ ಹಲವು ಬಣಗಳ ನಡುವೆ ಇರುವ ವೈರುಧ್ಯ-ವೈಮನಸ್ಯಗಳನ್ನು ಅವರು ಯಥೇಚ್ಛ ಬಳಸಿಕೊಂಡರು. 'ಒಡೆದು ಆಳುವ' ನೀತಿ ಎಲ್ಲಾ ಸಾಮ್ರಾಜ್ಯಶಾಹಿಗಳ ಸಮಾನ ತಂತ್ರ. ಕ್ರಮೇಣ ತಮ್ಮ ಮದ್ದುಗುಂಡುಗಳ ಶಸ್ತ್ರಾಸ್ತ್ರಗಳ ಬಲದಿಂದಲ್ಲಿನ ಆಳುವವರ ಮೇಲೆ ಅಥವಾ ಪ್ರದೇಶಗಳ ಮೇಲೆ ತಮ್ಮ ಆಡಳಿತ/ಅಧಿಪತ್ಯ ಹೇರಲು ಆರಂಭಿಸಿದರು. ಇವೇ ವಸಾಹತುಗಳಾದವು. ಪೋರ್ಚುಗೀಸರು ಪಶ್ಚಿಮ ಆಫ್ರಿಕಾದ ಕಾರವಳಿ ಪ್ರದೇಶದಲ್ಲಿ, ಫ್ರೆಂಚರು ಉತ್ತರ-ಪಶ್ಚಿಮ ಪ್ರದೇಶದಲ್ಲಿ, ಬ್ರಿಟಿಷರು ಪೂರ್ವದಲ್ಲಿ, ಡಚ್ಚರು ದಕ್ಷಿಣದಲ್ಲಿ, ಬೆಲ್ಜಿಯನ್ನರು ಮಧ್ಯ ಆಫ್ರಿಕಾದಲ್ಲಿ, ಇಟಾಲಿಯನ್ನರು ಉತ್ತರ



> ಐಎಂಎಫ್-ವಿಶ್ವಬ್ಯಾಂಕ್‌ಗಳು ಪುನಃ ಆಫ್ರಿಕಾವನ್ನು 'ಕತ್ತಲ ಖಂಡ' ಮಾಡುವ ಸನ್ನಾಹದಲ್ಲಿವೆ. ಹೆಚ್ಚಿನ ಆಫ್ರಿಕನ್ ದೇಶಗಳಲ್ಲಿ ಉತ್ಪಾದನಾ-ವ್ಯವಸ್ಥೆಯ ಬೆಳವಣಿಗೆ ಕುಂಠಿತವಾಗಿದ್ದು, ಸ್ಪಷ್ಟ ದೇಶವ್ಯಾಪಿ ಆಧುನಿಕ ವರ್ಗಗಳು (ಬಂಡವಾಳಶಾಹಿ,.. ಕಾರ್ಮಿಕ ವರ್ಗ) ಮೂಡಿಬರದೇ ಇರುವುದು, ರಾಷ್ಟ್ರೀಯ ಸಾರ್ವಭೌಮತೆ ಗಟ್ಟಿಗೊಳ್ಳುವುದರಲ್ಲಿ ಅಡ್ಡಿಯಾಗಿದೆ. ಆದರೂ 'ಕತ್ತಲ ಖಂಡ' ದಲ್ಲಿ ಸ್ವತಂತ್ರ-ಸಾರ್ವಭೌಮ ಬೆಳವಣಿಗೆಯ ಬೆಳಗು ಹರಿದಿದೆ.

ಆಫ್ರಿಕಾದಲ್ಲಿ ತಮ್ಮ ಹಿಡಿತ ಸಾಧಿಸಿ, ಆ ಪ್ರದೇಶಗಳನ್ನು ವಸಾಹತುಗಳನ್ನಾಗಿ ಮಾಡಿದರು. ಹಲವು ಕಡೆ ಯುರೋಪಿನ್ ವಸಾಹತುಗಾರರ ನಡುವೆ ಕಾದಾಟವಿದ್ದದ್ದು ಇದೆ ಪ್ರದೇಶಗಳ ಒಡೆತನಕ್ಕಾಗಿ. ಆಫ್ರಿಕಾದ ವ್ಯಾಪಾರೀ ಕೃಷಿ ಉತ್ಪನ್ನಗಳ ರಫ್ತಿನ ಜೊತೆ, ಅಲ್ಲಿನ ಅಪಾರ ಖನಿಜ ಸಂಪತ್ತನ್ನು ಹುಡುಕಿ, ರಫ್ತು ಮಾಡುವುದು ಪ್ರಮುಖ ಆರ್ಥಿಕ ಚಟುವಟಿಕೆಯಾಯಿತು. ಆಫ್ರಿಕದ ಸ್ಥಳೀಯ ಕೃಷಿಕರು ಆಹಾರಧಾನ್ಯಗಳನ್ನು ಬಿಟ್ಟು ಹತ್ತಿ, ಕಾಫಿ, ಚಾ, ರಬ್ಬರ್ ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಬಲವಂತ ಮಾಡಿದರು. ಇದರಲ್ಲಿ ದುಡಿಸಲು ಸ್ಥಳೀಯರ ಮೇಲೆ ದಬ್ಬಾಳಿಕೆ, ಬಲವಂತದ ಶ್ರಮ ಆರಂಭಿಸಿದರು. 19ನೇ ಶತಮಾನದ ಕೊನೆಯ ಹೊತ್ತಿಗೆ ಫ್ರೆಂಚರು, ಬ್ರಿಟಿಷರು, ಡಚ್ಚರು, ಜರ್ಮನ್ನರು, ಬೆಲ್ಜಿಯನ್ನರು, ಇಟಾಲಿಯನ್ನರು, ಪೋರ್ಚುಗೀಸರು ಆಫ್ರಿಕಾವನ್ನು ತಮ್ಮೊಳಗೆ ಹಂಚಿಕೊಂಡಿದ್ದರು. ತಮ್ಮೊಳಗಿದ್ದ ವಿವಾದಗಳನ್ನು ಬಗೆಹರಿಸಲು(ತಮ್ಮ ನಿಯಂತ್ರಣದ ಪ್ರದೇಶಗಳ ಗಡಿಗಳನ್ನು ಗುರುತಿಸಲು) 1884 ರಲ್ಲಿ ಬರ್ಲಿನ್‌ನಲ್ಲಿ ಒಂದು ಸಮ್ಮೇಳನ ಕರೆದರು. ಇದರಲ್ಲಿ ಗಡಿ ಗುರುತಿಸುವುದಲ್ಲದೆ, ನೈಜರ್ ಮತ್ತು ಕಾಂಗೋ ನದಿಗಳಲ್ಲಿ ಸಾಗಾಣಿಕೆ ಹಕ್ಕು, ಮುಂದೆ ವಸಾಹತು ವಶಪಡಿಸಿಕೊಳ್ಳುವಾಗ ಪರಸ್ಪರ-ವಿಚಾರವಿನಿಮಯ-ಸರಕಾರದ ಬಗೆಗೂ ಈ ಸಮ್ಮೇಳನ ಒಪ್ಪಂದಕ್ಕೆ ಬಂದಿತು. ಆದರೆ ಮೊದಲನೆಯ ಮಹಾಯುದ್ಧದ ಹೊತ್ತಿಗೆ ಈ ಒಪ್ಪಂದ ಮುರಿದು ಬಿತ್ತು. ಯುದ್ಧದ ನಂತರ 'ಲೀಗ್ ಆಫ್ ನೇಷನ್ಸ್' ನ ನೇತೃತ್ವದಲ್ಲಿ ವಸಾಹತುಗಳ ಗಡಿಗಳನ್ನು ಪುನಃ ಗುರುತಿಸಲಾಯಿತು. ಮಹಾಯುದ್ಧದ ಸಮಯದಲ್ಲಿ ಈ ವಸಾಹತುಗಳ ಸಾವಿರಾರು ಆಫ್ರಿಕನ್ನರು ತಮ್ಮ 'ಧಣಿ'ಗಳ ಪರವಾಗಿ ಯುದ್ಧದಲ್ಲಿ ಭಾಗವಹಿಸಿದರು. 19ನೇ ಶತಮಾನದ ಕೊನೆಯ ಹೊತ್ತಿಗಿನ ಆಫ್ರಿಕಾದಲ್ಲಿ ಯುರೋಪಿಯನ್ ಸಾಮ್ರಾಜ್ಯಶಾಹಿಗಳ ಹಿಡಿತವನ್ನು ಜತೆಗಿರುವ ಭೂಪಟದಲ್ಲಿ(ಆಫ್ರಿಕಾ-1914) ಗುರುತಿಸಲಾಗಿದೆ. ಈಥಿಯೋಪಿಯಾ ಬಿಟ್ಟರೆ ಉಳಿದೆಲ್ಲ ಪ್ರದೇಶಗಳು ಸಾಮ್ರಾಜ್ಯಶಾಹಿ ಹಿಡಿತಕ್ಕೆ ಒಳಗಾಗಿದ್ದವು. ಇಡೀ ಆಫ್ರಿಕಾ 'ಕತ್ತಲ ಖಂಡ' ವಾಗಿತ್ತು. ಈಥಿಯೋಪಿಯಾ ಸಹ 1936 ರಲ್ಲಿ ಇಟಲಿಯ ಆಕ್ರಮಣಕ್ಕೆ ಒಳಗಾಗಿ ಅದರ ವಶವಾಯಿತು.

ಆದರೆ ಆಫ್ರಿಕಾದ ಮೇಲೆ ಯುರೋಪಿಯನ್ ವಸಾಹತುಗಾರರ ಈ ಹಿಡಿತಕ್ಕೆ ಪ್ರತಿರೋಧ ಇಲ್ಲದಿಲ್ಲ. 16ನೇ ಶತಮಾನದಿಂದಲೂ ಆಫ್ರಿಕನ್ನರು ಅದಕ್ಕೆ ಪ್ರತಿರೋಧ ನೀಡುತ್ತಾ ಬಂದಿದ್ದು, 19ನೇ ಶತಮಾನದ ಉತ್ತರಾರ್ಧದಲ್ಲಿ ಅದು ತೀವ್ರವಾಗಿತ್ತು. ಫ್ರೆಂಚರ ವಿರುದ್ಧ 1870 ರಲ್ಲಿ



ಆಫ್ರಿಕಾ

ದೇಶ	ವಸಾಹತು	ಸ್ವಾತಂತ್ರ್ಯ
1. ಮೊರಕ್ಕೊ	ಫ್ರಾನ್ಸ್	1956
2. ಅಲ್ಜೇರಿಯಾ	ಫ್ರಾನ್ಸ್	1962
3. ಟುನ್ಸಿಯಾ	ಫ್ರಾನ್ಸ್	1956
4. ಲಿಬಿಯಾ	ಇಟಲಿ	1951
5. ಈಜಿಪ್ಟ್	ಬ್ರಿಟನ್	1922, 1952
6. ಏರಿಟ್ರಿಯಾ	ಇಟಲಿ, ಬ್ರಿಟನ್	1962
7. ಸೂಡಾನ್	ಬ್ರಿಟನ್	1953
8. ಮಧ್ಯ ಆಫ್ರಿಕಾ	ಫ್ರಾನ್ಸ್	1960
9. ಚಾಡ್	ಫ್ರಾನ್ಸ್	1960
10.ನೈಜರ್	ಫ್ರಾನ್ಸ್	1960
11.ಮಾಲಿ	ಫ್ರಾನ್ಸ್	1960
12. ಮಾರಿಟಾನಿಯಾ	ಫ್ರಾನ್ಸ್	1960
13. ಪಶ್ಚಿಮ ಸಹರಾ	ಸ್ಪೈನ್, ಮೊರಾಕ್ಕೊ, ಮಾರಿಟಾನಿಯ	1960
14. ಕ್ಯಾಮರೂನ್	ಬ್ರಿಟನ್	1960
15.ನೈಜೀರಿಯಾ	ಫ್ರಾನ್ಸ್	1960
16.ಬೆನಿನ್	ಫ್ರಾನ್ಸ್	1975
17.ಟೊಗೊ	ಜರ್ಮನಿ, ಫ್ರಾನ್ಸ್, ಬ್ರಿಟನ್	1960
18.ಘಾನಾ	ಬ್ರಿಟನ್, ಪೋರ್ಚುಗಲ್, ಡಚ್, ಡೆನ್ಮಾರ್ಕ್	1957
19. ಐವರಿ ಕೋಸ್ಟ್	ಫ್ರಾನ್ಸ್	1960
20.ಲೈಬಿರಿಯಾ	ಇಟಲಿ,ಬ್ರಿಟನ್,ಇಥಿಯೋಪಿಯಾ	1952,1993
21.ಬುರ್ಕಿನಾ ಫಾಜೋ	ಫ್ರಾನ್ಸ್	1960
22.ಗಿನಿ	ಫ್ರಾನ್ಸ್	1958
23.ಸಿಯಾರ್ರಾ ಲಿಯೋನ್	ಬ್ರಿಟನ್	1971
24.ಸೆನೆಗಲ್	ಪೋರ್ಚುಗಲ್, ಬ್ರಿಟನ್, ಫ್ರಾನ್ಸ್	1960
25.ಗ್ಯಾಂಬಿಯ	ಬ್ರಿಟನ್	1965
26. ಇಥಿಯೋಪಿಯಾ	ಇಟಲಿ	1941
27.ಜಿಬೌಟಿ	ಫ್ರಾನ್ಸ್	1977
28.ಸೊಮಾಲಿಯಾ	ಇಟಲಿ, ಬ್ರಿಟನ್	1960
29.ಕೆನ್ಯಾ	ಜರ್ಮನಿ, ಬ್ರಿಟನ್	1963
30 ಉಗಾಂಡಾ	ಬ್ರಿಟನ್	1962
31.ಝೈರೆ	ಬೆಲ್ಜಿಯಂ	1962
32. ಕಾಂಗೋ	ಫ್ರಾನ್ಸ್	1960
33.ಗಬಾನ್	ಫ್ರಾನ್ಸ್	1960
34.ಗಿನಿ	ಸ್ಪೇನ್	1968
35.ರವಾಂಡ	ಬೆಲ್ಜಿಯಂ	1962
36.ಬುರುಂಡಿ	ಬೆಲ್ಜಿಯಂ	1962
37. ಟಾಂಜಾನಿಯ	ಜರ್ಮನಿ, ಬ್ರಿಟನ್	1961
38.ಜಾಂಬಿಯಾ	ಬ್ರಿಟನ್	1964
39. ಅಂಗೋಲ	ಪೋರ್ಚುಗಲ್	1975
40.ಜಿಂಬಾಬ್ವೆ	ಬ್ರಿಟನ್, ಪೋರ್ಚುಗಲ್	1965, 1980
41.ನಮೀಬಿಯಾ	ಬ್ರಿಟನ್, ದ. ಆಫ್ರಿಕಾ	1988
42. ಬೋಟ್ಸ್ವಾನ	ಬ್ರಿಟನ್	1966
43. ಮೊಲಾವಿ	ಬ್ರಿಟನ್	1964
44.ಮೊಜಾಂಬಿಕ್	ಪೋರ್ಚುಗಲ್	1975
45. ಕಮಾರಾಸ್	ಫ್ರಾನ್ಸ್	1975
46. ಮಡಗಾಸ್ಕರ್	ಫ್ರಾನ್ಸ್	1958
47. ಸ್ವಾಜಿಲ್ಯಾಂಡ್	ಬ್ರಿಟನ್	1968
48.ದ.ಆಫ್ರಿಕಾ	ಬ್ರಿಟನ್, ಡಚ್	1910, 1994
49. ಲೆಸೋತೋ	ಬ್ರಿಟನ್	1966

ಅಲ್ಜೀರಿಯಾದಲ್ಲಿ, ಸಹಾರಾದಲ್ಲಿ 1881-1905 ರವರೆಗೆ ಭಾರಿ ದಂಗೆಗಳಾಗಿದ್ದವು. ಅದೇ ರೀತಿ ಬ್ರಿಟಿಷರಿಗೂ ದಕ್ಷಿಣ ಆಫ್ರಿಕಾದಲ್ಲಿ ಬೋಯರ್‌ಗಳಿಂದ, ಲಿಶಾಂತಿಲ್ಯಾಂಡ್, ಸಿಯಾರೆ ಲೋನ್‌ಯಲ್ಲಿ 1890 ರ ದಶಕದ ತುಂಬಾ ಭಾರಿ ದಂಗೆಗಳಾದವು. ತಂಗ್ಯಾನಿಕಾದಲ್ಲಿ(ಈಗಿನ ಟಂಜಾನಿಯಾದಲ್ಲಿ) ಹೆಸರಾದ 'ಮಾಜಿ ಮಾಜಿ ದಂಗೆ'(1905-07), ದಕ್ಷಿಣ-ಪಶ್ಚಿಮ ಆಫ್ರಿಕಾದಲ್ಲಿ ಹೆಲೆರೊ ದಂಗೆಯನ್ನು ಜರ್ಮನರು ಎದುರಿಸಬೇಕಾಯಿತು. ಪ್ರತಿದಂಗೆಯಲ್ಲಿ ಸಾವಿರಾರು ಆಫ್ರಿಕನ್ನರು ಸಾಮ್ರಾಜ್ಯಶಾಹಿಗಳ ದಮನಕ್ಕೆ ಒಳಗಾಗಿ ಸತ್ತರು. 'ಮಾಜಿ ಮಾಜಿ ದಂಗೆ' ಯೊಂದರಲ್ಲೇ 70 ಸಾವಿರ ಆಫ್ರಿಕನ್ನರು ಸತ್ತರು.

ಎರಡು ಮಹಾಯುದ್ಧಗಳ ನಡುವೆ ವಾಣಿಜ್ಯ, ಶಿಕ್ಷಣ, ಸಂಚಾರದ ಬೆಳವಣಿಗೆಯು ಆಫ್ರಿಕನ್ನರ ಒಂದು ವಿಭಾಗದಲ್ಲಿ ರಾಜಕೀಯ ಜಾಗರಣೆ ಆಗಿತ್ತು. ಯುರೋಪಿಯನ್ ಸಾಮ್ರಾಜ್ಯಶಾಹಿ ವಿರುದ್ಧ ಇದ್ದ ಆಕ್ರೋಶಕ್ಕೆ ರಾಜಕೀಯ ಚಳುವಳಿಯ ಸ್ವರೂಪ ಒದಗುತ್ತಿತ್ತು. ಎರಡನೇ ಮಹಾಯುದ್ಧದ ನಂತರದ ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಬಲಹೀನವಾಗಿದ್ದು, ಆಫ್ರಿಕನ್ ವಸಾಹತುಶಾಹಿ ದಮನದಿಂದ ಇರಿಸಿಕೊಳ್ಳಲು ಅಶಕ್ತವಾಗಿದ್ದವು. ಎಲ್ಲಾ ದೇಶಗಳಲ್ಲಿ ಭಾರಿ ಹೋರಾಟಗಳು ಆರಂಭವಾದವು. 1984 ರಲ್ಲಿ ಉತ್ತರ ಆಫ್ರಿಕಾದ ಅಲ್ಜೀರಿಯಾದಲ್ಲಿ ಫ್ರೆಂಚ್ ಆಡಳಿತದ ವಿರುದ್ಧ ಆರಂಭವಾದ ಹೋರಾಟವೇ ಪ್ರಥಮ ಪ್ರಮುಖ ಹೋರಾಟ. ಅದು ಫ್ರೆಂಚ್ ಪ್ರದೇಶಗಳಿಗೆಲ್ಲಾ ಹಬ್ಬಿತು. ಬ್ರಿಟಿಷ್ ವಸಾಹತುಗಳಲ್ಲೂ ಈ ಚಳುವಳಿ ಆರಂಭವಾಯಿತು. 1960 ರ ದಶಕದ ಕೊನೆಯ ಹೊತ್ತಿಗೆ 17 ಆಫ್ರಿಕನ್ ದೇಶಗಳು ಸ್ವತಂತ್ರವಾಗಿದ್ದವು. ಮೊದಲಿಗೆ ಬಂದಿದ್ದ ಪೋರ್ಚುಗೀಸ್, ಸ್ಪಾನಿಷ್ ವಸಾಹತುಗಳಿಗೆ 70 ರ ದಶಕದಲ್ಲಿ ಸ್ವಾತಂತ್ರ್ಯ ಸಿಕ್ಕಿತು.

ಆಫ್ರಿಕನ್ನರನ್ನು ಬುಡಕಟ್ಟು ಆಧಾರದ ಮೇಲೆ ಒಡೆಯುವುದಲ್ಲದೆ, ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಹಲವು ತಂತ್ರಗಳನ್ನು ಬಳಸಿದರು. ಆಯಾ ದೇಶದ ಭಾಗವಾಗಿ ಚುನಾವಣೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿನಿಧಿಗಳನ್ನು ಸಾಮ್ರಾಜ್ಯಶಾಹಿ ದೇಶದ ಪಾರ್ಲಿಮೆಂಟಿಗೆ ಕಳಿಸುವ ಎಂದು ಮಾತಾಡುವ ಪ್ರಯತ್ನ ಮಾಡಿದರು. ಫ್ರೆಂಚರು ಈ ಪ್ರಯತ್ನವನ್ನು ಮಾಡಿದರು. ಆದರೂ ಆಫ್ರಿಕನ್ನರ ಸ್ವಾತಂತ್ರ್ಯ ದಾಹ ಇಂಗಲಿಲ್ಲ. ಬ್ರಿಟಿಷರು, ವಸಾಹತುಗಳಲ್ಲಿ ನೆಲೆಸಿರುವ ಬಿಳಿಯರಿಗೆ ಮಾತ್ರ ಮತದಾನದ ಹಕ್ಕು ಕೊಟ್ಟು, ಅವರು ಆರಿಸಿದ ಅಲ್ಪಸಂಖ್ಯಾತ ಕೈಗೊಂಬೆ ಸರ್ಕಾರಗಳನ್ನು ನಿರ್ಮಾಣ ಮಾಡಲು ಪ್ರಯತ್ನಿಸಿದರು. ದಕ್ಷಿಣ ಆಫ್ರಿಕಾ, ರೊಡೇಶಿಯಾ ಮುಂತಾದ ಕಡೆ ಇಂತಹ ಪ್ರಯತ್ನ ನಡೆಯಿತು. ಕೆಲವು ದುರ್ಬಲ ದೇಶಗಳು ಯುರೋಪಿಯನ್ನರಿಂದ ಸ್ವತಂತ್ರವಾದ ಮೇಲೆ ತಮ್ಮ ನೆಲೆಯ ಪ್ರಬಲ ಆಫ್ರಿಕನ್ ದೇಶಗಳ ಅಧೀನಕ್ಕೆ ಒಳಗಾದವು. ಇನ್ನೊಂದು ಹಂತದ ಸ್ವಾತಂತ್ರ್ಯ ಹೋರಾಟದ ನಂತರವೇ ಅವು ಸ್ವತಂತ್ರವಾಗಿದ್ದು.(ಉದಾ: ಲಿಬೇರಿಯಾ

ಈಥಿಯೋಪಿಯಾದಿಂದ, ಪಶ್ಚಿಮ ಸಹಾರಾ ಮೊರೊಕ್ಕೋದಿಂದ) ದಕ್ಷಿಣ ಆಫ್ರಿಕಾದ ವರ್ಣಭೇದ ಸರ್ಕಾರದಿಂದ ಸ್ವಾತಂತ್ರ್ಯ ಪಡೆದ ನಮೀಬಿಯಾ ಬಿಡುಗಡೆ ಪಡೆದ ಕೊನೆಯ ವಸಾಹತು. ಅದೇ ರೀತಿ ಬಿಳಿಯ ಯುರೋಪಿನ ವಸಾಹತುಗಾರರ ನಿಯಂತ್ರಣದ ವಿರುದ್ಧ ಎರಡನೇ ಸ್ವಾತಂತ್ರ್ಯದ ಹೋರಾಟದ ಜಯವಾದಾಗಲೇ ಅವನ್ನು ಸ್ವತಂತ್ರ ದೇಶವಾಗಿ ಕಾಣಬಹುದು. (ಜತೆಗಿರುವ ಕೋಷ್ಟಕದಲ್ಲಿ, ಆಫ್ರಿಕಾದ ಪ್ರತಿಯೊಂದು ದೇಶ, ಆ ದೇಶವನ್ನು ವಸಾಹತು ಮಾಡಿರೋ ದೇಶ. ಸ್ವತಂತ್ರವಾದ ವರ್ಷ-ಇವುಗಳನ್ನು ಕೊಡಲಾಗಿದೆ).


ಆಫ್ರಿಕಾದ ಪ್ರತಿಯೊಂದು ಪ್ರದೇಶದಲ್ಲೂ ಬುಡಕಟ್ಟು, ಜನಾಂಗೀಯ ವ್ಯತ್ಯಾಸಗಳಿದ್ದವು. ವಸಾಹತುಶಾಹಿ ಆಫ್ರಿಕನ್ 'ಸ್ವಂತಿಕೆ'ಯೊಂದನ್ನು ಕಲಿಸಿತ್ತು. ಅವರ ವಿರುದ್ಧ ಹೋರಾಟದಲ್ಲಿ ಪ್ರತಿಯೊಂದು ದೇಶದ ಸ್ವಾತಂತ್ರ್ಯ ಹೋರಾಟಗಳು ಇತರ ದೇಶಗಳಿಗೆ ಸಹಾಯ ಮಾಡಿದವು, ತಮ್ಮ ದೇಶದಲ್ಲಿ ಮಾತ್ರವಲ್ಲ ಇಡೀ ಖಂಡದಲ್ಲೇ ಸ್ವಾತಂತ್ರ್ಯ-ಸಾರ್ವಭೌಮತೆಗಾಗಿ ಹೋರಾಡುವುದರಲ್ಲಿ ನಾಯಕತ್ವ ಕೊಟ್ಟಿದ್ದರಿಂದ ಹಲವು ನಾಯಕರು, ಇಡೀ ಖಂಡದ ನಾಯಕರಾಗಿ ಗುರುತಿಸಲ್ಪಡುತ್ತಾರೆ. ಟಂಜಾನಿಯಾದ ಜ್ಯೂಲಿಯಸ್ ನೈರೆರೆ, ಝೈರೆಯ ಪ್ಯಾಟ್ರಿಕ್ ಲೂಮೂಂಬಾ, ಕೆನ್ಯಾದ ಜೋಮೋ ಕೆನ್ಯಾಟಾ, ಘಾನಾದ ಎನ್‌ಕ್ರೋಮಾ, ಈಜಿಪ್ಟ್‌ನ ನಾಸೆರ್ ಈ ಸಾಲಿಗೆ ಸೇರುತ್ತಾರೆ. ಸ್ವಾತಂತ್ರ್ಯ ಪಡೆದ ಪ್ರತಿ ಆಫ್ರಿಕನ್ ದೇಶ ಶತಕಗಳ ಸ್ವಯಂ ನಿರ್ಧಾರದ ಅಭಾವದಿಂದ ಕುಂಠಿತವಾಗಿದ್ದ ಬೆಳವಣಿಗೆ ಸಾಧಿಸಲು ಪ್ರಯತ್ನ ಪಟ್ಟವು. ಈ ಪ್ರಯತ್ನದಲ್ಲಿ ಸ್ವಾಭಾವಿಕವಾಗಿಯೇ ಮಾಜಿ ಸಾಮ್ರಾಜ್ಯಶಾಹಿಗಳು ಕಂಟಕಗಳನ್ನೊಡ್ಡಿದರು. ಆ ದೇಶದ ಕೆಲವು ಜನ ವಿಭಾಗಗಳ ಮೇಲಿನ ಹಿಡಿತ ಬಳಸಿ ಮೂಗು ತೂರಿಸಲು ಪ್ರಯತ್ನಿಸಿದವು. ಇಂತಹ ಸಾಮ್ರಾಜ್ಯಶಾಹಿ ಮೂಗು ತೂರಿಸುವಿಕೆಯ ವಿರುದ್ಧ ಜನರನ್ನು ಸಂಘಟಿಸಿ, ಐಕ್ಯತೆ ಮೂಡಿಸಲು ಶಕ್ತವಾದ ದೇಶಗಳಲ್ಲಿ ಸ್ವತಂತ್ರ ಬೆಳವಣಿಗೆ ನಡೆಯಿತು. ಇಂತಹ ಶಕ್ತಿಗಳು, ಸಂಘಟನೆಗಳು, ನಾಯಕರು ಇದ್ದ ದೇಶದಲ್ಲೂ ಅವರನ್ನು ಹೊಸಕಿ ಹಾಕುವ ಸಾಮ್ರಾಜ್ಯಶಾಹಿ (ಹಳೆ ಮತ್ತು ಹೊಸ-ಉದಾ: ಅಮೆರಿಕ) ಹುನ್ನಾರ ನಡೆಯಿತು. ಪ್ಯಾಟ್ರಿಕ್ ಲೂಮೂಂಬಾರ ಹತ್ಯೆ, ಘಾನಾದ ಎನ್‌ಕ್ರೂಮಾ ವಿರುದ್ಧ ಮಿಲಿಟರಿ ದಂಗೆ, ಇತ್ಯಾದಿ ಇಂತಹ ಉದಾಹರಣೆಗಳು, ಈಜಿಪ್ಟ್‌ನ ನಾಸೆರ್ ವಿರುದ್ಧವೂ ಇಂತಹ ಪಿತೂರಿ ನಡೆಯಿತು. ಲೂಮುಂಬಾ ಹತ್ಯೆಯ ಹಿಂದೆ ಸಿಐಎ ಕೈವಾಡ ಇತ್ತು ಎಂಬುದು ಈಗ ಸಾರ್ವಜನಿಕ ಗುಟ್ಟು. ಈಗಲೂ ಆಫ್ರಿಕಾದ ದೇಶಗಳು ತಮ್ಮದೇ ಬೆಳವಣಿಗೆ ಪಥ ಹಿಡಿಯುತ್ತಿರುವುದರ ವಿರುದ್ಧ ಸಾಮ್ರಾಜ್ಯಶಾಹಿಯ ಅಡೆ-ತಡೆಗಳು ಇದ್ದೇ ಇವೆ. ಐಎಂಎಫ್-ವಿಶ್ವಬ್ಯಾಂಕ್‌ಗಳು ಪುನಃ ಆಫ್ರಿಕಾವನ್ನು 'ಕತ್ತಲ ಖಂಡ' ಮಾಡುವ ಸನ್ನಾಹದಲ್ಲಿವೆ. ಹೆಚ್ಚಿನ ಆಫ್ರಿಕನ್ ದೇಶಗಳಲ್ಲಿ ಉತ್ಪಾದನಾ-ವ್ಯವಸ್ಥೆಯ ಬೆಳವಣಿಗೆ ಕುಂಠಿತವಾಗಿದ್ದು, ಸ್ಪಷ್ಟ ದೇಶವ್ಯಾಪಿ ಆಧುನಿಕ ವರ್ಗಗಳು(ಬಂಡವಾಳಶಾಹಿ,.... ಕಾರ್ಮಿಕ ವರ್ಗ) ಮೂಡಿಬರದೇ ಇರುವುದು, ರಾಷ್ಟ್ರೀಯ ಸಾರ್ವಭೌಮತೆ ಗಟ್ಟಿಗೊಳ್ಳುವುದರಲ್ಲಿ ಅಡ್ಡಿಯಾಗಿದೆ. ಆದರೂ 'ಕತ್ತಲ ಖಂಡ' ದಲ್ಲಿ ಸ್ವತಂತ್ರ-ಸಾರ್ವಭೌಮ ಬೆಳವಣಿಗೆಯ ಬೆಳಗು ಹರಿದಿದೆ.

ಈಗಿನ ಆಫ್ರಿಕಾ



ಜ್ಯೂಲಿಯಸ್ ನೈರೇರೇ

ನೈರೇರೇ ತಂಜಾನಿಯಾದ ಮೊದಲ ಅಧ್ಯಕ್ಷರಾಗಿದ್ದವರು. (1962-1985)ಆದರೂ ಆಫ್ರಿಕಾದ ತುಂಬಾ ಅವರನ್ನು ಇಡೀ ಖಂಡದ ನಾಯಕರಾಗಿ ಗುರುತಿಸಲಾಗುತ್ತದೆ. ಅವರು ಈಗಿನ ಬ್ರಿಟಿಷ್ ಆಡಳಿತದ ವಿರುದ್ಧ ತಾಂಗಾನಿಕಾ ಆಫ್ರಿಕನ್ ನೇಶನಲ್ ಯೂನಿಯನ್(TANN) ಕಟ್ಟಿ ಸ್ವಾತಂತ್ರ್ಯ ಹೋರಾಟ ನಡೆಸಿದರು. 1961 ರಲ್ಲಿ ತಂಜಾನಿಯಾ ಆ ಹೋರಾಟದ ಫಲವಾಗಿ ಸ್ವತಂತ್ರವಾದಾಗ ಅದರ ಪ್ರಥಮ ಪ್ರಧಾನಿಯಾದರು. 1962 ರಲ್ಲಿ ಪ್ರಥಮ ಅಧ್ಯಕ್ಷರಾದರು. **'ಉಜಾಮಾ'(ಸಮುದಾಯ)ಎಂಬ 'ಕೃಷಿ-ಪ್ರಧಾನ ಗ್ರಾಮೀಣ**


ನೈರೇರ

ಸಮಾಜವಾದ' ದ ರೂಪದ ವ್ಯವಸ್ಥೆ ರೂಪಿಸಿದ್ದಕ್ಕೆ ಹೆಸರಾಗಿದ್ದಾರೆ.

ಅವರು ಆಫ್ರಿಕಾದ ನೆಲದಲ್ಲಿ ಬೇರೂರಿದ ರಾಜಕೀಯ-ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ಪ್ರತಿಪಾದಕರಾಗಿದ್ದರು. ಆಫ್ರಿಕಾದ(ಅದರಲ್ಲೂ ದಕ್ಷಿಣ ಆಫ್ರಿಕಾದ ದೇಶಗಳ) ಅಂತಿಮ ವಿಮೋಚನೆಯ ದೀರ್ಘ ಸಶಸ್ತ್ರ ಹೋರಾಟಕ್ಕೆ ಸಕ್ರಿಯ ಬೆಂಬಲ ಕೊಟ್ಟಿದ್ದಕ್ಕೆ ಇಡೀ ಆಫ್ರೀಕದ ನಾಯಕರಾಗಿ ಗುರುತಿ ಸಲ್ಪಟ್ಟವರು.ಜಿಂಬಾಬ್ವೆ, ಮೊಜಾಂಬಿಕ್, ಅಂಗೋಲಾ ಮತ್ತು ಬಿಗಾಂಡಾದ ಸ್ವಾತಂತ್ರ್ಯ ಹೋರಾಟ ಗಾರ ಗೆರಿಲ್ಲಾ ಗಳಿಗೆ ನೆಲೆಗಳ ಸಹಾಯ ಒದಗಿಸಿಕೊಟ್ಟು, ಇಡೀ ಆಫ್ರಿಕಾದ ವಿಮೋಚನೆಯಲ್ಲಿ ಮಹತ್ತರ ಪಾತ್ರವಹಿಸಿದರು. ದಕ್ಷಿಣ ಆಫ್ರಿಕಾದ ಆಫ್ರಿಕನ್ ನೇಶನಲ್ ಕಾಂಗ್ರೆಸ್(ANC) ಗೆರಿಲ್ಲಾಗಳು ದಶಕಗಳ ಕಾಲ ತಮ್ಮ ಸಶಸ್ತ್ರ ಹೋರಾಟವನ್ನು ತಂಜಾನಿಯಾದ ನೆಲೆಗಳಿಂದಲೇ ನಡೆಸಿದ್ದು. ದೇಶದ, ಇಡೀ ಖಂಡದ ಅತ್ಯಂತ ಗೌರವಾನ್ವಿತ ನಾಯಕರಾಗಿದ್ದರೂ, ತಾವಾಗಿಯೇ 1985 ರಲ್ಲಿ ಅಧ್ಯಕ್ಷ ಪದವಿಯಿಂದ ನಿವೃತ್ತಿ ಹೊಂದಿದ. ಈ ಖಂಡದ ಏಕಮಾತ್ರ ನಾಯಕರು ಎನ್ನ ಬಹುದು. ಆಫ್ರಿಕಾದ ದೇಶ ಗಳಲ್ಲೇ ಸ್ಥಳೀಯ ಭಾಷೆ ಯನ್ನು ಬೆಳೆಸಿ, ರೂಪಿಸಿ ಅಧಿಕೃತ ಭಾಷೆ ('ಸ್ವಾಹಿಲಿ') ಮಾಡಿದ ಕೀರ್ತಿಯೂ ನೈರೇರೇಯವರದ್ದು.

ಪ್ಯಾಟ್ರಿಕ್ ಲೂಮುಂಬಾ

ಬೆಲ್ಜಿಯನ್ ಕಾಂಗೋರ(ಈಗ ಝೈರೇ) ಸ್ವಾತಂತ್ರ್ಯ ಹೋರಾಟದ ನಾಯಕ ಲೂಮುಂಬಾ. ಇವರು ಪೋಸ್ಟಲ್ ಇಲಾಖೆಯಲ್ಲಿ ಕಾರಕೂನರಾಗಿ ದುಡಿಯುತ್ತಾ, ಸರ್ಕಾರಿ ನೌಕರರ ಟ್ರೇಡ್ ಯೂನಿಯನ್ ನಾಯಕರಾದರು. ಆಗಲೇ ಅವರಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದು, ಸಕ್ರಿಯರಾಗಿದ್ದರು, ಅವರು ಬೆಲ್ಜಿಯಂನ 'ಅಧ್ಯಯನ-ಪ್ರವಾಸ' ಮುಗಿಸಿ ವಾಪಸು ಬರುತ್ತಿದ್ದಂತೆ, ಅವರನ್ನು ಬಂಧಿಸಲಾಯಿತು. ಜೈಲಿನಿಂದ ಹೊರಬರುತ್ತಿದ್ದಂತೆ ಅವರು ಕಾಂಗೋಲೀಸ್ ರಾಷ್ಟ್ರೀಯ ಚಳುವಳಿ ಎಂಬ ದೇಶವ್ಯಾಪಿ ರಾಜಕೀಯ ಪಕ್ಷ ಕಟ್ಟಿದರು. ಅವರು ಆಗ ಆಫ್ರಿಕಾದ ತುಂಬಾ ಬೀಸುತ್ತಿದ್ದ ರಾಷ್ಟ್ರೀಯವಾದದ, ವಿಮೋಚನಾ ಸಿದ್ಧಾಂತದ ಹರಿಕಾರರಲೊಬ್ಬರಾಗಿದ್ದರು. ತೀವ್ರವಾದಿ ನಾಯಕರಲ್ಲೊಬ್ಬರಾಗಿದ್ದರು. 1959 ರಲ್ಲಿ ತಮ್ಮ ಕೈಗೊಂಬೆಗಳಿಗೆ ಅಧಿಕಾರ ಹಸ್ತಾಂತರಿಸುವ ಬೆಲ್ಜಿಯಂನ ಪ್ರಯತ್ನವನ್ನು ಅವರ ಪಕ್ಷ ವಿರೋಧಿಸಿತು. ಅವರ ಪಕ್ಷದ ತೀವ್ರ ಚಳುವಳಿಯಿಂದ ಬೆಲ್ಜಿಯಂ ದುಂಡು ಮೇಜಿನ ಪರಿಷತ್ತೊಂದು ಕರೆದು, ಚುನಾವಣೆಗೆ ಒಪ್ಪಬೇಕಾಯಿತು. ಚುನಾವಣೆಯಲ್ಲಿ ಅವರ ಪಕ್ಷ ಭಾರೀ ಬಹುಮತ ಗಳಿಸಿದರೂ ಅವರು ದೇಶದ ನಾಯಕರಾಗುವುದನ್ನು ತಡೆಯಲು ಸಾಮ್ರಾಜ್ಯಶಾಹಿಗಳೂ, ಅವರ ಸ್ಥಳೀಯ ಬಾಲಬಡುಕರು ಬಹಳ ಪ್ರಯತ್ನ ಪಟ್ಟರೂ ಸಫಲರಾಗಲಿಲ್ಲ. ಅವರು ಪ್ರಧಾನಮಂತ್ರಿಯಾಗುತ್ತಿದ್ದಂತೆ ಈ ಸ್ವತಂತ್ರ ದೇಶದ ವಿರುದ್ಧ ಹೊಸ ಪಿತೂರಿಗಳು ಆರಂಭವಾದವು. ದೇಶದ ಸೈನ್ಯದ ಒಂದು ತುಕಡಿ ಅವರ ಬೆಲ್ಜಿಯನ್ ಕಮಾಂಡರ್ ವಿರುದ್ಧ ದಂಗೆ ಎದ್ದಿತು. ಅದೇ ಸಮಯದಲ್ಲಿ ಕಟಿಂಗಾ ಎಂಬ ಪ್ರಾಂತ್ಯದಲ್ಲಿ ಪ್ರತ್ಯೇಕವಾದಿಗಳು, ತಮ್ಮದೇ 'ಸ್ವಾತಂತ್ರ್ಯ' ಘೋಷಿಸಿದರು. ಕಾಂಗೋ ಸಮಗ್ರತೆ - ಐಕ್ಯತೆಗೆ(ಬುಡಕಟ್ಟು ಆಧಾರಿತ ಸಂಕುಚಿತವಾದದ ವಿರುದ್ಧ) ಹೋರಾಡುತ್ತಿದ್ದ ಲೂಮೂಂಬಾರ ಸರ್ಕಾರ ದೇಶ ಒಡೆಯುವುದನ್ನು ತಡೆಯಲು ಸೈನ್ಯ ಕಳಿಸಿತು. ಕಟಿಂಗಾ ಪ್ರತ್ಯೇಕವಾದಿಗಳ ಬೆಂಬಲಕ್ಕೆ ಬೆಲ್ಜಿಯಂ ಸೈನ್ಯ ನಿಂತಿತು. ಇದರ ವಿರುದ್ಧ ಲೂಮುಂಬಾ ವಿಶ್ವಸಂಸ್ಥೆಗೆ ದೂರಿತ್ತರು. ವಿಶ್ವಸಂಸ್ಥೆಯ ಸೈನ್ಯ ಬಂದರೂ ಸರ್ಕಾರಕ್ಕೆ ಸಹಾಯ ಮಾಡುವ ಗೋಜಿಗೆ ಹೋಗಲಿಲ್ಲ. ಆಗ ಲೂಮುಂಬಾ ಸೋವಿಯತ್ ಒಕ್ಕೂಟದ ಸಹಾಯ ಕೇಳಿದರು. ಸ್ವತಂತ್ರ ಆಫ್ರಿಕನ್ ದೇಶಗಳಿಗೂ ಮನವಿ ಮಾಡಿದರು. **ಸಾಮ್ರಾಜ್ಯಶಾಹಿಗಳ ಕುತಂತ್ರ ಆಗಲೇ ಆರಂಭವಾಗಿತ್ತು. ಆಗ ಅಧ್ಯಕ್ಷರಾಗಿದ್ದ ಕಸವುಬು ಲೂಮುಂಬಾ ಸರ್ಕಾರವನ್ನು ವಜಾ ಮಾಡಿದರು. ದೇಶದಲ್ಲಿ ಆಂತರಿಕ ಯುದ್ಧ ಆರಂಭವಾಗಿತ್ತು. ಈ ಅವಕಾಶ ಬಳಸಿ ಕರ್ನಲ್ ಮೊಬುಟು ಎಂಬಾತನ ನಾಯಕತ್ವದಲ್ಲಿ ಸರ್ಕಾರ ವಶಪಡಿಸಿಕೊಂಡ. ಲೂಮುಂಬಾರನ್ನು ಹತ್ಯೆ ಮಾಡಲಾಯಿತು. ಲೂಮೂಂಬಾ ಹತ್ಯೆಯ ಹಿಂದೆ ಸಿಐಎ ಕೈವಾಡ ಇತ್ತು ಎಂಬುದು ಈಗ ಸಾರ್ವಜನಿಕ ಗುಟ್ಟು.**

ಲೂಮುಂಬಾ ಈಗ ಇಡೀ ಆಫ್ರಿಕಾದಲ್ಲಿ ಹುತಾತ್ಮನಾಯಕರಾಗಿ ಹೆಸರಾಗಿದ್ದಾರೆ. ಆಫ್ರಿಕಾದ ವಿಮೋಚನೆಯ ಅವರ ವಿಶಿಷ್ಟ ಪಾತ್ರವನ್ನು ಗುರುತಿಸಿ, ಸೋವಿಯತ್ ಒಕ್ಕೂಟ ಮಾಸ್ಕೋದಲ್ಲಿ ಮೂರನೇ ಜಗತ್ತಿನ ವಿದ್ಯಾರ್ಥಿಗಳ ಆಧುನಿಕ ವಿಜ್ಞಾನ-ತಂತ್ರಜ್ಞಾನ ಅಧ್ಯಯನಕ್ಕೆ ಮೀಸಲಾದ ವಿಶೇಷ ವಿಶ್ವವಿದ್ಯಾಲಯಕ್ಕೆ 'ಪ್ಯಾಟ್ರಿಕ್ ಲೂಮುಂಬಾ ಸ್ನೇಹ-ಸೌಹಾರ್ದತಾ ವಿಶ್ವವಿದ್ಯಾಲಯ' ಎಂದು ಹೆಸರಿಡಲಾಗಿದೆ.

ಕ್ವಾಮೆ ಎನ್‌ಕ್ರೂಮಾ

ಎನ್‌ಕ್ರೂಮಾ ಘಾನಾ ಸ್ವಾತಂತ್ರ್ಯ ಹೋರಾಟದ ನಾಯಕರಾಗಿದ್ದು, ಸ್ವತಂತ್ರವಾದ ನಂತರ ಅದರ ಅಧ್ಯಕ್ಷ(1950-60) ರಾಗಿದ್ದವರು. ಒಬ್ಬ

ಚಮ್ಮಾರನ ಮಗನಾಗಿದ್ದ ಎನ್‌ಕ್ರೂಮಾ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದು, ಉನ್ನತ ಅಧ್ಯಯನಕ್ಕೆ ಇಂಗ್ಲೆಂಡ್, ಅಮೆರಿಕಗಳಿಗೆ ಹೋಗಿದ್ದರು. **ಇಡೀ ಆಫ್ರಿಕಾ ವನ್ನು ಸಾಮ್ರಾಜ್ಯ ಶಾಹಿ- ವಸಾಹತು ಶಾಹಿಯಿಂದ ಬಿಡುಗಡೆ ಮಾಡುವ ಉದ್ದೇಶ ಹೊಂದಿದ ಪಾನ್- ಆಫ್ರಿಕನ್- ಕಾಂಗ್ರೆಸ್ ಅನ್ನು ಅವರು 1945 ರಲ್ಲಿ ಸ್ಥಾಪಿಸಿದರು.** 1947 ರಲ್ಲಿ ಸ್ವದೇಶಕ್ಕೆ ಹಿಂತಿರುಗಿ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದರು. 1966 ರಲ್ಲಿ ಮಿಲಿಟರಿ ದಂಗೆಯಲ್ಲಿ ಅವರ ಸರ್ಕಾರವನ್ನು ಉರುಳಿಸ ಲಾಯಿತು. ಆಮೇಲೆ ಅವರು ಗಿನಿಯಲ್ಲಿ ವಾಸಿಸುತ್ತಿದ್ದರು.

1958 ರಲ್ಲಿ ಅವರು ಘಾನಾದಲ್ಲಿ ಪ್ರಥಮ ಸ್ವತಂತ್ರ ಆಫ್ರೀಕನ್ ದೇಶಗಳ ಸಮ್ಮೇಳನ ಸಂಘಟಿಸಿದರು. ನಿಕಟ ರಾಜಕೀಯ-ಆರ್ಥಿಕ ಸಂಬಂಧ ಇಟ್ಟುಕೊಂಡು ಆಫ್ರಿಕಾದ ಐಕ್ಯತೆ ಸಾಧಿಸಬೇಕು ಎಂಬ ಅವರ ವಾದಕ್ಕೆ ಹಲವರ ಬೆಂಬಲ ಗಳಿಸಿದರು. ಆದರೆ ಕ್ರಮೇಣ ಎರಡು ಗುಂಪುಗಳಾದವು. ಎನ್‌ಕ್ರೂಮಾ ನಾಯಕತ್ವದಲ್ಲಿ ಅವರ ಧೋರಣೆ ಬೆಂಬಲಿಸಿದ ತೀವ್ರವಾದಿ ಗುಂಪು ಕ್ರಮೇಣ ಆರ್ಥಿಕ ಒಕ್ಕೂಟ ಸಾಧಿಸುವ ದೂರ ಗಾಮಿ ಉದ್ದೇಶದ ಮಂದ ಗಾಮಿ ಗುಂಪು ಇಥಿಯೋಪಿಯಾ ಸಾಮ್ರಾಟ ಹೆಲಿ ಸೈಲಾಪಿ ನಾಯಕತ್ವದ ಗುಂಪು. ಈ ಎರಡೂ ಗುಂಪು ಒಗ್ಗೂಡಿ ಆಫ್ರಿಕ ಐಕ್ಯತೆ ಸಂಘಟನೆಯ (OAU) ನ್ನು 1963 ರಲ್ಲಿ ರಚಿಸಿದ್ದು, ಆಫ್ರಿಕಾದ ಚರಿತ್ರೆಯಲ್ಲಿ ವಿಶಿಷ್ಟ ಅಧ್ಯಾಯ. ಎನ್‌ಕ್ರೂಮಾ ರವರ ಕೊಡುಗೆ ಇದರಲ್ಲಿ ಮಹತ್ವದ್ದು. ❍



ಎನ್‌ಕ್ರೂಮಾ


ಏಶ್ಯಾ

ಏಶ್ಯಾ ಜಗತ್ತಿನ ಅತ್ಯಂತ ದೊಡ್ಡ ಖಂಡ. ಹಲವು ಪ್ರಾಚೀನ ನಾಗರಿಕತೆಗಳ ತವರು. ಜನಾಂಗೀಯ ಭೌಗೋಳಿಕ, ವೈವಿಧ್ಯತೆಗಳಿಗೆ ಹೆಸರಾದದ್ದು. ಇಲ್ಲಿ ವಿದೇಶಿ ಧಾಳಿಗಳು ಹೊಸದಲ್ಲ. ಆದರೆ ಹಿಂದಿನ ವಿದೇಶಿ ದಾಳಿಕೋರರನ್ನು, ಅವರ ಸಂಸ್ಕೃತಿಯನ್ನು ತನ್ನಲ್ಲಿ ಸಮ್ಮಿಳಿತಗೊಂಡ ಖಂಡ ಇದು. ಆದರೆ ಯುರೋಪಿಯನ್ ಸಾಮ್ರಾಜ್ಯಶಾಹಿ ಬಗೆಗೆ ಹಾಗಾಗಲಿಲ್ಲ. ಅವರು ಏಶ್ಯಾವನ್ನು ಗುರುತು ಸಿಗದಂತೆ ಬದಲಾಯಿಸಿದರು. ಬೆಳವಣಿಗೆಯ ಹಂತದಲ್ಲಿ ಬೇರೆ ಎಲ್ಲಾ ಖಂಡಗಳಿಗಿಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಈ ಖಂಡದ ಮೇಲೆ ಯುರೋಪಿಯನ್ ವಸಾಹತುಶಾಹಿ ಆಕ್ರಮಣದ ಪರಿಣಾಮದ ಬಗ್ಗೆ ಒಂದು ಟಿಪ್ಪಣಿ.

ಏಶ್ಯಾಕ್ಕೂ 15ನೇ ಶತಮಾನದಲ್ಲೇ ಯುರೋಪಿಯನ್‌ರ ಪಾದಾರ್ಪಣೆ ಆಯಿತು. ಇಲ್ಲೂ ಪೋರ್ಚುಗೀಸರೇ ಮೊದಲಿಗರು. ಡಚ್ಚರು, ಫ್ರೆಂಚರು, ಬ್ರಿಟಿಷರು, ಸ್ಪಾನಿಷ್ ಆಮೇಲೆ ಬಂದರು. ಆಗ ಪಶ್ಚಿಮ ಏಶ್ಯಾ ಮತ್ತು ಏಶ್ಯಾಗೆ ಯುರೋಪಿನ 'ಬಾಗಿಲ'ನ್ನು ತುರ್ಕಿ ಒಟ್ಟೊಮನ್ ಸಾಮ್ರಾಜ್ಯ ನಿಯಂತ್ರಿಸುತ್ತಿತ್ತು. ಆದ್ದರಿಂದ ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಆಫ್ರಿಕಾಕ್ಕೆ ಸುತ್ತುಹಾಕಿ ಬಳಸು ದಾರಿ ಕಂಡು ಹಿಡಿದರು.

ಅವರ ಮುಖ್ಯ ಗುರಿ ಸಾಂಬಾರ ಪದಾರ್ಥಗಳ ವ್ಯಾಪಾರ. ಮೊದಲು ವ್ಯಾಪಾರಿ ನೆಲೆಗಳು, ಆಮೇಲೆ ವ್ಯಾಪಾರಿ ಸವಲತ್ತುಗಳ ಬಗ್ಗೆ ಒತ್ತಾಯ, ದುರ್ಬಲ ಸ್ಥಳೀಯ ರಾಜರ ಮೇಲೆ ಒತ್ತಡ-ಹೆಚ್ಚುತ, ನಿಯಂತ್ರಣ ನೇರ ರಾಜಕೀಯ ನಿಯಂತ್ರಣ-ಹೀಗೆ ಹಂತ ಹಂತವಾಗಿ ತಮ್ಮ ಅಧಿಪತ್ಯ ಸ್ಥಾಪಿಸಿದರು. ಆರಂಭದ ಹಂತಗಳಲ್ಲಿ ಸ್ವಾಭಾವಿಕವಾಗಿಯೇ ಬೇರೆ ಬೇರೆ ಯುರೋಪಿಯನ್ ಸಾಮ್ರಾಜ್ಯಶಾಹಿಗಳ ನಡುವೆ, ಪ್ರದೇಶಗಳ ನಿಯಂತ್ರಣಕ್ಕೆ ಪೈಪೋಟಿ, ವಿವಾದ, ಯುದ್ಧಗಳೂ ನಡೆದುವು. 19ನೇ ಶತಮಾನದ ಉತ್ತರಾರ್ಧದ ಹೊತ್ತಿಗೆ ಇಡೀ ಭಾರತೀಯ ಉಪಖಂಡ(ಈಗಿನ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ, ಭೂಪಾಲ್, ಬರ್ಮಾ, ನೇಪಾಳ)ವನ್ನು ಬ್ರಿಟಿಷರು ವಶಪಡಿಸಿಕೊಂಡಿದ್ದರು. ಈಸ್ಟ್ ಇಂಡೀಸ್ ದ್ವೀಪಗಳು(ಆಗಿನ ಇಂಡೋನೇಶ್ಯಾ) ಡಚ್ಚರ ಪಾಲಾಗಿತ್ತು. ಇದಲ್ಲದೆ ಮಲಯಾ(ಮಲೇಶ್ಯಾ, ಸಿಂಗಾಪೂರ) ಬ್ರಿಟಿಷರ ಪಾಲಾಗಿತ್ತು. ಇಂಡೋಚೀನಾದಲ್ಲಿ (ಈಗಿನ ವಿಯೆಟ್ನಾಂ, ಲಾವೋಸ್, ಕಂಬೋಡಿಯಾ) ಫ್ರೆಂಚರ ಪಾಲಾಗಿತ್ತು. ಫಿಲಿಪೈನ್ಸ್, ಸ್ಪಾನಿಷ್ ನಿಯಂತ್ರಣದಲ್ಲಿತ್ತು. ಪಶ್ಚಿಮ ಏಶ್ಯಾದಲ್ಲೂ ಬ್ರಿಟಿಷರು ತಮ್ಮ ಹಿಡಿತ ಸಾಧಿಸಿದರು. ಒಂದೆರಡು ಫ್ರೆಂಚರು, ಸ್ಪಾನಿಷರು ವಸಾಹತುಗಳನ್ನು ಹಿಡಿದರು. ಇರಾನ್, ಇರಾಕ್‌ಗಳ ಮೇಲೂ ಬ್ರಿಟಿಷರ ಹಿಡಿತ ಸಾಧಿಸಿದರು. ನೇಪಾಳ, ಅಫಘಾನಿಸ್ತಾನ, ಥೈಲೆಂಡ್, ಸೌದಿ ಅರೇಬಿಯಾದಂತಹ ಬ್ರಿಟಿಷರ ನೇರ ಆಡಳಿತ ಬಾರದಿದ್ದರೂ, ಅವುಗಳ ಮೇಲೆ ಆರ್ಥಿಕ,

ಏಶ್ಯಾ - 1914 ರಲ್ಲಿ



ಈಗಿನ ಏಶ್ಯಾ



ರಾಜಕೀಯ, ಮಿಲಿಟರಿ ಹಿಡಿತ ಇತ್ತು. ಮಧ್ಯ ಏಶ್ಯಾದ ಹೆಚ್ಚಿನ ದೇಶಗಳು ರಷ್ಯಾ ಸಾಮ್ರಾಜ್ಯದ ಭಾಗವಾಗಿ ಮೊದಲೇ ಹೋಗಿದ್ದವು - 19ನೇ ಶತಮಾನದ ಆರಂಭದ ಹೊತ್ತಿಗೆ. ಚೀನಾ ನೇರವಾಗಿ ಯಾವುದೇ ದೇಶದ ವಸಾಹತು ಆಗದಿದ್ದರೂ, ಅಲ್ಲಿ ಯಾವುದೇ ಕೇಂದ್ರೀಕೃತ ಸರಕಾರವಿಲ್ಲದೆ, ಎಲ್ಲಾ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಒಳಗಾಗಿದ್ದರು. ಬ್ರಿಟಿಷರು, ಫ್ರೆಂಚರು, ಜರ್ಮನರು, ಡಚ್ಚರು, ಅಮೆರಿಕನ್ನರು, ಚೀನಾದ ಹಲವು ಪ್ರದೇಶಗಳ ಮೇಲೆ ಹಿಡಿತ ಸಾಧಿಸಿದ್ದರು. ಇವರೆಲ್ಲಾ ಚೀನಾದೊಳಗೆ ಹೋಗಿದ್ದು ಅಫೀಮು ವ್ಯಾಪಾರದ ಮೇಲೆ. ಎರಡು ಮಹಾಯುದ್ಧಗಳ ನಡುವೆ ಜಪಾನು ತನ್ನ ಸಾಮ್ರಾಜ್ಯಶಾಹಿ ದಾಳಿ ಆರಂಭಿಸಿತು. ಕೋರಿಯಾ, ಚೀನಾದ ಹಲವು ಭಾಗಗಳನ್ನು ಕಬಳಿಸಿತು. 1898 ರಲ್ಲಿ ನಡೆದ ಅಮೆರಿಕ ಸ್ಪಾನಿಷ್ ಯುದ್ಧದ ನಂತರ ಫಿಲಿಫೈನ್ಸ್‌ನ ನಿಯಂತ್ರಣ ಅಮೆರಿಕಕ್ಕೆ ಹೋಯಿತು.

ಏಶ್ಯಾದ ಹೆಚ್ಚಿನ ದೇಶಗಳಲ್ಲಿ ಯುರೋಪಿಯನ್ ವಸಾಹತುಗಾರರು ಸ್ಥಳೀಯ ಜನರಿಂದ ಒಳಗೂಡಿದ ಸೈನ್ಯ ಕಟ್ಟಿದ್ದರು. ಸ್ಥಳೀಯ ಆಡಳಿತದಲ್ಲಿ ಅಲ್ಲಿಯ ಜನರನ್ನು ಬಳಸುತ್ತಿದ್ದರು. ಅವರ ಆಡಳಿತಕ್ಕೆ ಬೇಕಾದಷ್ಟು ಆಧುನಿಕ ಶಿಕ್ಷಣ ಕೊಟ್ಟಿದ್ದರು. ಇದರಿಂದ ಒಂದು ಜನವಿಭಾಗ ಆಧುನೀಕರಣವಾಗಿದ್ದು, ಅದು ವಸಾಹತುಶಾಹಿ ಆಡಳಿತದ ಮೇಲೆ ಹೆಚ್ಚಿನ ಸ್ವಾಯತ್ತತೆ ಕೇಳಿ ಒತ್ತಾಯ ತರಹತ್ತಿತು. 20ನೇ ಶತಮಾನದಲ್ಲಿ ಅದರಲ್ಲೂ ಮೊದಲನೆಯ ಮಹಾಯುದ್ಧದ ನಂತರ ಸ್ವಾತಂತ್ರ್ಯ, ಸ್ವಾಯತ್ತತೆಗೆ, ಸ್ವಯಂ-ನಿರ್ಧಾರದ ಈ ಚಳುವಳಿ ಬಲಗೊಂಡಿತು. ಇತರ ಜನವಿಭಾಗಗಳಿಗೂ ಇದು ಹಬ್ಬಿತು. ಮೊದಲನೆಯ ಮಹಾಯುದ್ಧದ ಕೊನೆಗೆ ರಶ್ಯನ್ ಸಾಮ್ರಾಜ್ಯದೊಳಗಿದ್ದ ಮಧ್ಯ ಏಶ್ಯಾದ ದೇಶಗಳು ಸ್ವತಂತ್ರ ವಾದವು.

ಮಂಗೋಲಿಯ ಸಹ ಸ್ವತಂತ್ರವಾಯಿತು. ಮಧ್ಯಏಶ್ಯಾದ ದೇಶಗಳು ಲೆನಿನ್ ಕ್ರಾಂತಿಯ ನಂತರ ಮಂಡಿಸಿದ ಸೋವಿಯತ್ ಒಕ್ಕೂಟದಲ್ಲಿ ಸ್ವಾಯತ್ತತೆ ಇರುವ ಗಣರಾಜ್ಯಗಳಾಗಿ ಸ್ವಯಂ-ನಿರ್ಧಾರದಿಂದ ಸೇರಿದವು. ರಶ್ಯನ್ ಕ್ರಾಂತಿ ಮತ್ತು ಸೋವಿಯತ್ ಒಕ್ಕೂಟದ ಕ್ರಾಂತಿ ನಂತರದ ವೇಗವಾದ ಬೆಳವಣಿಗೆ ಎಲ್ಲಾ ಕಡೆ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಪರಿಣಾಮ ಬೀರಿತು. ಹೆಚ್ಚಿನ ದೇಶಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಒಂದು ವಿಭಾಗ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದು ತಮ್ಮ ಗುರಿಯಾಗಿಸಿಕೊಂಡರು. **ಚೀನಾ, ಇಂಡೋ-ಚೀನಾ, ಈಸ್ಟ್ ಇಂಡಿಸ್‌ಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿದವು ಇಲ್ಲವೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದವು. ಎರಡನೇ ಮಹಾಯುದ್ಧದ ಹೊತ್ತಿಗಂತೂ ಇವುಗಳಲ್ಲಿ ಹಲವು ಸಶಸ್ತ್ರ ದಳಗಳನ್ನು ಕಟ್ಟಿದ್ದವು. ಭಾರತ ಉಪಖಂಡ ಮತ್ತು ಪಶ್ಚಿಮ ಏಶ್ಯಗಳಲ್ಲಿ ಮಾತ್ರ ರಾಷ್ಟ್ರೀಯ ಬೂರ್ಶ್ವಾವರ್ಗ ಅಥವಾ ಇತರ ಪ್ರತಿಷ್ಠಿತ ವರ್ಗಗಳು ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿದ್ದವು.**

ಎರಡನೇ ಮಹಾಯುದ್ಧದಲ್ಲಿ ಜಪಾನ್ ತನ್ನ ಸಾಮ್ರಾಜ್ಯಶಾಹಿ ದಾಳಿಯನ್ನು ವಿಸ್ತರಿಸಿ, ಇಂಡೋ-ಚೀನಾ, ಈಸ್ಟ್ ಇಂಡೀಸ್ ದ್ವೀಪಗಳನ್ನು ಕೊರಿಯಾ, ಚೀನಾದ ಹಲವು ಭಾಗಗಳನ್ನು ವಶಪಡಿಸಿಕೊಂಡಿತು. ಇತರ ಎಲ್ಲಾ ದೇಶಗಳಲ್ಲೂ ಸ್ವಾತಂತ್ರ್ಯ, ಸ್ವಾಯತ್ತತೆ, ಸ್ವಯಂ-ನಿರ್ಧಾರಕ್ಕೆ ಚಳುವಳಿ ತೀವ್ರವಾಯಿತು. ಎರಡನೇ ಮಹಾಯುದ್ಧ ಮುಗಿಯುತ್ತಿದ್ದಂತೆ ಸಾಮ್ರಾಜ್ಯಶಾಹಿ ಹೆಚ್ಚಿನ ಕಡೆ ಸ್ವಾತಂತ್ರ್ಯ ಕೊಡಲೇಬೇಕಾದ ಮಟ್ಟಕ್ಕೆ ಪರಿಸ್ಥಿತಿ ಮುಟ್ಟಿತು. 50 ರ ದಶಕದ ಕೊನೆಯ ಒಳಗೆ ಹೆಚ್ಚಿನ ದೇಶಗಳು ಸ್ವತಂತ್ರವಾದವು. ಅದರಲ್ಲೂ ಸ್ಥಳೀಯ ಬೂರ್ಶ್ವಾವರ್ಗ, ರಾಜರು ಅಥವಾ ಪ್ರತಿಷ್ಠಿತ ವರ್ಗ ಬಲವಾಗಿದ್ದ ದೇಶಗಳಲ್ಲಿ(ಮುಖ್ಯವಾಗಿ ಭಾರತೀಯ ಉಪಖಂಡ, ಪಶ್ಚಿಮ ಏಶ್ಯಾ) ಸಾಮ್ರಾಜ್ಯಶಾಹಿಗಳು ಅವರ ಜತೆ ತಮ್ಮ ಹಿತಾಸಕ್ತಿಗಳಿಗೆ ತೀವ್ರ ಧಕ್ಕೆ ಬರದ ಹಾಗೆ ರಾಜಿ ಮಾಡಿಕೊಂಡರು. ಆದರೆ ಎಲ್ಲೆಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿ ಪಾತ್ರ ಅಥವಾ ನಿರ್ಣಾಯಕ ಪಾತ್ರ ವಹಿಸಿದ್ದವೋ ಅಲ್ಲೆಲ್ಲಾ ಹಳೆಯ ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಹೋದರೂ ಅಮೆರಿಕನ್ ತನ್ನ ಮೂಗು ತೂರಲು ಪ್ರಯತ್ನಿಸಿತು. ಹಳೆಯ ಸಾಮ್ರಾಜ್ಯಶಾಹಿ ದೇಶ, ಸ್ಥಳೀಯ ಬಾಲಬಡುಕ ಶ್ರೀಮಂತ ವರ್ಗ ಮತ್ತು ಅಮೆರಿಕ ಸೇರಿ ಕಮ್ಯುನಿಸ್ಟ್ ಪಕ್ಷದ ಮೇಲೆ ದಮನ ಚಕ್ರ ಆರಂಭಿಸಿದವು. ಚೀನಾ ಮಾತ್ರ ಇದಕ್ಕೆ ಅಪವಾದವಾಗಿತ್ತು. ಅಲ್ಲಿ ಅಂತಹ ಪ್ರಯತ್ನ ನಡೆದರೂ ಅದಕ್ಕೆ ಫಲ ದಕ್ಕಲಿಲ್ಲ. ಆದರೆ ಇಂಡೋ-ಚೀನಾ(ವಿಯೆಟ್ನಾಮ್, ಲಾವೋಸ್,

ಏಶ್ಯಾ

ದೇಶ	ವಸಾಹತು	ಸ್ವಾತಂತ್ರ್ಯ
1. ಚೀನಾ	ಬ್ರಿಟನ್, ಫ್ರಾನ್ಸ್, ಯುಎಸ್ ಜರ್ಮನಿ, ಜಪಾನ್	1949
2. ಮಂಗೋಲಿಯ	ರಷ್ಯಾ	1924
3. ಉ.ಕೊರಿಯ	ಜಪಾನ್, ಯುಎಸ್	1948
4. ದ.ಕೊರಿಯ	ಜಪಾನ್, ಯುಎಸ್	1948
5. ಜಪಾನ್	★	★
6. ವಿಯೆಟ್ನಾಂ	ಫ್ರಾನ್ಸ್	1945
7. ಲಾವೋಸ್	ಫ್ರಾನ್ಸ್	1954
8. ಥೈಲಾಂಡ್	ಬ್ರಿಟನ್★	★
9. ಕಾಂಬೋಡಿಯಾ	ಫ್ರಾನ್ಸ್, ಜಪಾನ್	1953
10.ಸಿಂಗಾಪುರ್	ಬ್ರಿಟನ್ ★	1957
11.ಬ್ರೂನಿ	ಬ್ರಿಟನ್	1984
12.ಮಾಯನ್ಮಾರ್	ಬ್ರಿಟನ್, ಜಪಾನ್	1948
13.ಭಾರತ	ಬ್ರಿಟನ್	1947
14.ನೇಪಾಳ	ಬ್ರಿಟನ್ ★	★
15.ಬಾಂಗ್ಲಾದೇಶ	ಬ್ರಿಟನ್, ಪಾಕಿಸ್ತಾನ್	1971
16.ಇಂಡೋನೇಶಿಯಾ	ಡಚ್, ಜಪಾನ್	1949
17.ಮಲೇಶಿಯಾ	ಬ್ರಿಟನ್	1957
18.ಭೂತಾನ್	ಬ್ರಿಟನ್	1960
19.ಮಾಲ್ದೀವ್ಸ್	ಪೋರ್ಚುಗಲ್, ಬ್ರಿಟನ್	1976
20.ಫಿಲಿಫೈನ್ಸ್	ಸ್ಪೇನ್, ಯು.ಎಸ್., ಜಪಾನ್	1946
21.ಥೈವಾನ್	ಡಚ್, ಪೋರ್ಚುಗಲ್, ಜಪಾನ್	1948
22.ಶ್ರೀಲಂಕಾ	ಪೋರ್ಚುಗಲ್, ಡಚ್, ಬ್ರಿಟನ್	1948
23.ಪಾಕಿಸ್ತಾನ್	ಬ್ರಿಟನ್	1947
24.ಅಫಘಾನಿಸ್ತಾನ್	ಬ್ರಿಟನ್ ★	★
25.ರಷ್ಯಾ	★	★
26. ಜಾರ್ಜಿಯಾ	ರಷ್ಯಾ	1921
27.ತಾಜಿಕಿಸ್ತಾನ್	ರಷ್ಯಾ	1921
28. ಕಝಕ್‌ಸ್ತಾನ್	ರಷ್ಯಾ	1920
29.ಉಜ್ಬೇಕಿಸ್ತಾನ್	ರಷ್ಯಾ	1920
30.ತುರ್ಕ್‌ಮೆನಿಸ್ತಾನ್	ರಷ್ಯಾ	1918
31. ಕಿರ್ಗಿಸ್ತಾನ್	ರಷ್ಯಾ	1921
32.ಅಜರ್‌ಬೈಜಾನ್	ರಷ್ಯಾ	1920
33.ಅರ್ಮೇನಿಯಾ	ರಷ್ಯಾ	1920
34.ತುರ್ಕಿ	ಬ್ರಿಟನ್, ಫ್ರಾನ್ಸ್	1923
35.ಇರಾನ್	ಬ್ರಿಟನ್, ರಷ್ಯಾ	1906
36.ಒಮನ್	ಪೋರ್ಚುಗಲ್	1970
37.ಯೆಮೆನ್	ಬ್ರಿಟನ್	1970
38.ಯು.ಎ.ಇ.	ಪೋರ್ಚುಗಲ್, ಬ್ರಿಟನ್	1971
39.ಸೌದಿ ಅರೆಬಿಯಾ	ಬ್ರಿಟನ್★	★
40.ಕುವೈತ್	ಬ್ರಿಟನ್	1961
41.ಇರಾಕ್	ಬ್ರಿಟನ್	1932
42.ಜೋರ್ಡಾನ್	ತುರ್ಕಿ, ಬ್ರಿಟನ್	1946
43.ಲೆಬನಾನ್	ಫ್ರಾನ್ಸ್	1946
44.ಬೆಹರೆನ್	ಬ್ರಿಟನ್	1971
45.ಇಸ್ರೇಲ್	ಬ್ರಿಟನ್	1948
46.ಸೈರಿಯಾ	ಬ್ರಿಟನ್, ಫ್ರಾನ್ಸ್	1925


ಕಂಬೋಡಿಯಾ) ಮತ್ತು ಕೊರಿಯಾದಲ್ಲಿ ಇಂತಹ ಪ್ರಯತ್ನಗಳಿಗೆ ಭಾಗಶಃ ಯಶಸ್ಸು ದೊರೆಯಿತು. ಇಂಡೋ-ಚೀನಾದ ದೇಶಗಳಲ್ಲಿ ಅಮೆರಿಕದ ವಿರುದ್ಧ ಇನ್ನೊಂದೆರಡು ದಶಕ ಸಶಸ್ತ್ರ ಹೋರಾಟ ಮುಂದುವರೆಸಬೇಕಾಯಿತು. ನಿಜವಾದ ಸ್ವಯಂ-ನಿರ್ಧಾರದ ಹಕ್ಕು ಪಡೆಯಲು. ಬೆಳವಣಿಗೆಗೆ ಬೇಕಾದ ಶಾಂತಿಯುತ ಆಂತರಿಕ ಪರಿಸ್ಥಿತಿ ತರಲು. ಕೊನೆಗೂ ಜಯ ಸಿಕ್ಕಿದರೂ, ಒಂದೆರಡು ದಶಕಗಳ ಬೆಳವಣಿಗೆ ಹಲವು ಕ್ಷೇತ್ರಗಳಲ್ಲಿ ಶಾಶ್ವತ ನಷ್ಟವಾಯಿತು- ಈ ದೇಶಗಳಿಗೆ. ಮಲೇಶ್ಯಾ, ಫಿಲಿಫೈನ್ಸ್, ಥೈಲೆಂಡ್, ಬರ್ಮಾದ ಕಮ್ಯುನಿಸ್ಟ್ ಪಕ್ಷಗಳು ಮತ್ತು ಅವುಗಳ ಸಶಸ್ತ್ರ ದಳಗಳನ್ನು ಸಾಮ್ರಾಜ್ಯಶಾಹಿ(ಹಳೆ, ಹೊಸ ಎಲ್ಲಾ) ಮತ್ತು ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಗಳು ಹೊಸಕಿ ಹಾಕಿದವು. ಕೊರಿಯಾ ಅಮೆರಿಕದ ಮಧ್ಯ ಪ್ರವೇಶದಿಂದ ಇಬ್ಭಾಗವಾಗಬೇಕಾಯಿತು. ದಕ್ಷಿಣ ಕೊರಿಯಾ ಅಮೆರಿಕದ ಹೆಚ್ಚು ಕಡಿಮೆ ವಸಾಹತಿನಂತೆ ಉಳಿದು ಹೋಯಿತು. ವಿಯೆಟ್ನಾಂ, ಲಾವೋಸ್, ಕಂಬೋಡಿಯಾಗಳು ನಿಜವಾದ ಸ್ವಾತಂತ್ರ್ಯಕ್ಕೆ 70 ರ ದಶಕದವರೆಗೆ ಕಾಯಬೇಕಾಯಿತು. ಮಧ್ಯ ಏಶ್ಯಾದಲ್ಲಿ ಬ್ರಿಟಿಷರ-ಫ್ರೆಂಚರ ಕುತಂತ್ರದಿಂದ ಪ್ಯಾಲೆಸ್ತೈನ್ ಜನರ ಸ್ವಯಂ ನಿರ್ಧಾರದ ಪ್ರಶ್ನೆ, ಹಾಗೆ ಉಳಿಯಿತು. ಅದೇ ಕುತಂತ್ರದಿಂದ ಇಸ್ರೇಲ್ ಮತ್ತು ಅರಬ್ ದೇಶಗಳ ನಡುವೆ ಯುದ್ಧದ ನೆಪದಲ್ಲಿ ಆ ಪ್ರದೇಶದಲ್ಲಿ ಮಧ್ಯ ಪ್ರವೇಶ ಮಾಡಲು ಫಲವತ್ತಾದ ಅವಕಾಶಗಳನ್ನು ಸಾಮ್ರಾಜ್ಯಶಾಹಿ ಉಳಿಸಿಕೊಂಡಿದೆ.

ಹೆಚ್ಚಿನ ಏಶ್ಯನ್ ದೇಶಗಳಿಗೆ ಸ್ವಾತಂತ್ರ್ಯ ಬಂದ ಮೇಲೂ ಸಾಮ್ರಾಜ್ಯಶಾಹಿ-ವಿರೋಧಿ ಸ್ವತಂತ್ರ ಬೆಳವಣಿಗೆಯ ಹಾದಿ ಹಿಡಿದಾಗೆಲ್ಲ ನವ-ಸಾಮ್ರಾಜ್ಯಶಾಹಿ ಒಂದಲ್ಲ ಒಂದು ರೀತಿಯಲ್ಲಿ(ಮಿಲಿಟರಿಯಾಗಿ ಸೇರಿ) ಮಧ್ಯ ಪ್ರವೇಶಮಾಡಿ, ತನ್ನ ಹಿತಾಸಕ್ತಿಗಳನ್ನು ಕಾಪಾಡಲು ಪ್ರಯತ್ನಿಸಿದರು. 50 ರ ದಶಕದಲ್ಲಿ ತೈಲ ಕಂಪನಿಗಳನ್ನು ರಾಷ್ಟ್ರೀಕರಿಸಿದ ಇರಾನಿನ ಪ್ರಧಾನಿ ಮಹಮ್ಮದ್ ಮೊಸದೆಗ್ ಹತ್ಯೆ ಮತ್ತು ಅಮೆರಿಕನ್ ಕೈಗೊಂಬೆ ಶಾನನ್ನು ಅಧಿಕಾರಕ್ಕೆ ತಂದಿದ್ದು. ಸಾಮ್ರಾಜ್ಯಶಾಹಿ ಕೈಗೊಂಬೆ ಚಿಯಾಂಗ್-ಕೈಶೇಕ್ ನ ಚೀನಾದ ವಿರುದ್ಧ ತೈವಾನ್‌ನಲ್ಲಿ ಶಾಶ್ವತವಾಗಿ ಕಿರುಕುಳಕೊಡಲು ತಯಾರಿ, ಇಂಡೋ-ಚೀನಾದಲ್ಲಿ ಅಮೆರಿಕನ್ ನೇರ ಮಧ್ಯ ಪ್ರವೇಶ, ಮಧ್ಯ-ಏಶ್ಯಾದಲ್ಲಿ ಅರಬ್ ದೇಶಗಳಿಗೆ ಕಿರುಕುಳ ಕೊಡಲು ಪ್ಯಾಲೆಸ್ತೈನ್ ಸಮಸ್ಯೆ ಜೀವಂತವಾಗಿಡಲು ಇಸ್ರೇಲ್‌ನ ಬಳಕೆ, **ಭಾರತ ಉಪಖಂಡದಲ್ಲಿ ಭಾರತದ ವಿರುದ್ಧ ಕಿರುಕುಳ ಕೊಡಲು ಪಾಕಿಸ್ತಾನದ ಬಳಕೆ,** ಅಫಘಾನಿಸ್ತಾನ ಮತ್ತು ಇತರೆಡೆ ಪ್ರಗತಿಪರರಿಗೆ ಕಿರುಕುಳ ಕೊಡಲು ಮುಸ್ಲಿಂ-ಮೂಲಭೂತವಾದಿ ಸಂಘಟನೆಗಳಿಗೆ ಕುಮ್ಮಕ್ಕು, ಇಂಡೋನೇಶ್ಯಾದಲ್ಲಿ ಸ್ವತಂತ್ರ ಸುಕಾರ್ನೋ-ಕಮ್ಯುನಿಸ್ಟ್ ಹೊಂದಾಣಿಕೆ ಮತ್ತು ಪ್ರಾಬಲ್ಯ ಮುರಿಯಲು ಜನರಲ್ ಸುಹಾರ್ತೋ ಮೂಲಕ ಮಿಲಿಟರಿ ಕ್ಷಿಪ್ರಕ್ರಾಂತಿ - ಹಲವು ಉದಾಹಣೆಗಳಿವೆ. ನೆಹರೂ-ನಾಸೆರ್-ಸುಕಾರ್ನೋ ಪ್ರತಿಪಾದಿಸಿ ಆರಂಭಿಸಿದ ಅಲಿಪ್ತ ಚಳುವಳಿ ಇದನ್ನು ಸಾಕಷ್ಟು ಮಟ್ಟಿಗೆ ಎದುರಿಸಿತು, ಏಶ್ಯಾದಲ್ಲಿ. ಆದರೆ ಸೋವಿಯತ್ ಒಕ್ಕೂಟದ ವಿಘಟನೆಯ ಹಿನ್ನೆಲೆಯಲ್ಲಿ ಪುನಃ ಸ್ವತಂತ್ರ ದೇಶಗಳ ಸ್ವಯಂ-ನಿರ್ಧಾರ ಮೊಟಕು ಮಾಡುವ ಪ್ರಯತ್ನ ಪುನಃ ಆರಂಭವಾಗಿವೆ. ಈ ಸಂದರ್ಭದಲ್ಲಿ ಚೀನಾದಲ್ಲಿ ಮಾವೋ, ಭಾರತದಲ್ಲಿ ಮಹಾತ್ಮ ಗಾಂಧಿ, ಇಂಡೋನೇಶ್ಯಾದಲ್ಲಿ

ಸುಕಾರ್ನೋ, ವಿಯೇಟ್ನಾಂನಲ್ಲಿ ಹೋಚಿ-ಮಿನ್ ಮತ್ತು ಕೊರಿಯಾದಲ್ಲಿ ಕಿಮ್-ಆಲ್-ಸುಂಗ್ ನಾಯಕತ್ವದ ಸ್ವಾತಂತ್ರ್ಯ ಹೋರಾಟವನ್ನು ನೆನಪಿಸಿಕೊಳ್ಳಬೇಕು.

ಹೊ-ಚಿ-ಮಿನ್

ಲೆನಿನ್, ಮಾವೋ ಬಿಟ್ಟರೆ ಅತ್ಯಂತ ಎತ್ತರ ವ್ಯಕ್ತಿತ್ವದ ವಿಶ್ವ ಕಮ್ಯುನಿಸ್ಟ್ ನಾಯಕ. ವಿಯೆಟ್ನಾಂ ಮಾತ್ರವಲ್ಲ ಇಂಡೋ-ಚೀನಾದ ದೇಶಗಳಲ್ಲಿ ಸ್ವಾತಂತ್ರ್ಯ ಮತ್ತು ಕಮ್ಯುನಿಸ್ಟ್ ಚಳುವಳಿಗಳ ಪಿತಾಮಹ, ಜಗತ್ತಿನ ಅತ್ಯಂತ ಪ್ರಬಲ ಸಾಮ್ರಾಜ್ಯಶಾಹಿ ದೇಶವನ್ನು ದಶಕದ ಕಾಲ ನಡುಗಿಸಿದ ಧೀರ ಹೋರಾಟಗಾರ, ವಿಯೆಟ್ನಾಮಿನ ರಾಷ್ಟ್ರಪಿತ. ಸ್ಕೂಲ್ ಮಾಸ್ತರರಾಗಿ ಕೆಲಸ ಆರಂಭಿಸಿದ 'ಹೊ ಮಾಮ'(ವಿಯೆಟ್ನಾಮ್ ಜನ ಆತನನ್ನು ಅಭಿಮಾನದಿಂದ ಕರೆಯುತ್ತಿದ್ದುದು ಹಾಗೆ) ಫ್ರೆಂಚ್ ಅಂತರ್ರಾಷ್ಟ್ರೀಯ ಸಾಗಾಣಿಕೆ ಹಡಗಿನಲ್ಲಿ ಅಡುಗೆಯವನಾಗಿ ವಿಶ್ವಯಾನ(ಅಮೆರಿಕ, ಆಫ್ರಿಕಾ, ಯುರೋಪು) ಮಾಡಿದರು. ಕೆಲ ವರ್ಷಗಳ ನಂತರ ಲಂಡನ್, ಆಮೇಲೆ ಪ್ಯಾರೀಸಿನಲ್ಲಿ ನೆಲೆನಿಂತ ಹೊ-ಚಿ-ಮಿನ್ ತೋಟಮಾಲಿ, ಕಸಗುಡಿಸುವವರು, ಮಾಣಿ ಅಡುಗೆಯವನು, ಫೋಟೋ ಅಂಗಡಿ ಸಹಾಯಕನಾಗಿ ಕೆಲಸ ಮಾಡಿದರು. ಕಾರ್ಮಿಕವರ್ಗದ ಚಟುವಟಿಕೆ ಮೂಲಕ ಫ್ರೆಂಚ್ ಸೋಶಲಿಸ್ಟ್ ಪಕ್ಷ ಸೇರಿದ ಹೋ, ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಗುಂಪಿನಲ್ಲಿದ್ದರು. ಫ್ರಾನ್ಸ್‌ನಲ್ಲೇ ವಿಯೆಟ್ನಾಮಿಯರ ಸಂಘಟನೆ ಮಾಡಿ, ಅದರ ಸ್ವಾತಂತ್ರ್ಯ ಬಗ್ಗೆ ಪ್ರಚಾರ ಆರಂಭಿಸಿದರು. ಮಾಸ್ಕೋದಲ್ಲಿ ತರಬೇತಿ ನಂತರ ಚೀನಾದಲ್ಲಿ ಇಂಡೋ-ಚೀನಾದಿಂದ ರಾಜಕೀಯ ಚಟುವಟಿಕೆಗಾಗಿ ಉಚ್ಚಾಟಿಸಲ್ಪಟ್ಟ ದೇಶಪ್ರೇಮಿಗಳನ್ನು ಸಂಘಟಿಸಿದರು. ಚೀನಾ ಮತ್ತು ಇಂಡೋ-ಚೀನಾ ಮಧ್ಯೆ ಓಡಾಡುತ್ತಾ ಹೋ



ಹೊ-ಚಿ-ಮಿನ್

ಇಂಡೋ-ಚೀನಾ ಕಮ್ಯುನಿಸ್ಟ್ ಪಕ್ಷ ಸಂಘಟಿಸಿದರು. ಹಲವು ವರ್ಷಗಳ ಕಾಲ ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ ಮಿಲಿಟರಿ ಸಲಹಾಕಾರರಾಗಿ ಸಹ ದುಡಿದರು. 1941 ರಲ್ಲಿ ಜಪಾನು ಇಂಡೋ-ಚೀನಾವನ್ನು ಆಕ್ರಮಿಸಿಕೊಂಡು ಫ್ರೆಂಚರನ್ನು ಬಡಿದೋಡಿಸಿದಾಗ ಹೋ 'ವಿಯಾಟ್‌ಮಿಸ್' ಜಪಾನಿಯರ ವಿರುದ್ಧ ಗೆರಿಲ್ಲಾ ಹೋರಾಟ ಆರಂಭಿಸಿತು. ಹೋ ಜತೆಗೆ ಫಾಮ್ ವಾಸ್‌ಡಾಂಗ್, ಪ್ರಸಿದ್ಧ ಮಿಲಿಟರಿ ನಾಯಕ ಗೀಯಾಪ್, ಲೆಮಆನ್ ಮುಂತಾದವರು ಇದಕ್ಕೆ ನಾಯಕತ್ವ ನೀಡಿದರು. 1945 ರಲ್ಲಿ ಜಪಾನ್ ಮೇಲೆ ಅಮೆರಿಕದ ಅಣುಬಾಂಬ್ ಎಸೆಯುವುದರೊಂದಿಗೆ ಯುದ್ಧ ಮುಗಿದಾಗ, ಹೋ ಈ ಸಂದರ್ಭ ಬಳಸಿ ವಿಯೆಟ್ನಾಮಿನ ಸ್ವಾತಂತ್ರ್ಯ ಘೋಷಿಸಿದರು. ಆದರೆ ಫ್ರೆಂಚರು ಅದಕ್ಕೆ ಒಪ್ಪಲಿಲ್ಲ. ಮೊದಲು ರಾಜಿ ಆಗಿ, ವಿಯೆಟ್ನಾಂಗೆ ಫ್ರಾನ್ಸ್‌ನ ಒಳಗೆ ಸ್ವಾಯತ್ತತೆ ಹೇರುವ ಒಪ್ಪಂದ ಆದರೂ, ಸ್ವಲ್ಪ ಸಮಯದಲ್ಲೇ ಇದು ಫ್ರೆಂಚರ ಜತೆ ಸಶಸ್ತ್ರ ಹೋರಾಟಕ್ಕೆ ಹಾದಿ ಮಾಡಿಕೊಟ್ಟಿತು. 1954 ರವರೆಗೆ ನಡೆದ ಈ ಸಶಸ್ತ್ರ ಹೋರಾಟದ ಕೊನೆಯಲ್ಲಿ ಹಲವು ಮಾತುಕತೆಗಳ ನಂತರ ವಿಯೆಟ್ನಾಂನ್ನು ಎರಡು ಭಾಗ ಮಾಡಿ ಉತ್ತರ ವಿಯೆಟ್ನಾಮನ್ನು 'ವಿಯೆಟ್‌ಮಿನ್' ಸರ್ಕಾರಕ್ಕೆ ಒಪ್ಪಿಸುವ ಒಪ್ಪಂದ ಆಯಿತು. ಇದರ ಪ್ರಕಾರ ಸ್ವಲ್ಪ ಸಮಯದ ನಂತರ ಚುನಾವಣೆಗೆ ದೇಶ ಐಕ್ಯವಾಗಬೇಕಾಗಿತ್ತು.

1959 ರಲ್ಲೇ ದಕ್ಷಿಣ ವಿಯೆಟ್ನಾಮಿನಲ್ಲಿ ಕಮ್ಯುನಿಸ್ಟ್ ನಾಯಕತ್ವದ(ಮಾಜಿ ವಿಯೆಟ್‌ನಾಮ್) ಹೋರಾಟಗಾರರು ವಿಯೆಟ್-ಕಾಂಗ್ ಹೆಸರಿನಲ್ಲಿ ದೇಶದ ಐಕ್ಯತೆಗೆ ಗೆರಿಲ್ಲಾ ಹೋರಾಟ ಆರಂಭಿಸಿದರು. ಈ ಹೋರಾಟ ಅಮೆರಿಕ 1965 ರಲ್ಲಿ ಉತ್ತರ ವಿಯೆಟ್ನಾಮಿನ ಮೇಲೆ ಬಾಂಬ್ ದಾಳಿ ಮಾಡುವ ಮೂಲಕ ಹೊಸ ತಿರುವು ಪಡೆಯಿತು. ಮುಂದಿನ ಹತ್ತು ವರ್ಷಗಳ ಕಾಲ ಹೋ ನಾಯಕತ್ವದಲ್ಲಿ ವಿಯೆಟ್ನಾಮಿಗಳ ಜಗತ್ತಿನ ಅತ್ಯಂತ ಬಲಾಢ್ಯ ದೇಶದ-ಅತ್ಯಂತ ಬಲಾಢ್ಯ ಮಿಲಿಟರಿಯನ್ನು ಎದುರಿಸಿ ಸೋಲಿಸಿದರು. 1969 ರಲ್ಲೇ ಹೋ ಮಡಿದರೂ, ಅವರ ನಾಯಕತ್ವದ ಪ್ರಖರತೆ ಬೆಂಬಲ ವಿಯೆಟ್ನಾಮಿನ ಗೆರಿಲ್ಲಾಗಳಿಗಿತ್ತು. ಇದೇ ಸಮಯದಲ್ಲಿ ಯುದ್ಧ -ಸ್ಥಿತಿಯಲ್ಲಿ ಉತ್ತರ ವಿಯೆಟ್ನಾಮಿನಲ್ಲಿ ಭೂ-ಸುಧಾರಣೆ ಮತ್ತು ಹಲವು ಬೆಳವಣಿಗೆ ಕಾರ್ಯಕ್ರಮಗಳಲ್ಲಿ ಹೋ ನಾಯಕತ್ವ ಅಪರಿಮಿತವಾದದ್ದು. ಹೋ ರನ್ನು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳ ಈ ಸಂದರ್ಭದಲ್ಲಿ ನೆನಪಿಸುವುದು ಅತ್ಯಂತ ಉಚಿತ.

ಸುಕಾರ್ನೋ

ಇಂಡೋನೇಶ್ಯಾದ ರಾಷ್ಟ್ರೀಯ ಹೋರಾಟದ ನಾಯಕ ಮತ್ತು ದೇಶದ ಪ್ರಥಮ ಅಧ್ಯಕ್ಷ(1945-63) ರಾಗಿ, ಅಲಿಪ್ತ ಚಳುವಳಿಯ ತ್ರಿವಳಿ ನಾಯಕರಲ್ಲಿ ಒಬ್ಬರಾಗಿ ಸುಕಾರ್ನೋ ಜಗತ್‌ಪ್ರಸಿದ್ಧರು. ಸುಕಾರ್ನೋ ಸಿವಿಲ್ ಇಂಜಿನಿಯರ್ ಆಗಿ ಪದವಿ ಪಡೆದು ತಮ್ಮ ದೇಶವನ್ನು ಆಕ್ರಮಿಸಿಕೊಂಡಿರುವ ಡಚ್ ಸಾಮ್ರಾಜ್ಯಶಾಹಿ ವಿರುದ್ಧ ರಾಜಕೀಯ ಚಳುವಳಿಗೆ ಧುಮುಕಿದರು. 'ರಾಷ್ಟ್ರೀಯವಾದ ಇಸ್ಲಾಮ್ ಮತ್ತು ಮಾರ್ಕ್ಸ್‌ವಾದ' ದ ಮಿಶ್ರಣವಾಗಿದ್ದ ಅವರ ರಾಜಕೀಯ ಧೋರಣೆ(ವಿಚಿತ್ರವೆನಿಸಿದರೂ, ಅವರನ್ನು ರಾಷ್ಟ್ರೀಯ ಹೋರಾಟದ ಮುಂಚೂಣಿಯ ನಾಯಕನನ್ನಾಗಿಸಿತು. ಸ್ವಾತಂತ್ರ್ಯ ಚಟುವಟಿಕೆಗೆ ಎರಡು ವರ್ಷ ಕಾಲ ಜೈಲುವಾಸ, ಎರಡು ವರ್ಷಗಳ ಗಡಿಪಾರು ಅನುಭವಿಸಿದರು. 1942 ರಲ್ಲಿ ಜಪಾನು ಇಂಡೋನೇಶ್ಯಾ ಆಕ್ರಮಿಸಿಕೊಂಡಾಗ ಜಪಾನೀಯರ ಜತೆ ಸಹಕರಿಸುವುದರ ಜೊತೆಗೆ ಇಂಡೋನೇಶ್ಯಾದ ಕಮ್ಯುನಿಸ್ಟ್ ಪಕ್ಷದ ಜತೆ ಗೆರಿಲ್ಲಾ ಹೋರಾಟಕ್ಕೆ ಸಿದ್ಧತೆ ನಡೆಸಿದರು. 1945 ರಲ್ಲಿ ಜಪಾನು ಯುದ್ಧದಲ್ಲಿ ಸೋಲುತ್ತಿದ್ದಂತೆ ಸುಕಾರ್ನೋ ಇಂಡೋನೇಶ್ಯಾದ ಸ್ವಾತಂತ್ರ್ಯ ಘೋಷಿಸಿದರು.

ಆದರೆ ಡಚ್ಚರು ಅಷ್ಟು ಸುಲಭದಲ್ಲಿ ತನ್ನ ವಸಾಹತು ಬಿಟ್ಟುಕೊಡಲು ತಯಾರಿರಲಿಲ್ಲ. ಮುಂದಿನ ನಾಲ್ಕು ವರ್ಷಗಳ ಕಾಲ ಸುಕಾರ್ನೋರ



ಸುಕಾರ್ನೋ

ಪಕ್ಷ ಮತ್ತು ಕಮ್ಯುನಿಸ್ಟ್ ಪಕ್ಷದ 'ಐಕ್ಯರಂಗ' ಸಶಸ್ತ್ರ ಹೋರಾಟ ನಡೆಸಿತು. 1945 ರಲ್ಲಿ ಡಚ್ಚರು ಅಧಿಕೃತವಾಗಿ ಇಂಡೋನೇಶ್ಯಾದಿಂದ ಕಾಲ್ತೆಗೆದರು.

ಇಂಡೋನೇಶ್ಯಾದ ಸ್ವಾತಂತ್ರ್ಯ ಹೋರಾಟದಲ್ಲಿ ಸೈನ್ಯದ ಮಹತ್ವದ ಪಾತ್ರವಿತ್ತು.ಸುಕಾರ್ನೋರ ಪಕ್ಷ ಸ್ವಾತಂತ್ರ್ಯನಂತರ ಪ್ರಮುಖ ಪಕ್ಷವಾಗಿ ಹೊಮ್ಮಲಿಲ್ಲ. ಚುನಾವಣೆಗಳಲ್ಲಿ ಹಾಗೂ ಸರ್ಕಾರಗಳಲ್ಲಿ ಸುಕಾರ್ನೋ ಕಮ್ಯುನಿಸ್ಟ್ ಪಕ್ಷದೊಂದಿಗೆ ಅಧಿಕಾರ ಹಂಚಿಕೊಳ್ಳಬೇಕಾಯಿತು. ಇಂಡೋನೇಶ್ಯಾದಲ್ಲಿ ಸರ್ಕಾರದಲ್ಲಿ ಸೈನ್ಯದ ಪಾತ್ರವೂ ಬಹಳವಿತ್ತು. ಸುಕಾರ್ನೋ ಪ್ರಭಾವಿ ಮಾತುಗಾರ, ಧೈರ್ಯಶಾಲಿ ನಾಯಕರಾದರೂ, ದೇಶದ ವ್ಯವಹಾರಗಳನ್ನು ನಡೆಸುವುದರಲ್ಲಿ ಕುಶಲರಾಗಿರಲಿಲ್ಲ. ಮಲೇಶ್ಯಾದ ಜತೆ ಜಗಳ, ವಿಶ್ವಸಂಸ್ಥೆಯಿಂದ ಹೊರಗೆ ಬಂದಿದ್ದು - ಇತ್ಯಾದಿ ಅಧ್ವಾನಗಳನ್ನು ಮಾಡಿದರು.

ಆಂತರಿಕ ಬಿಕ್ಕಟ್ಟು ಜಾಸ್ತಿಯಾಗುತ್ತಾ ಹೋದಂತೆ 'ಪಾರ್ಲಿಮೆಂಟರಿ ಪ್ರಜಾಪ್ರಭುತ್ವ' ವಜಾ ಮಾಡಿ 'ನಿರ್ದೇಶಿತ ಪ್ರಜಾಪ್ರಭುತ್ವ'ದ ಹೊಸ ವ್ಯವಸ್ಥೆ ತರಲು ಪ್ರಯತ್ನಿಸಿದರು. ಆದರೂ ಬಿಕ್ಕಟ್ಟು ಹೆಚ್ಚಾಗುತ್ತಾ ಹೋದಾಗ, ಸೈನ್ಯ ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಒಂದರ ಮೇಲೊಂದು ಕಟ್ಟಿ ನಿಭಾಯಿಸಲು ನೋಡಿದರು. ಅಮೆರಿಕ ಮತ್ತು ಸಿಐಎ ಇಂಡೋನೇಶ್ಯಾದ ಸ್ವತಂತ್ರ ನೀತಿ ಸುಕಾರ್ನೋ-ಕಮ್ಯುನಿಸ್ಟ್ ಪಕ್ಷದ ಮೈತ್ರಿ ಸರಕಾರ ಇವೆರಡನ್ನು ಆತಂಕದಿಂದ ಗಮನಿಸುತ್ತಿತ್ತು. ಅಮೆರಿಕ-ಪರ ಜನರಲ್‌ಗಳು ಮತ್ತು ಸಿಐಎ ಜಂಟಿಯಾಗಿ 1966 ರಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಿದರು. ಸುಕಾರ್ನೋರನ್ನು ನಾಮಮಾತ್ರದ ಅಧ್ಯಕ್ಷರಾಗಿಟ್ಟುಕೊಂಡೆ ಜನರಲ್ ಸುಹಾರ್ತೋ ಎಲ್ಲಾ ಅಧ್ಯಕ್ಷೀಯ ಅಧಿಕಾರಗಳನ್ನು ವಹಿಸಿಕೊಂಡರು. ಹಲವು ತಿಂಗಳುಗಳ ಕಾಲ ಇಡೀ ಕಮ್ಯುನಿಸ್ಟ್ ಸದಸ್ಯರನ್ನು ಮತ್ತು ಬೆಂಬಲಿಗರನ್ನು ನರಮೇಧ ಮಾಡಲಾಯಿತು(ಸುಮಾರು ಹತ್ತು ಲಕ್ಷ) ಆಮೇಲೆ 1968 ರವರೆಗೆ ಸುಕಾರ್ನೋ ಹೆಸರಿಗೆ ಅಧ್ಯಕ್ಷರಾಗಿದ್ದರೂ ಗೃಹಬಂಧನದಲ್ಲಿಟ್ಟರು. 1970 ರ ವರೆಗೆ ಸಾಯುವವರೆಗೂ ಗೃಹಬಂಧನದಲ್ಲಿದ್ದರು. ಜನರಲ್ ಸುಹಾರ್ತೋ ಅಧಿಕಾರ ವಹಿಸಿಕೊಂಡ ನಂತರ ಇಂಡೋನೇಶ್ಯಾ ಎಲ್ಲಾ ಪ್ರಗತಿಪರ ಧೋರಣೆ ಕೈಬಿಟ್ಟು ಅಮೆರಿಕ ತೊತ್ತಾಯಿತು.


ಸುಕಾರ್ನೋರ ಹಲವು ದೋಷಗಳಿದ್ದಾಗ್ಯೂ ಜಗತ್ತಿನ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲೊಬ್ಬರೆಂದು ಪರಿಗಣಿಸಲ್ಪಡುತ್ತಾರೆ.

ಲ್ಯಾಟಿನ್ ಅಮೇರಿಕ

ಲ್ಯಾಟಿನ್ ಅಮೆರಿಕಾ ಎಂದು ಕರೆಯುವುದು ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ. ದಕ್ಷಿಣಕ್ಕೆ ಇರುವ ಎಲ್ಲಾ ಪ್ರದೇಶಗಳನ್ನು ಉತ್ತರದಲ್ಲಿ ಮೆಕ್ಸಿಕೋದಿಂದ ದಕ್ಷಿಣದಲ್ಲಿ ಚಿಲಿ, ಅರ್ಜೆಂಟಿನಾದವರೆಗೆ. ಮೂರು ನೂರು ವರ್ಷಗಳ ಕಾಲ ಸ್ಪೈನ್, ಪೋರ್ಚುಗಲ್‌ನ ವಸಾಹತುಗಳಾಗಿದ್ದರಿಂದ ಈ ಹೆಸರು. ವಸಾಹತುಶಾಹಿಗೆ ಸಿಕ್ಕಿಬಿದ್ದ ಮೊದಲ ಖಂಡ. ಹಾಗೆನೇ ವಸಾಹತುಶಾಹಿಯಿಂದ ವಿಮೋಚನೆ ಪಡೆಯುವುದರಲ್ಲು ಮೊದಲಿಗ. ಈಗ ಉತ್ತರಕ್ಕಿರುವ 'ದೊಡ್ಡಣ್ಣ'ನ ನವ-ಸಾಮ್ರಾಜ್ಯಶಾಹಿ ರುಚಿ ಅನುಭವಿಸುತ್ತಿದೆ. ಸ್ವತಂತ್ರವಾಗಿದ್ದರೂ 'ದೊಡ್ಡಣ್ಣ'ನ ಗಿಡುಗ ನೋಟದಡಿಯಲ್ಲೇ ಬದುಕಬೇಕು. ಲ್ಯಾಟಿನ್ ಅಮೆರಿಕದ ವಸಾಹತುಶಾಹಿ ಚರಿತ್ರೆ ಮತ್ತು ಈಗಿನ ಪರಿಸ್ಥಿತಿಗೂ ಇರುವ ಸಂಬಂಧದ ಕಿರುಚಿತ್ರ.

ಅಮೆರಿಕ ಕೊಲಂಬಸ್ ಮತ್ತು ಆತನ ಯುರೋಪಿಯನ್ ನಾವಿಕರು 'ಹುಡುಕುವ' ಮೊದಲು ನಾಗರಿಕತೆ-ಸಂಸ್ಕೃತಿ ಅರಳಿದ್ದ, ಬೆಳೆದಿದ್ದ ಖಂಡ. ಕೊಲಂಬಸ್ ಇಂಡಿಯಾ ಹುಡುಕಲು ಹೊರಟು ಪೂರ್ವದ ಬದಲು ಪಶ್ಚಿಮಕ್ಕೆ ಹೋಗಿ 'ತಪ್ಪಾಗಿ ಹುಡುಕಿದ' ಖಂಡ. ಆತ ಮೊದಲು ಅನ್ವೇಷಣೆಯಲ್ಲಿ ಬಂದಿಳಿದದ್ದು ಈಗಿನ ವೆಸ್ಟ್-ಇಂಡೀಸ್ ದ್ವೀಪಗಳಲ್ಲಿ. ಕೊಲಂಬಸ್ ಮತ್ತು ಇತರ ಯುರೋಪಿಯನ್ನರು ಆಮೇಲಿನ ಅನ್ವೇಷಣೆಗಳಲ್ಲಿ ಅಮೆರಿಕ ಖಂಡದ ಹಲವು ಭಾಗಗಳನ್ನು ಕಂಡು ಹಿಡಿದರು. ಮುಂದಿನ ಹಲವು ದಶಕಗಳಲ್ಲಿ ಸ್ಪೈನ್ ಮತ್ತು ಪೋರ್ಚುಗಲ್‌ನ ನಾವಿಕರು, ಇಡೀ ಖಂಡದೊಳಗೆ ನೆಲೆಸಲು ಆರಂಭಿಸಿದರು. ಲ್ಯಾಟಿನ್ ಅಮೆರಿಕದ ಖನಿಜಗಳು, ಅರಣ್ಯ ಸಂಪತ್ತು, ಕೃಷಿ ಇವೆಲ್ಲಾ ವಸಾಹತುದಾರರಿಗೆ ಆಕರ್ಷಕವಾಗಿದ್ದವು. ನೆಲಸಲು ಸ್ಥಳೀಯರಿಂದ ಪ್ರತಿರೋಧ ಬಂದಾಗಲೆಲ್ಲಾ ಅವರ ಮೇಲೆ ಮೋಸ, ಮದ್ದು ಗುಂಡಿನ ಪ್ರಯೋಗದಿಂದ ಅವರನ್ನು ಹತ್ತಿಕ್ಕಿದರು. ಸ್ಥಳೀಯ ಅಮೆರಿಕನ್ನರ ಬಿಲ್ಲು-ಬಾಣಗಳ ಪ್ರತಿರೋಧ ಇವರ ಗನ್ನುಗಳ ಮುಂದೆ ಪ್ರಯೋಜನಕಾರಿಯಾಗಲಿಲ್ಲ. ಅವರನ್ನು ಗುಲಾಮರಂತೆ ಹೊಲಗಳಲ್ಲಿ, ಗದ್ದೆಗಳಲ್ಲಿ, ಅರಣ್ಯಗಳಲ್ಲಿ ದುಡಿಸಿಕೊಂಡರು. ಆರ್ಥಿಕ ಚಟುವಟಿಕೆ ಹೆಚ್ಚಾಗುತ್ತಾ ಹೋದಂತೆ ಯುರೋಪಿನಿಂದ ದೊಡ್ಡ ಸಂಖ್ಯೆಯಲ್ಲಿ ಬಂದರು. ವಸಾಹತುಗಾರರ ಜತೆ ಯುದ್ಧದಲ್ಲಿ ಮತ್ತು ಅವರು ತಂದ ಅಂಟು ರೋಗಗಳಿಗೆ ಬಲಿಯಾಗಿ ಸ್ಥಳೀಯ ಅಮೆರಿಕನ್ನರ ಸಂಖ್ಯೆ ಕಡಿಮೆಯಾಯಿತು. ನೂರುವರ್ಷಗಳೊಳಗೆ ಕೋಲಂಬಸ್ ಬರುವುದಕ್ಕಿಂತ ಮೊದಲಿದ್ದ ಸ್ಥಳೀಯರ ಸಂಖ್ಯೆಯ ಶೇ 15 ಕ್ಕೆ ಇಳಿದಿರಬೇಕು ಎಂದು ಅಂದಾಜು. ಆದ್ದರಿಂದ ವಸಾಹತುಗಾರರು ಆಫ್ರಿಕಾದಿಂದ ಕರಿಯ ಗುಲಾಮರನ್ನು 'ಆಮದು' ಮಾಡಲಾರಂಭಿಸಿದರು, ದೊಡ್ಡ ಸಂಖ್ಯೆಯಲ್ಲಿ. ಲ್ಯಾಟಿನ್ ಅಮೆರಿಕದ ವಸಾಹತುಶಾಹಿ ಚರಿತ್ರೆಯ ಮುಖ್ಯ ಲಕ್ಷಣವೆಂದರೆ (ಈ ಖಂಡಕ್ಕೆ ವಿಶಿಷ್ಟವಾದದ್ದು) **ಇಲ್ಲಿ ನಡೆದಿರುವ ಮೂರು ಖಂಡಗಳ ಸಂಕಟ - ಜನಾಂಗೀಯ, ಸಾಂಸ್ಕೃತಿಕ, ಸಾಮಾಜಿಕ ಸ್ತರಗಳಲ್ಲಿ. ಯುರೋಪಿಯನ್ನರು ಯಜಮಾನರು, ಸ್ಥಳೀಯರು ಆಫ್ರಿಕನ್ನರು ಗುಲಾಮರಾದರೂ ಸಾಮಾಜಿಕವಾಗಿ ಅವರು ಕಲೆತ, ಮಿಶ್ರ ಜನಾಂಗವಾಯಿತು. ಸ್ಥಳೀಯ, ಆಫ್ರಿಕನ್ ಭಾಷೆ, ಆಚಾರ-ವಿಚಾರ, ನಡವಳಿಕೆಗಳನ್ನು**

ಅಮೆರಿಕಾ - 1784



ಯುರೋಪಿನವರೊಂದಿಗೆ ಮಿಶ್ರ ಮಾಡಲಾಯಿತು. ಈ ಪ್ರಕ್ರಿಯೆ ಏಶ್ಯಾ ಅಥವಾ ಆಫ್ರಿಕದ ವಸಾಹತುಶಾಹಿ ಚರಿತ್ರೆಯಲ್ಲಿ ಕಂಡು ಬಂದದ್ದು.

ಇನ್ನೊಂದು ವೈಶಿಷ್ಟತೆ ಈ ಖಂಡದಲ್ಲಿ ವಸಾಹತುಶಾಹಿ ಪ್ರಕ್ರಿಯೆಯಲ್ಲಿ ಚರ್ಚ್ ವಹಿಸಿದ ದೊಡ್ಡ ಪಾತ್ರ. ಸ್ಪಾನಿಷ್ ಮತ್ತು ಪೋರ್ಚುಗೀಸರು ರೋಮನ್ ಕ್ಯಾಥೊಲಿಕ್ ಆದ್ದರಿಂದ ವಸಾಹತುಗಾರರೊಂದಿಗೆ ಚರ್ಚ್ ದೊಡ್ಡ ಸಂಖ್ಯೆಯಲ್ಲಿ ತನ್ನ ಕಾರ್ಯಕರ್ತರನ್ನು ಕಳಿಸಿತು. ದೊಡ್ಡ ಸಂಖ್ಯೆಯಲ್ಲಿ ಧರ್ಮ ಪ್ರಚಾರ, ಮತಾಂತರ, ಸಾಮಾಜಿಕ ಕೆಲಸಗಳಲ್ಲಿ ತೊಡಗಿದರು. ಆರ್ಥಿಕದಲ್ಲೂ ಚರ್ಚ್‌ನದ್ದು ದೊಡ್ಡ ಪಾತ್ರವಿತ್ತು. ವಸಾಹತುಶಾಹಿ ಅವಧಿಯ ಉದ್ದಕ್ಕೂ, ಚರ್ಚು ಅತ್ಯಂತ ದೊಡ್ಡ ಭೂಮಿ-ಆಸ್ತಿಯ ಒಡೆತನ ಇರುವ ಸಂಘಟನೆಯಾಗಿತ್ತಂತೆ. ಇವೆಲ್ಲವೂ **ಈ ಖಂಡದಲ್ಲಿ ಭಾಷೆ ಮತ್ತು ಧರ್ಮದಲ್ಲಿ ಇಡೀ ಖಂಡಕ್ಕೆ ಆಶ್ಚರ್ಯಕಾರಿ ಏಕರೂಪತೆ ಕೊಟ್ಟಿದೆ.** ಈ ಇಡೀ ಖಂಡದಲ್ಲಿ ಎರಡೇ ಭಾಷೆ - ಸ್ಪಾನಿಷ್, ಪೋರ್ಚುಗೀಸ್. ಅದರಲ್ಲೂ ಸ್ಪಾನಿಷ್ ಹೆಚ್ಚು ಕಡಿಮೆ ಸಾರ್ವತ್ರಿಕ ಅರ್ಥವಾಗುವ ಭಾಷೆ. ಶೇಕಡಾ 90 ಕ್ಕೂ ಹೆಚ್ಚು ರೋಮನ್ ಕ್ಯಾಥೊಲಿಕ್ಕರು.

ಈಗಿನ ಅಮೆರಿಕಾ



17ನೇ ಶತಮಾನದ ಕೊನೆಯ ಹೊತ್ತಿಗೆ ಸ್ಪೈನ್ ಮತ್ತು ಪೋರ್ಚುಗಲ್‌ಗಳು ಇಡೀ ಲ್ಯಾಟಿನ್ ಅಮೆರಿಕವನ್ನು ತಮ್ಮ ಹತೋಟಿಗೆ ತಂದಿದ್ದವು. ಹಲವು ಕಡೆ ಅವುಗಳ ನಡುವೆ ಕಾದಾಟ, ವಿವಾದ, ಯುದ್ಧಗಳಾಗಲಾರಂಭಿಸಿದ್ದವು. ಇದನ್ನು ಪರಿಹರಿಸಲು ಪೋಪರು(ಇಬ್ಬರಿಗೂ ಗುರುಗಳು ತಾನೆ!) ಉತ್ತರದಿಂದ ದಕ್ಷಿಣಕ್ಕೆ ಒಂದು ಗೆರೆ ಎಳೆದು ಅದರ ಪಶ್ಚಿಮಕ್ಕೆ ಇದ್ದದ್ದೆಲ್ಲಾ ಸ್ಪೈನ್‌ಗೆ ಮತ್ತು ಪೂರ್ವಕ್ಕಿರುವುದೆಲ್ಲಾ ಪೋರ್ಚುಗೀಸರಿಗೆ ಕೊಟ್ಟರಂತೆ. ಈಗಿನ ಬ್ರೆಜಿಲ್ ಪೋರ್ಚುಗೀಸರಿಗೆ ಸಿಕ್ಕರೆ, ಉಳಿದೆಲ್ಲಾ ಸ್ಪೈನ್‌ಗೆ ಹೋಯಿತು.

ಸ್ಪಾನಿಷ್ ಮತ್ತು ಪೋರ್ಚುಗಲ್ ವಸಾಹತುದಾರರು ಅತ್ಯಂತ ಕ್ರೂರ ದಮನ, ದಬ್ಬಾಳಿಕೆಯ ಕರ ವಸೂಲಾತಿಗೆ ಕುಖ್ಯಾತರು. ಸ್ವಾಭಾವಿಕವಾಗಿಯೇ ಅವರ ಆಡಳಿತದಿಂದ ಅಸಂತೃಪ್ತರಾದವರು, ಅವರ ವಿರುದ್ಧ ದಂಗೆ ಏಳುತ್ತಾ ಬಂದಿದ್ದಾರೆ. 18ನೇ ಶತಮಾನದಲ್ಲಿ ಇಂತಹ ಹಲವು ದಂಗೆಗಳು ನಡೆದವು. ಪರಾಗುವೆಯಲ್ಲಿ 1721 ರಿಂದ 1735 ರವರೆಗೆ, ಪೆರುವಿನಲ್ಲಿ 1780 ರಿಂದ 1782 ರವರೆಗೆ, ನವ ಗ್ರಾನಾಡಾದಲ್ಲಿ 1781 ರಲ್ಲಿ ನಡೆದ ದಂಗೆಗಳು ಗಮನಾರ್ಹವಾದವುಗಳು. ಜನಾಂಗೀಯ ಸಂಕಟದಿಂದ ಜನಾಂಗೀಯ ಬೇಧಬಾವ ಇತ್ಯಾದಿ ದೊಡ್ಡ ಸಮಸ್ಯೆಯಾಗಿದ್ದರೂ, ವಸಾಹತುಶಾಹಿ ವ್ಯವಸ್ಥೆ ಉಳಿಸಲು ಆಡಳಿತದಲ್ಲಿ ಯುರೋಪಿಯನ್ ನೇರ ಬಂದ 'ಶುದ್ಧ' ಯುರೋಪಿಯನ್ನರಿಗೆ ಮಾತ್ರ ಅವಕಾಶವಿತ್ತು.(ಅಥವಾ ಅವರ ನೇರ 'ಶುದ್ಧ' ರಕ್ತದ ವಾರಸುದಾರರಿಗೆ). ಯುರೋಪಿಯನ್ ಮೂಲದವರು, ಆದರೂ ಅಮೆರಿಕದಲ್ಲಿ ಹುಟ್ಟಿದವರು ರಾಜಕೀಯ ಗಣ್ಯರಾಗುತ್ತಿರಲಿಲ್ಲ. ಸ್ಥಳೀಯರಲ್ಲದೆ, ಇವರಿಗೂ ತೀವ್ರ ಅಸಂತೃಪ್ತಿ ಇತ್ತು.


19ನೇ ಶತಮಾನದ ಆರಂಭದ ಮೂರು ದಶಕಗಳಿಂದ ಹೊಗೆಯಾಡುತ್ತಿದ್ದ ಈ ಅಸಂತೃಪ್ತಿ ಸಿಡಿದೆದ್ದಿತ್ತು. ಸ್ಪಾನಿಷ್ ಮತ್ತು ಪೋರ್ಚುಗಲ್ ಆಡಳಿತದ ವಿರುದ್ಧ ಸಶಸ್ತ್ರ ಹೋರಾಟ ನಡೆಯಿತು. ಸೈಮನ್ ಬೊಲಿವರ್ ಈ ಸ್ವಾತಂತ್ರ್ಯ ಹೋರಾಟದ ಅಪ್ರತಿಮ ನಾಯಕ. ಬೊಲಿವರ್ ಅಲ್ಲದೆ ಸಾನ್ ಮಾರ್ಟಿನ್ ಮತ್ತು ಒ-ಹಿಗ್ಗಿಸ್ ಎಂಬ ಹೋರಾಟಗಾರರೂ ಇದ್ದರು. ಬೊಲಿವರ್ ಕನಸು ಇದ್ದಿದ್ದು ಇಡೀ ಸ್ಪಾನಿಷ್ ದಕ್ಷಿಣ ಅಮೆರಿಕವನ್ನು ಒಂದೇ ಸ್ವತಂತ್ರ ದೇಶವನ್ನಾಗಿಸುವುದಾಗಿತ್ತು. ವೆನೆಜುವೆಲಾದ ಬೊಲಿವರ್ 1810 ರಲ್ಲೇ ಸ್ವಾತಂತ್ರ್ಯ ಹೋರಾಟ ಆರಂಭಿಸಿ, ಹಲವು ಅಸಫಲ ಪ್ರಯತ್ನಗಳ ನಂತರ ಒಂದೊಂದಾಗಿ ದೇಶಗಳನ್ನು ವಿಮೋಚನೆ ಮಾಡಲಾಯಿತು. ವೆನಿಜುವಾಲಾ, ಪೆರು, ಕೊಲಂಬಿಯಾ, ಅರ್ಜೆಂಟಿನಾ, ಚಿಲಿಯ ವಿಮೋಚನೆಯಲ್ಲಿ ಬೊಲಿವರ್‌ಗೆ ನೇರ ಪಾತ್ರವಿತ್ತು. 1830 ರೊಳಗೆ ಮೆಕ್ಸಿಕೋದಿಂದ ಚಿಲಿವರೆಗೆ ಎಲ್ಲಾ ದೇಶಗಳು ಸ್ವತಂತ್ರವಾಗಿದ್ದವು. ಬರಿಯ ಫ್ರೆಂಚ್, ಬ್ರಿಟಿಷ್, ಡಚ್ ವಸಾಹತುಗಳು(ಗಯಾನಾ, ಸುರಿನಾಮ್, ವೆಸ್ಟ್ ಇಂಡೀಸ್) ಮಾತ್ರ 20ನೇ ಶತಮಾನದ ಮಧ್ಯ ಭಾಗದವರೆಗೆ ವಸಾಹತುಗಳಾಗಿ ಮುಂದುವರೆದವು. ದಕ್ಷಿಣ ಅಮೆರಿಕದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ದೊರೆತದ್ದು ಎರಡು ಮೂಲಗಳಿಂದ - ಫ್ರೆಂಚ್ ಕ್ರಾಂತಿ, ಫ್ರೆಂಚ್ ಕ್ರಾಂತಿಯಿಂದ ಸ್ಫೂರ್ತಿಗೊಂಡ ಉತ್ತರ ಅಮೆರಿಕಾದ ಬ್ರಿಟಿಷ್ ವಸಾಹತುಶಾಹಿಗಳು(1776) ದಂಗೆ ಎದ್ದು ಸ್ವತಂತ್ರವಾದದ್ದು.

19ನೇ ಶಮಾತನದ ಮೂರನೇ ದಶಕದಲ್ಲಿ ಸ್ವತಂತ್ರವಾದ ದೇಶಗಳು, ಆಂತರಿಕವಾಗಿ ಮತ್ತು ತಮ್ಮ ತಮ್ಮೊಳಗೆ ಹಲವು ಕದನಗಳಲ್ಲಿ ತೊಡಗಿದ್ದವು. ದೇಶದೊಳಗೆ ಕ್ಷಿಪ್ರಕ್ರಾಂತಿಗಳು, ಮಿಲಿಟರಿ ದಂಗೆಗಳು ನಡೆದವು. ದೇಶಗಳ ನಡುವೆ ಹಲವು ಕದನಗಳು ನಡೆದವು. 19ನೇ ಶತಮಾನದ ಉತ್ತರಾರ್ಧದಲ್ಲಿ ಅಮೆರಿಕನ್ ಪ್ರಭಾವ ಹೆಚ್ಚತೊಡಗಿತು. ಯುರೋಪಿಯನ್ ದೇಶಗಳು ಹೊಸ ವಸಾಹತುಗಳನ್ನು ಗೆದ್ದುಕೊಳ್ಳುವ, ಅಥವಾ ಹಳೆ ವಸಾಹತುಗಳನ್ನು

ಪುನಃ ತೆಗೆದುಕೊಳ್ಳುವ ಧೋರಣೆಯನ್ನು ಅಮೆರಿಕ ವಿರೋಧಿಸಿತು. ಮನ್ರೋ ನೀತಿ(1820 ರ ದಶಕದಲ್ಲಿ ಅಮೆರಿಕನ್ ಅಧ್ಯಕ್ಷ) ಎಂದು ಪ್ರಸಿದ್ಧವಾಗಿದೆ. ಆದರೆ ಕ್ರಮೇಣ ಮನ್ರೋ ನೀತಿ ದಕ್ಷಿಣ ಅಮೆರಿಕದ ದೇಶಗಳೊಳಗೆ ಅಥವಾ ಅವುಗಳ ನಡುವೆ ವಿವಾದ ಎದ್ದಾಗ, ಅಮೆರಿಕಾ ಮಧ್ಯ ಪ್ರವೇಶಿಸಬಹುದು ಎಂಬ ನೀತಿಗೆ ತಿರುಗಿತು. ದಕ್ಷಿಣ ಅಮೆರಿಕದ ಆರ್ಥಿಕದಲ್ಲೂ ಉತ್ತರ ಅಮೆರಿಕದ ಪ್ರಭಾವ ಹೆಚ್ಚತೊಡಗಿತು. ಅಮೆರಿಕದ ಎಲ್ಲಾ ದೇಶಗಳು ಪಾನ್-ಅಮೆರಿಕನ್-ಸಮ್ಮೇಳನಗಳನ್ನು ನಡೆಸತೊಡಗಿದವು. ಮುಂದೆ ಇದು ಪಾನ್-ಅಮೆರಿಕನ್ ಒಕ್ಕೂಟ ಹಾಗೂ 1948 ರಲ್ಲಿ OAS(ಅಮೆರಿಕನ್ ದೇಶಗಳ ಸಂಘಟನೆ) ಯಾಯಿತು. ಇದರಲ್ಲಿ ಅ.ಸಂ.ಸಂ. ತನ್ನ ಆರ್ಥಿಕ ಮಿಲಿಟರಿ ಬಲದಿಂದ ತನ್ನ ಅಧಿಪತ್ಯ ಸ್ಥಾಪಿಸಿತು. 20ನೇ ಶತಮಾನದ ಎರಡನೇ ಅರ್ಧದಲ್ಲೂ ಮಹಾಯುದ್ಧದ ನಂತರವಂತೂ ಅಮೆರಿಕ ಎಲ್ಲಾ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಮೂಗು ತೋರಿಸಿದೆ - ಆದೇಶಗಳ ಸ್ವಾತಂತ್ರ್ಯ, ಸರ್ವಭೌಮತ್ವ ಪ್ರಶ್ನಿಸುವ ಮಟ್ಟಿಗೆ,ಲ್ಯಾಟಿನ್ ಅಮೆರಿಕದ ದೇಶಗಳಿಗೆ 'ಹಿರಿಯಣ್ಣ' ನಂತೆ ವರ್ತಿಸುತ್ತಿದೆ. ಬ್ರಿಟಿಷ್, ಸ್ಪಾನಿಷ್ ವಸಾಹತುಗಳಲ್ಲಿ ಹಲವನ್ನು ಅಮೆರಿಕ ಆಕ್ರಮಿಸಿಕೊಂಡಿತು. ಇಲ್ಲವೆ ತನ್ನ ಬಾಲಬಡುಕ ಸರ್ವಾಧಿಕಾರಿಗಳನ್ನು ಅಧಿಕಾರಕ್ಕೆ ತಂದಿತು. 19ನೇ ಶತಮಾನದ ಕೊನೆ ಮತ್ತು ಇಪ್ಪತ್ತನೇ ಶತಮಾನದಲ್ಲಿ ಅ.ಸಂ.ಸಂ. ಮಧ್ಯ ಪ್ರವೇಶಿಸಿದ ಲ್ಯಾಟಿನ್ ಅಮೆರಿಕದ ದೇಶವಲ್ಲ. ಕ್ಯೂಬಾದಲ್ಲಿ ಇದ್ದ ಸ್ಪಾನಿಷ್ ವಸಾಹತುಗಾರರ ವಿರುದ್ಧ ಸ್ವಾತಂತ್ರ್ಯ ಹೋರಾಟ ತೀವ್ರವಾದಾಗ ಅಮೆರಿಕ ಯುದ್ಧಕ್ಕಿಳಿದು ತಾನೇ ಅವನ್ನು ಕಬಳಿಸಿತು. ಇದೇ ರೀತಿ ಹಲವು ವೆಸ್ಟ್ -ಇಂಡೀಸ್ ದೇಶಗಳಲ್ಲಿ ಒಂದಲ್ಲು ಒಂದು ರೀತಿಯಲ್ಲಿ ಮಧ್ಯ ಪ್ರವೇಶಿಸಿದೆ.

ಇಂದು ಲ್ಯಾಟಿನ್ ಅಮೆರಿಕದ ದೇಶಗಳ ಸ್ವಾತಂತ್ರ್ಯ, ಸಾರ್ವಭೌಮತೆ, ಸ್ವಯಂ-ನಿರ್ಧಾರದ ಹಕ್ಕುಗಳಿಗೆ ನಿಜವಾದ ಅಪಾಯ ಇರುವುದು ಅಸಂಸಂದ 'ಹಿರಿಯಣ್ಣ' ಧೋರಣೆಯಿಂದ. ಆದರ ವಿರುದ್ಧ ಹೋರಾಟ ಆಗಲೇ ಆರಂಭವಾಗಿದೆ. ಈ ಹೋರಾಟ ತೀವ್ರವಾಗುತ್ತಿದ್ದಂತೆ ಲ್ಯಾಟಿನ್ ಅಮೆರಿಕದ ಜನ ತಮ್ಮ ಎರಡು ಶತಕಗಳ ಹಿಂದಿನ ಸ್ವಾತಂತ್ರ್ಯ ಹೋರಾಟಗಾರರನ್ನು - ಸೈಮನ್ ಬೊಲಿವರ್ ಮತ್ತು ಜೋಸ್ ಮಾರ್ಟಿಯನ್ನು ನೆನಪಿಸಿಕೊಳ್ಳುತ್ತಾರೆ.

ಸೈಮನ್ ಬೊಲಿವರ್



ಸೈಮನ್ ಬೊಲಿವರ್ ಇಡೀ ಲ್ಯಾಟಿನ್ ಅಮೆರಿಕದ ಸ್ವಾತಂತ್ರ್ಯದ ಜನಕ ಎಂದು ಪರಿಗಣಿಸಲಾಗುತ್ತದೆ. ಆತನನ್ನು 'ವಿಮೋಚನಕಾರ' 'ದಕ್ಷಿಣ ಅಮೆರಿಕದ ಜಾರ್ಜ್ ವಾಶಿಂಗ್‌ಟನ್' ಎಂದೆಲ್ಲಾ ಕರೆಯ ಲಾಗುತ್ತದೆ. ಆತ ಹುಟ್ಟಿ ಬೆಳೆದಿದ್ದು ಈಗಿನ ವೆನೆಜುವಾಲಾದಲ್ಲಿ. ಬಾಲ್ಯದಲ್ಲೇ ತಂದೆ-ತಾಯಿ ಕಳೆದುಕೊಂಡು ಬೊಲಿವರ್‌ನನ್ನು ಆತನ ಮಾವ ಒಬ್ಬ ಸಾಕಿದರು. ಶ್ರೀಮಂತ ಕುಟುಂಬ ವಾದ್ದರಿಂದ ಆತನನ್ನು ಯುರೋಪಿಗೆ ಅಧ್ಯಯನಕ್ಕೆ ಕಳಿಸಲಾಯಿತು. ಅಲ್ಲಿ ಫ್ರೆಂಚ್ ಕ್ರಾಂತಿಯ ಹಾಗೂ ಉದಾರವಾದಿ ರಾಜಕೀಯ ನೀತಿಗಳನ್ನು ಮೈಗೂಡಿಸಿಕೊಂಡ ಆತ ತನ್ನ ತಾಯ್ನಾಡನ್ನು ಸ್ಪಾನಿಷ್ ಕಪಿಮುಷ್ಟಿಯಿಂದ ಬಿಡುಗಡೆ ಮಾಡಬೇಕೆಂದು ತೀರ್ಮಾನಿಸಿದ. ವಾಪಸು ಬಂದ ಕೂಡಲೇ ಕಾರ್ಯೋನ್ಮುಖನಾದ 1810 ರಿಂದ ತನ್ನ ಸಾವಿನವರೆಗೆ (1830) ಎರಡು ದಶಕಗಳ ಕಾಲ ಆತ ಸತತ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ. ಹಲವಾರು ಬಾರಿ ಸ್ಪಾನಿಷ್ ಸೈನ್ಯ ಆತನನ್ನು ಸೋಲಿಸಿತು. ಆದರೂ ಹಿಂದೆಗೆಯದೆ ಪುನಃ ಪಡೆಗಳನ್ನು ಸೇರಿಸಿ ಯುದ್ಧಕ್ಕೆ ಹೋಗುತ್ತಿದ್ದ. ದಕ್ಷಿಣ ಅಮೆರಿಕದ ಉತ್ತರ ಭಾಗದ ಹೆಚ್ಚುಕಡಿಮೆ ಎಲ್ಲಾ ದೇಶಗಳನ್ನು ಸ್ವತಂತ್ರಗೊಳಿಸಿದ ಕೀರ್ತಿ ಅವನಿಗೆ ಸೇರುತ್ತದೆ. ಆತ ಅತ್ಯಂತ ಬುದ್ಧಿವಂತ ಮಿಲಿಟರಿ ಸಂಚುಗಾರ ಎಂದು ಪರಿಗಣಿಸಲಾಗುತ್ತದೆ. ಲ್ಯಾಟಿನ್ ಅಮೆರಿಕದ ದೇಶಗಳ ಸ್ವತಂತ್ರ ಒಕ್ಕೂಟ ಮಾತ್ರ ಎಂದೂ ಫಲಿಸಲಿಲ್ಲ. ಮುಂದೆ ಆರಂಭವಾದ ಲ್ಯಾಟಿನ್ ಅಮೆರಿಕದ ದೇಶಗಳ ಸಂಘಟನೆ ಆತನ ಕನಸಿಗೆ ಹತ್ತಿ ಬರುವಂಥದ್ದು. ಆದರೆ ಅದೂ ಅ.ಸಂ.ಸಂ. ದ 'ಹಿರಿಯಣ್ಣನ ಚಾಳಿ'ಗೆ ಬಲಿಯಾಗಿದೆ.

ಜೋಸ್ ಮಾರ್ಟಿ



ಕ್ಯೂಬಾದ ಸ್ವಾತಂತ್ರ್ಯ ಹೋರಾಟದ ನೇತಾರ, ಪತ್ರಕರ್ತ, ಸಾಹಿತಿ, ರಾಷ್ಟ್ರಪಿತ. ಆತ ಹದಿಹರೆಯದಲ್ಲೇ ರಾಜಕೀಯದಲ್ಲಿ ತೊಡಗಿದವ. 16 ವರ್ಷದಲ್ಲೇ ಮೊದಲ ಬಾರಿಗೆ ಆತನನ್ನು 'ಅಪಾಯಕಾರಿ' ರಾಜಕೀಯ ಧೋರಣೆಗಳಿಗಾಗಿ ಸ್ಪೈನ್‌ಗೆ ಗಡಿಪಾರು ಮಾಡಲಾಯಿತು. ಮುಂದೆ ಆತನನ್ನು ಹಲವು ಬಾರಿ ಗಡಿಪಾರು ಮಾಡಲಾಯಿತು. ಗಡಿ ಪಾರಾದಾಗ ಯುರೋಪ್, ಉತ್ತರ ಅಮೆರಿಕಾ, ದಕ್ಷಿಣ ಅಮೆರಿಕಾದಲ್ಲಿ ತಿರುಗಾಡಿ ಅಧ್ಯಯನ ಮಾಡಿದ. ಅಮೆರಿಕದ ಖಂಡದಲ್ಲಿ ಕ್ಯೂಬಾ ಬಿಟ್ಟರೆ ಎಲ್ಲಾ ಸ್ಪಾನಿಷ್ ವಸಾಹತು ಗಳು ಸ್ವಾತಂತ್ರ್ಯ ತಡೆದಿದ್ದವು. ಇದು ಆತನಲ್ಲಿ ಕ್ಯೂಬಾಕ್ಕೆ ಸ್ವಾತಂತ್ರ್ಯದ ತುಡಿತ ಹೆಚ್ಚಿಸಿತು. ಎರಡನೇ ಬಾರಿ ಗಡಿಪಾರಾದಾಗ ಆತ ಅಮೆರಿಕದಲ್ಲಿ ವಾಸಿಸಿದ. **ಅಲ್ಲೇ ಕ್ಯೂಬಾದ ಬಿಡುಗಡೆಗೆ ಕ್ಯೂಬಾ ಕ್ರಾಂತಿಕಾರಿ ಪಕ್ಷ ಕಟ್ಟಿದ.** ಮಾರ್ಟಿ ತನ್ನ ಪತ್ರಿಕೆಗಳ ಮೂಲಕ ಕ್ಯೂಬಾದ ಸ್ವಾತಂತ್ರ್ಯದ ವಿಚಾರಗಳನ್ನು ಮಂಡಿಸಿದ. ಪ್ರಚಾರ ಪಡಿಸಿದೆ. 1895 ರಲ್ಲಿ ಆತ ಕ್ಯೂಬಾಕ್ಕೆ ಹಿಂದಿರುಗಿ ಸ್ವಾತಂತ್ರ್ಯ ಹೋರಾಟ ದಲ್ಲಿ ಭಾಗವಹಿಸಿದ. **ಸ್ಪಾನಿಷ್ ವಸಾಹತುಗಾರರ ವಿರುದ್ಧ ಕ್ಯೂಬಾದ ಎಲ್ಲಾ ಜನವಿಭಾಗಗಳನ್ನು ಒಗ್ಗೂಡಿಸಿ ಸಶಸ್ತ್ರ ಹೋರಾಟ ಆರಂಭಿಸಿದ್ದು ಆತನ ಕೊಡುಗೆ.** ಹೋರಾಟ ಆರಂಭವಾಗಿ ಸ್ವಲ್ಪದರಲ್ಲೇ ಆತ ರಣರಂಗದಲ್ಲಿ ಮಡಿದರೂ, ಆತನ ಸ್ಫೂರ್ತಿ ಕ್ಯೂಬಾದ ಸ್ವಾತಂತ್ರ್ಯ ಹೋರಾಟದ ವೀರಗೀತೆಯಾಯಿತು. ಆತ ಬರೆದ ಸ್ಪಾನಿಷ್ ಕವನಗಳು ಆ ಭಾಷೆಯ ಸಾಹಿತ್ಯದಲ್ಲಿ 'ಆಧುನಿಕತೆ' ಎಂಬ ಹೊಸ ಪಂಥ ಹುಟ್ಟು ಹಾಕಿತು. ಸಾಹಿತ್ಯದಲ್ಲಿ ಆತನನ್ನು 'ಆಧುನಿಕತೆ' ಪಂಥದ ಜನಕ ಎಂದು ಗುರುತಿಸುತ್ತಾರೆ.

ಸ್ವಾತಂತ್ರ್ಯದ ಫಲ ಕರ್ನಾಟಕದ ಜನತೆಗೆ ದಕ್ಕಿರುವ ಅತ್ಯಲ್ಪ ಪ್ರಮಾಣದ ಬಗ್ಗೆ ಚಿತ್ರಣ ನೀಡುವ ಅಂಕಿ ಅಂಶಗಳು

1955-56ರಲ್ಲಿ ವೈವಿಧ್ಯತೆಯ ಶ್ರೇಣಿ

	ಮುಂಬೈ ಕರ್ನಾಟಕ	ಹೈದರಾಬಾದ್ ಕರ್ನಾಟಕ	ಮದ್ರಾಸ್ ಕರ್ನಾಟಕ	ಕೊಡಗು ಕರ್ನಾಟಕ	ಮೈಸೂರು ಕರ್ನಾಟಕ
* ವಿಸ್ತೀರ್ಣ (ಚ.ಕಿಮೀಗಳು)	52526	35647	11173	4118	85158
* ಜನಸಂಖ್ಯೆ (ಲಕ್ಷದಲ್ಲಿ)	56.70	30.01	16.23	2.53	108.73
* ಸಾಕ್ಷರತೆ	22.3	8.5	23.3	27.2	20.6
* ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ					
6 ರಿಂದ 11 ವರ್ಷಗಳು	79.2	27.2	74.8	83.8	48.9
11 ರಿಂದ 14 ವರ್ಷಗಳು	27.8	13.0	30.8	54.2	27.0
* ಪ್ರಾಥಮಿಕ ಶಾಲಾವಾರು ಪ್ರದೇಶ (ಚ.ಕಿಮೀಗಳು)	8.80	17.09	8.55	18.65	6.73
* ಪ್ರಾಥಮಿಕ ಶಾಲಾವಾರು ಜನಸಂಖ್ಯೆ	931	1434	1250	1146	865
* ಮಾಧ್ಯಮಿಕ ಶಾಲಾವಾರು ಪ್ರದೇಶ (ಚ.ಕಿಮೀಗಳು)	425	1981	176	375	321
* ಮಾಧ್ಯಮಿಕ ಶಾಲಾವಾರು ಜನಸಂಖ್ಯೆ	44290	166629	25123	23026	40876
* ಪ್ರತಿ ಕಾಲೇಜ್‌ನ ವಿಸ್ತೀರ್ಣ (ಚ.ಕಿಮೀಗಳು)	6793	11882	2794	4118	3276
* ಪ್ರತಿ ಕಾಲೇಜ್‌ಗಾಗಿ ಜನಸಂಖ್ಯೆ (ಲಕ್ಷಗಳು)	7.1	10.0	4.1	2.5	4.2
* ಪ್ರದೇಶದ ಪ್ರತಿ ಚ.ಕಿಮೀ.ಗಾಗಿ ರಸ್ತೆ ನೀಳ	55.9	22.3	67.3	68.1	95.0

ಮೂಲ : ಕರ್ನಾಟಕ ಗೆಜೆಟೀರ್, ಭಾಗ - 2 (ಪುಟ 624)


ಆರೋಗ್ಯ - ಶಿಕ್ಷಣ ಸೂಚ್ಯಾಂಕ, ಆದಾಯ ಸೂಚ್ಯಾಂಕ ಮತ್ತು 1991ರ ಹೆಚ್‌ಡಿಐ ಪ್ರಕಾರ ಜಿಲ್ಲೆಗಳ ಸ್ಥಾನ


ಜಿಲ್ಲೆ	ಆರೋಗ್ಯ ಮತ್ತು ಶಿಕ್ಷಣ ಸೂಚ್ಯಾಂಕಗಳ ಸರಾಸರಿ ಸೂಚ್ಯಾಂಕ	ಆದಾಯ ಸೂಚ್ಯಾಂಕ	ಹೆಚ್‌ಡಿಐ	ಸ್ಥಾನ		
				ಆರೋಗ್ಯ ಮತ್ತು ಶಿಕ್ಷಣ ಸೂಚ್ಯಾಂಕ	ಆದಾಯ ಸೂಚ್ಯಾಂಕ	ಹೆಚ್‌ಡಿಐ
ಬೆಂಗಳೂರು (ನ)	0.726	0.352	0.601	3	2	2
ಬೆಂಗಳೂರು (ಗ್ರಾ)	0.622	0.173	0.472	9	10	8
ಬೆಳಗಾವಿ	0.624	0.185	0.471	8	6	9
ಬಳ್ಳಾರಿ	0.552	0.181	0.429	18	7	17
ಬೀದರ	0.567	0.124	0.419	17	20	18
ಬಿಜಾಪುರ	0.590	0.149	0.443	14	15	14
ಚಿಕ್ಕಮಗಳೂರು	0.648	0.276	0.524	5	3	5
ಚಿತ್ರದುರ್ಗ	0.617	0.163	0.466	10	12	10
ದಕ್ಷಿಣ ಕನ್ನಡ	0.769	0.237	0.592	1	4	3
ಧಾರವಾಡ	0.615	0.148	0.459	11	16	11
ಗುಲ್ಬರ್ಗ	0.535	0.165	0.412	19	11	19
ಹಾಸನ	0.633	0.153	0.473	6	14	7
ಕೊಡಗು	0.727	0.433	0.630	2	1	1
ಕೋಲಾರ	0.599	0.133	0.443	12	19	15
ಮಂಡ್ಯ	0.590	0.154	0.444	14	13	13
ಮೈಸೂರು	0.574	0.174	0.440	16	9	16
ರಾಯಚೂರು	0.529	0.138	0.399	20	18	20
ಶಿವಮೊಗ್ಗ	0.633	0.181	0.483	6	8	6
ತುಮಕೂರು	0.598	0.145	0.447	13	17	12
ಉತ್ತರ ಕನ್ನಡ	0.699	0.201	0.533	4	5	4

ಕರ್ನಾಟಕ ರಾಜ್ಯದ ನಕ್ಷೆ




ಕರ್ನಾಟಕದಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆ ಹಾಸಿಗೆಗಳ ಜಿಲ್ಲಾವಾರು ಸಂಖ್ಯೆ.





1965



1996

ಕರ್ನಾಟಕದಲ್ಲಿ ಆದಾಯ ಮತ್ತು ಉದ್ಯೋಗಾವಕಾಶಗಳ ಬೆಳವಣಿಗೆ ಪ್ರಮುಖ ಅಂಶಗಳು


ಸಾಧನೆಗಳು	ಕೊರತೆಗಳು
ಆದಾಯ	
• 1970-71 ರಿಂದ 1996-97ರ ನಡುವೆ ನೈಜ ಪರಿಮಾಣಗಳಲ್ಲಿ ಎಸ್‌ಎಸ್‌ಡಿಪಿ ಮೂರು ಪಟ್ಟು ಹೆಚ್ಚಿತು.	• ನೈಜ ತಲಾದಾಯವು 1970-71 ಮತ್ತು 1996-97ರ ನಡುವೆ ಎರಡುಪಟ್ಟು ಸಹ ಹೆಚ್ಚಾಗಿಲ್ಲ.
• ತೃತೀಯ ವಲಯದ ಬೆಳವಣಿಗೆ ಅಭೂತಪೂರ್ವವಾಗಿದೆ. ಎಸ್‌ಎಸ್‌ಡಿಪಿಯಲ್ಲಿ ಈ ವಲಯದ ಪಾಲು 1970-71ರ ಶೇ. 26.2 ರಿಂದ 1996-97ರಲ್ಲಿ ಶೇ. 43.4 ತಲುಪಿತು:	• ದ್ವಿತೀಯ ವಲಯದ ಬೆಳವಣಿಗೆ ಮಂದಗತಿಯಿಂದ ಸಾಗಿದೆ. 1970ರಿಂದ ವಲಯದ ಪಾಲು ಬದಲಾಗದೇ ಉಳಿದಿದೆ.
• ಉತ್ಪಾದನಾ ವಲಯದಿಂದ ಎಸ್‌ಎಸ್‌ಡಿಪಿಯ ಪಾಲು, 1970-71ರ ಶೇ. 14.7 ರಿಂದ ಕ್ರಮೇಣ ಹೆಚ್ಚಿ, 1996-97ರಲ್ಲಿ ಶೇ. 17.8 ತಲುಪಿದೆ.	• ಕೃಷಿ ಪ್ರಗತಿಯು ಸರಿಯಾಗಿಲ್ಲದೆ ಮುಂಗಾರನ್ನು ಅವಲಂಬಿಸುವುದನ್ನು ಮುಂದುವರೆಸಿದೆ.
• ಕೊಡಗು, ಬೆಂಗಳೂರು, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮತ್ತು ಮೈಸೂರು, ರಾಜ್ಯದ ಸರಾಸರಿಯಾದ 9384 ರೂ.ಗಳನ್ನು ಮೀರಿದ ತಲಾದಾಯಗಳನ್ನು ಹೊಂದಿವೆ.	• ಬೀದರ್, ಬಿಜಾಪುರ, ಚಿತ್ರದುರ್ಗ, ಧಾರವಾಡ, ಹಾಸನ, ಕೋಲಾರ, ಮಂಡ್ಯ, ರಾಯಚೂರು ಮತ್ತು ತುಮಕೂರು, ತಲಾದಾಯದಲ್ಲಿ ಹಿಂದುಳಿದಿವೆ.
• ಬೆಂಗಳೂರು (ನ), ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಧಾರವಾಡ, ಈಗ ಪ್ರಾಥಮಿಕ ವಲಯವನ್ನು ಶೇ. 35 ಅಥವಾ ಕಡಿಮೆಯಾಗಿ ಅವಲಂಬಿಸಿದೆ.	• ಇತರ ಎಲ್ಲಾ ಜಿಲ್ಲೆಗಳು, ಬಹುಮಟ್ಟಿಗೆ ಪ್ರಾಥಮಿಕ ವಲಯವನ್ನು ಈಗಲೂ ಅವಲಂಬಿಸಿವೆ.
• ಬಿಜಾಪುರ, 1980 ಮತ್ತು 96ರ ನಡುವೆ ಆದಾಯ ಬೆಳವಣಿಗೆಯಲ್ಲಿ ಮೆಚ್ಚುವಂತಹ ಪ್ರಗತಿಯನ್ನು ಸಾಧಿಸಿದೆ.	• ಕೊಡಗು ಮತ್ತು ಉತ್ತರ ಕನ್ನಡ ಈ ಅವಧಿಯಲ್ಲಿ ಅತ್ಯಂತ ಮಂದ ಗತಿಯ ಬೆಳವಣಿಗೆ ಹೊಂದಿವೆ.
ಉದ್ಯೋಗ	
• ಶೇ. 2.1ರ ಜನಸಂಖ್ಯಾ ಬೆಳವಣಿಗೆ ದರಕ್ಕೆ ಹೋಲಿಸಿದಲ್ಲಿ ಕಾರ್ಮಿಕ ಶಕ್ತಿಯ, ವಾರ್ಷಿಕ ಶೇ. 2.6ರ ಬೆಳವಣಿಗೆ ದರವನ್ನು ದಾಖಲಿಸಿ, 15 ದಶಲಕ್ಷದಿಂದ 19 ದಶಲಕ್ಷಕ್ಕೆ ಹೆಚ್ಚಿತು.	• ಮುಖ್ಯ ಕೆಲಸಗಾರರ ಸಂಖ್ಯೆಯಲ್ಲಿನ ಹೆಚ್ಚಳವು, ಪ್ರಾಥಮಿಕ ವಲಯದಲ್ಲಿ ಬಹಳತೇಕವಾಗಿ ಹುದುಗಿಕೊಂಡಿರುವ ನಿರುದ್ಯೋಗವನ್ನು ಕಡಿಮೆ ಮಾಡುವಲ್ಲಿ ಪರಿಣಾಮಕಾರಿಯಾಗಿಲ್ಲ.
• ಪುರುಷ ಕಾರ್ಮಿಕ ಶಕ್ತಿಗೆ ಹೋಲಿಸಿದಲ್ಲಿ (2%) ಮಹಿಳಾ ಕಾರ್ಮಿಕ ಶಕ್ತಿಯು ಶೇ. 4ರಷ್ಟು ಅಧಿಕ ದರದಲ್ಲಿ ಏರಿತು.	• ಮಹಿಳಾ ಕಾರ್ಮಿಕ ಶಕ್ತಿಯು, ಪುರುಷ ಕಾರ್ಮಿಕ ಶಕ್ತಿಯ ಪ್ರಮಾಣಕ್ಕಿಂತ ಕಡಿಮೆಯಾಗಿಯೇ ಮುಂದುವರೆದಿದೆ -124 ಲಕ್ಷ ಪುರುಷರಿಗೆ ಪ್ರತಿಯಾಗಿ 64 ಲಕ್ಷ ಮಹಿಳೆಯರು.
• ಮುಖ್ಯ ಕೆಲಸಗಾರರ ಸಂಖ್ಯೆ ವಾರ್ಷಿಕವಾಗಿ ಶೇ. 2.6ರಷ್ಟು ಹೆಚ್ಚಿತು.	• ಪುರುಷರಲ್ಲಿ ಉಪಮುಖ್ಯ ಕಾರ್ಮಿಕರ ಸಂಖ್ಯೆ ವಾರ್ಷಿಕವಾಗಿ (ಶೇ.0.2ರಷ್ಟು ಕಡಿಮೆಯಾಗಿದ್ದರೂ ಸಹ ಉಪ ಮುಖ್ಯ ಮಹಿಳಾ ಕಾರ್ಮಿಕರ ಸಂಖ್ಯೆ ವಾರ್ಷಿಕವಾಗಿ ಶೇ. 2.6ರಷ್ಟು ಹೆಚ್ಚಿದೆ.
• ಮುಖ್ಯ ಕೆಲಸಗಾರರ ಪೈಕಿ ಮಹಿಳೆಯರ ಪ್ರಮಾಣ 1981 ಮತ್ತು 1991ರ ನಡುವೆ ಶೇ. 25ರಿಂದ ಶೇ. 29ಕ್ಕೆ ಹೆಚ್ಚಿತು.	• ಪುರುಷರ ಪ್ರಮಾಣ ಶೇ. 71ರಷ್ಟು ಅತ್ಯಧಿಕವಾಗಿ ಮುಂದುವರೆದಿದೆ.
• ತೃತೀಯ ವಲಯದಲ್ಲಿ 1981 ಮತ್ತು 1991ರ ನಡುವೆ ಮುಖ್ಯ ಕೆಲಸಗಾರರ ಸಂಖ್ಯೆಯಲ್ಲಿ ವಾರ್ಷಿಕ ಶೇ. 5ರಷ್ಟು ಬೆಳವಣಿಗೆ ಇದೆ.	• ಗ್ರಾಮೀಣ ಪ್ರದೇಶಗಳಲ್ಲಿ ಶೇ. 85ರಷ್ಟು ಕಾರ್ಮಿಕ ಶಕ್ತಿಯು ಪ್ರಾಥಮಿಕ ವಲಯದಲ್ಲಿ ಮುಂದುವರೆದು, ಕೃಷಿಯೇತರ ಉದ್ಯೋಗಾವಕಾಶಗಳು ಸಾಕಷ್ಟು ಹೆಚ್ಚಿಲ್ಲ.
• ಬೆಂಗಳೂರು, ಉ. ಕನ್ನಡ ಮತ್ತು ದ. ಕನ್ನಡ ಜಿಲ್ಲೆಗಳು ಪ್ರಾಥಮಿಕ ವಲಯದಲ್ಲಿ ಶೇ. 65ಕ್ಕಿಂತಲೂ ಕಡಿಮೆಯಾಗಿ ಕಾರ್ಮಿಕ ಶಕ್ತಿಯನ್ನು ಹೊಂದಿವೆ.	• ಇನ್ನುಳಿದ ಜಿಲ್ಲೆಗಳಲ್ಲಿ ಪ್ರಾಥಮಿಕ ವಲಯದಲ್ಲಿನ ಕಾರ್ಮಿಕ ಶಕ್ತಿಯ ಪ್ರಮಾಣ, ಶೇ. 67ಕ್ಕೂ ಹೆಚ್ಚಾಗಿ ಮುಂದುವರೆದಿದೆ.
• ದ್ವಿತೀಯ ಮತ್ತು ತೃತೀಯ ವಲಯಗಳ ಶೇ. 33ರಷ್ಟು ಕಾರ್ಮಿಕ ಶಕ್ತಿ, 1991ರಲ್ಲಿ ಎಸ್‌ಎಸ್‌ಡಿಪಿಗೆ ಶೇ. 65ರಷ್ಟು ಕೊಡುಗೆ ಸಲ್ಲಿಸಿದವು.	• ಪ್ರಾಥಮಿಕ ವಲಯದ ಕಾರ್ಯವನ್ನು ಪ್ರತಿಬಿಂಬಿಸಿ, ಶೇ. 67ರಷ್ಟು ಕಾರ್ಮಿಕ ಶಕ್ತಿಯು, ಎಸ್‌ಎಸ್‌ಡಿಪಿಯ ಶೇ. 35ರಷ್ಟಕ್ಕೆ ಮಾತ್ರ ಕೊಡುಗೆ ಸಲ್ಲಿಸಿತು.
• ಉದ್ಯೋಗಾವಕಾಶಗಳು ಕಾರ್ಮಿಕ ಪಡೆಯ ಬೆಳವಣಿಗೆಗಿಂತ ತ್ವರಿತವಾಗಿ ವಿಸ್ತರಿಸಿವೆ.	• ಆದರೆ, ಪ್ರಾಥಮಿಕ ವಲಯದಿಂದ, ದ್ವಿತೀಯ ಮತ್ತು ತೃತೀಯ ವಲಯಗಳಿಗೆ ಕಾರ್ಮಿಕ ಶಕ್ತಿಯ ಯಾವುದೇ ಗಣನೀಯ ವರ್ಗಾವಣೆ ಇಲ್ಲ.

ಕರ್ನಾಟಕದ ಜಿಲ್ಲೆಗಳಲ್ಲಿ ಬಡತನ ರೇಖೆಗೆ ಕೆಳಗಿನ ಜನಸಂಖ್ಯೆ 1993-94

ಜಿಲ್ಲೆ	ಗ್ರಾಮೀಣ		ನಗರ		ಒಟ್ಟಾರೆ	
	ಬಡತನ ರೇಖೆಗೆ ಕೆಳಗಿನ %	ಸ್ಥಾನ	ಬಡತನ ರೇಖೆಗೆ ಕೆಳಗಿನ %	ಸ್ಥಾನ	ಬಡತನ ರೇಖೆಗೆ ಕೆಳಗಿನ %	ಸ್ಥಾನ
ಬೆಂಗಳೂರು (ನ)	12.40	4	32.51	4	31.42	12
ಬೆಂಗಳೂರು (ಗ್ರಾ)	42.20	15	26.69	2	38.17	13
ಬೆಳಗಾವಿ	27.17	12	41.98	11	29.86	10
ಬಳ್ಳಾರಿ	43.75	16	46.86	13	44.50	16
ಬೀದರ	57.00	20	56.35	19	56.06	20
ಬಿಜಾಪುರ*	19.31	8	55.40	18	28.98	9
ಚಿಕ್ಕಮಗಳೂರು	11.11	3	27.80	3	15.61	3
ಚಿತ್ರದುರ್ಗ	40.11	13	36.64	7	39.00	14
ದಕ್ಷಿಣ ಕನ್ನಡ	6.68	1	15.71	1	8.91	1
ಧಾರವಾಡ	47.46	18	52.22	17	49.75	19
ಗುಲ್ಬರ್ಗ	45.81	17	45.94	12	45.54	17
ಹಾಸನ	9.50	2	35.08	6	14.44	2
ಕೊಡಗು	15.24	5	40.38	10	20.73	4
ಕೋಲಾರ	47.93	19	50.71	16	48.45	18
ಮಂಡ್ಯ	23.89	10	65.72	20	30.16	11
ಮೈಸೂರು	26.64	11	33.82	5	28.94	8
ರಾಯಚೂರು	18.72	7	50.00	14	25.11	6
ಶಿವಮೊಗ್ಗ	16.06	6	50.66	15	25.56	7
ತುಮಕೂರು	42.18	14	36.98	8	40.64	15
ಉತ್ತರ ಕನ್ನಡ	20.10	9	38.70	9	24.97	5
ರಾಜ್ಯ	**29.88**		**40.15**		**33.16**	

* *ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ, ರಾಜ್ಯ ಮಾದರಿಯ ಫಲಿತಾಂಶಗಳಲ್ಲಿ ಅಂಕಿಅಂಶಗಳ ಸಮಸ್ಯೆ ಇರುವುದರಿಂದ, ಕೇಂದ್ರ ಮಾದರಿಗಳ ಫಲಿತಾಂಶಗಳನ್ನು ಮಾತ್ರ ಪರಿಗಣಿಸಲಾಗಿದೆ.*

ಬಾಲ ಕಾರ್ಮಿಕರು (5-14 ವಯೋಮಿತಿ), 1991



ಮುಖ್ಯ ಸೂಚಕಗಳ ಅಂತರರಾಜ್ಯ ತುಲನೆ

15 ಪ್ರಮುಖ ರಾಜ್ಯಗಳು	ತಲಾವಾರು ಎಸ್‌ಡಿಪಿ* 1995-96	ಕೆಳಗಿನ ಸೌಲಭ್ಯವಿರುವ ಕುಟುಂಬಗಳು (%)			ವಿವಿಧ ಮನೆಗಳಿರುವ ಕುಟುಂಬಗಳ ಶೇಕಡಾ		
		ವಿದ್ಯುಚ್ಛಕ್ತಿ	ಸುರಕ್ಷಿತ ಕುಡಿಯುವ ನೀರು	ಶೌಚಾಲಯಗಳು	ಪಕ್ಕಾ	ಅರೆ-ಪಕ್ಕಾ	ಕಚ್ಚಾ
	30	31	32	33	34	35	36
ಆಂಧ್ರಪ್ರದೇಶ	8938	46.50	55.08	18.40	38.41	22.58	39.01
ಅಸ್ಸಾಂ	6288	18.74	45.86	37.43	14.62	15.16	70.22
ಬಿಹಾರ್	3524	12.57	58.76	11.75	30.18	36.00	33.82
ಗುಜರಾತ್	11977	65.93	69.78	30.69	56.93	39.01	4.06
ಹರಿಯಾಣ	13518	70.35	74.32	22.45	50.14	35.73	14.13
ಕರ್ನಾಟಕ	9384	52.47	71.68	24.13	42.55	40.90	16.55
ಕೇರಳ	8924	48.43	18.89	51.28	55.97	19.13	24.90
ಮಧ್ಯಪ್ರದೇಶ	6518	43.30	53.41	15.07	30.47	64.87	4.66
ಮಹಾರಾಷ್ಟ್ರ	15457	69.40	68.49	29.56	52.20	36.14	11.67
ಒರಿಸ್ಸಾ	6192	23.54	39.07	9.81	18.71	22.06	59.23
ಪಂಜಾಬ್	16044	82.31	92.74	33.18	76.97	11.07	11.96
ರಾಜಸ್ಥಾನ್	6959	35.03	58.96	19.57	56.13	22.94	20.93
ತಮಿಳುನಾಡು	10222	54.74	67.42	23.13	45.54	18.03	36.44
ಉತ್ತರ ಪ್ರದೇಶ	5874	21.91	62.24	18.02	41.03	30.34	28.63
ಪ. ಬಂಗಾಳ	8409	32.90	81.98	31.51	32.61	29.38	38.01
ಭಾರತ	9578	42.37	62.30	23.70	41.61	30.95	27.44

ಮೂಲ: ಕಾಲಂ 30 : ಆಯಾ ರಾಜ್ಯ ಸರ್ಕಾರಗಳ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಗಳು ಮತ್ತು ಕೇಂದ್ರ ಸಾಂಖ್ಯಿಕ ಸಂಸ್ಥೆ.

ಕಾಲಂ 31 ರಿಂದ 36 : ವಸತಿ ಮತ್ತು ಸೌಲಭ್ಯಗಳು. ಭಾರತದ ಜನಗಣತಿ, 1991, ಆರ್‌ಜಿಐ.

: * ಚಾಲ್ತಿ ಬೆಲೆಗಳಲ್ಲಿ ತಾತ್ಕಾಲಿಕ ತಲಾವಾರು ರಾಜ್ಯಮಟ್ಟದ ಆಂತರಿಕ ಉತ್ಪನ್ನಗಳ ಅಂದಾಜುಗಳು.

ಶಿಕ್ಷಣ

ಗ್ರಾಮೀಣ ಮತ್ತು ನಗರ ಹಾಗೂ ಪುರುಷರು ಮತ್ತು ಮಹಿಳೆಯರ ವಿಂಗಡಣೆಯ ರೀತ್ಯ ಸಾಕ್ಷರತಾ ದರ 1991

	ಜಿಲ್ಲೆ	ಗ್ರಾಮೀಣ			ನಗರ			ಒಟ್ಟಾರೆ		
		ಪುರುಷರು	ಮಹಿಳೆಯರು	ಒಟ್ಟಾರೆ	ಪುರುಷರು	ಮಹಿಳೆಯರು	ಒಟ್ಟಾರೆ	ಪುರುಷರು	ಮಹಿಳೆಯರು	ಒಟ್ಟಾರೆ
		29	30	31	32	33	34	35	36	37
1.	ಬೆಂಗಳೂರು (ನ)	67.97	44.09	56.68	85.28	72.68	79.53	82.94	68.81	76.27
2.	ಬೆಂಗಳೂರು (ಗ್ರಾ)	58.61	33.43	46.37	74.56	59.68	67.39	61.51	38.15	50.17
3.	ಬೆಳಗಾವಿ	61.23	31.07	46.47	83.54	62.99	73.59	66.65	38.69	53.00
4.	ಬಳ್ಳಾರಿ	52.73	24.34	38.71	71.93	49.32	60.93	58.71	31.97	45.57
5.	ಬೀದರ್	53.85	24.51	39.43	78.76	55.91	68.03	58.97	30.53	45.11
6.	ಬಿಜಾಪುರ	66.09	35.29	50.91	80.88	55.27	68.42	69.69	40.06	55.13
7.	ಚಿಕ್ಕಮಗಳೂರು	67.59	47.19	57.46	84.73	72.03	78.59	70.56	51.31	60.05
8.	ಚಿತ್ರದುರ್ಗ	61.36	31.42	48.69	81.20	65.05	73.52	66.88	43.36	55.48
9.	ದಕ್ಷಿಣ ಕನ್ನಡ	72.79	58.16	65.50	88.43	77.76	83.27	75.35	61.22	68.35
10.	ಧಾರವಾಡ	81.65	64.00	72.37	90.87	78.21	84.51	84.40	67.96	75.86
11.	ಗುಲ್ಬರ್ಗ	66.70	37.13	52.34	79.82	59.93	70.20	71.37	45.20	58.68
12.	ಹಾಸನ	44.32	16.06	30.36	75.86	51.87	64.36	52.08	24.49	38.54
13.	ಕೊಡಗು	65.51	39.56	52.40	84.02	71.08	77.76	68.57	44.90	56.85
14.	ಕೋಲಾರ	56.79	29.06	43.16	81.63	66.15	74.09	62.69	37.75	50.45
15.	ಮಂಡ್ಯ	55.89	32.12	44.19	75.75	60.66	68.46	59.18	36.70	48.15
16.	ಮೈಸೂರು	46.01	25.53	36.00	79.69	66.91	73.50	56.23	37.95	47.32
17.	ರಾಯಚೂರು	44.26	16.48	30.42	68.53	43.59	56.38	49.53	22.15	35.96
18.	ಶಿವಮೊಗ್ಗ	66.38	44.24	55.48	84.23	71.35	78.01	71.24	51.42	61.53
19.	ತುಮಕೂರು	63.00	36.98	50.23	82.51	67.79	75.61	66.49	41.93	54.48
20.	ಉತ್ತರ ಕನ್ನಡ	72.58	51.31	62.10	88.12	73.79	81.10	76.39	56.77	66.73
	ರಾಜ್ಯ	60.30	34.76	47.69	82.04	65.74	74.20	67.26	44.34	56.04

ಮೂಲ : ಜನಗಣತಿ 1991.

1961 - 91ರ ನಡುವೆ ಪರಿಶಿಷ್ಟ ಜಾತಿಯವರಲ್ಲಿ ಸಾಕ್ಷರತಾ ದರಗಳು (ಶೇ.)

ಜಿಲ್ಲೆ	ಸಾಕ್ಷರಸ್ಥ ಎಸ್‌ಸಿ ಜನಸಂಖ್ಯೆಯ % - 1961			ಸಾಕ್ಷರಸ್ಥ ಎಸ್‌ಸಿ ಜನಸಂಖ್ಯೆಯ % - 1991			ಸಾಕ್ಷರತೆಯ ಬೆಳವಣಿಗೆ (ಎಸ್‌ಸಿ) 1961-91		
	ವ್ಯಕ್ತಿಗಳು	ಪುರುಷರು	ಮಹಿಳೆಯರು	ವ್ಯಕ್ತಿಗಳು	ಪುರುಷರು	ಮಹಿಳೆಯರು	ವ್ಯಕ್ತಿಗಳು	ಪುರುಷರು	ಮಹಿಳೆಯರು
	38	*39*	*40*	*41*	*42*	*43*	*44*	*45*	*46*
ಬೆಂಗಳೂರು (ನ)	13.05	20.31	5.44	57.28	67.00	46.84	339.00	229.86	760.33
ಬೆಂಗಳೂರು (ಗ್ರಾ)				35.58	47.67	22.83			
ಬೆಳಗಾವಿ	13.86	22.77	4.76	41.38	56.56	25.80	198.48	148.36	441.67
ಬಳ್ಳಾರಿ	6.95	12.36	1.46	29.70	42.02	17.20	327.20	239.85	1081.65
ಬೀದರ್	4.12	7.31	1.02	34.09	46.12	21.36	727.06	531.33	1991.19
ಬಿಜಾಪುರ	9.34	15.90	2.96	43.22	57.98	28.16	362.84	264.64	852.58
ಚಿಕ್ಕಮಗಳೂರು	*7.77*	*12.49*	*2.59*	*35.17*	*45.36*	*24.60*	352.51	263.31	851.58
ಚಿತ್ರದುರ್ಗ	8.88	15.18	*2.23*	*36.43*	*48.69*	*23.35*	[illegible]	[illegible]	[illegible]
ದಕ್ಷಿಣ ಕನ್ನಡ	9.52	13.74	5.35	56.05	64.82	47.19	488.92	371.89	782.37
ಧಾರವಾಡ	14.96	24.47	5.32	40.64	53.68	26.92	171.71	119.40	406.35
ಗುಲ್ಬರ್ಗ	3.87	7.10	0.63	25.82	37.05	12.80	567.25	421.81	1927.36
	6.96	*11.60*	*2.06*	*35.05*	*46.54*	*23.47*	*403.90*	*301.37*	*1041.51*
ಕೊಡಗು	11.47	16.53	5.60	45.74	55.40	35.96	298.78	235.13	541.94
ಕೋಲಾರ	9.65	15.48	3.49	37.02	48.62	25.22	283.59	214.08	622.39
ಮಂಡ್ಯ	9.30	15.54	2.88	39.08	49.92	27.82	320.04	221.32	866.27
ಮೈಸೂರು	7.76	12.75	2.56	34.98	44.06	25.42	350.84	245.68	893.13
ರಾಯಚೂರು	4.20	7.62	0.83	21.25	31.87	10.61	405.46	317.98	1172.78
ಶಿವಮೊಗ್ಗ	8.16	13.38	2.47	36.86	48.09	24.99	351.86	259.40	910.20
ತುಮಕೂರು	7.78	13.37	1.85	36.99	48.79	24.56	375.37	264.84	1228.04
ಉತ್ತರ ಕನ್ನಡ	15.46	23.17	7.23	50.18	61.40	38.66	224.63	165.04	434.89
ರಾಜ್ಯ	**9.06**	**14.87**	**3.04**	**38.06**	**49.69**	**25.95**	**320.00**	**234.21**	**752.59**

ಮೂಲ: 1961 ಮತ್ತು 1991ರ ಜನಗಣತಿ ಅಂಕಿಅಂಶಗಳು - ನಿರ್ದೇಶಕರು, ಜನಗಣತಿ ಕಾರ್ಯಾಚರಣೆ, ಕರ್ನಾಟಕ.

ಎಸ್‌ಸಿ - ಪರಿಶಿಷ್ಟ ಜಾತಿಗಳು.

ಶಾಲೆಯಿಂದ ಹೊರಗುಳಿದ 6-14 ವಯೋಮಿತಿಯ ಮಕ್ಕಳು 1996-97

ಜಿಲ್ಲೆ	ಶಾಲೆಗೆ ಹೋಗದ ಮಕ್ಕಳ ಅಂದಾಜು ಸಂಖ್ಯೆ			ಶಾಲೆಯಿಂದ ಹೊರಗುಳಿದ ಮಕ್ಕಳ ಶೇಕಡ		
	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
	163	*164*	*165*	*166*	*167*	*168*
1. ಬೆಂಗಳೂರು (ನ)	50214	65292	115506	11.07	14.35	12.71
2. ಬೆಂಗಳೂರು (ಗ್ರಾ)	49380	69749	119129	27.87	38.67	33.31
3. ಬೆಳಗಾವಿ	105918	127654	233572	28.13	34.32	31.21
4. ಬಳ್ಳಾರಿ	47289	83975	131264	21.41	38.78	30.00
5. ಬೀದರ್	20557	33768	54325	14.23	23.91	19.01
6. ಬಿಜಾಪುರ	61597	110307	171904	18.40	34.09	26.11
7. ಚಿಕ್ಕಮಗಳೂರು	22510	29809	52319	23.39	31.05	27.22
8. ಚಿತ್ರದುರ್ಗ	47421	72535	119956	20.36	32.02	26.11
9. ದಕ್ಷಿಣ ಕನ್ನಡ	40102	54939	95041	15.31	20.86	18.09
10. ಧಾರವಾಡ	104567	138213	242780	26.69	36.31	31.43
11. ಗುಲ್ಬರ್ಗ	67668	100945	168613	22.64	35.01	28.71
12. ಹಾಸನ	42376	52845	95221	27.21	33.44	30.34
13. ಕೊಡಗು	9002	12219	21221	20.53	28.68	24.55
14. ಕೋಲಾರ	52759	76843	129602	22.24	32.19	27.23
15. ಮಂಡ್ಯ	39201	59123	98324	24.42	35.82	30.20
16. ಮೈಸೂರು	98223	130951	229174	30.49	40.45	35.48
17. ರಾಯಚೂರು	89241	144480	233721	33.24	54.43	43.77
18. ಶಿವಮೊಗ್ಗ	51318	58553	109871	26.81	30.89	28.84
19. ತುಮಕೂರು	46949	72847	119796	20.15	31.32	25.73
20. ಉತ್ತರ ಕನ್ನಡ	27532	36386	63918	22.72	31.08	26.83
ರಾಜ್ಯ	**1073824**	**1531433**	**2605257**	**22.74**	**32.74**	**27.72**

ಮೂಲ : ಸಾರ್ವಜನಿಕ ಶಿಕ್ಷಣ ಆಯುಕ್ತರು, ಕರ್ನಾಟಕ ಸರ್ಕಾರ.

ಲಿಂಗ ಅಸಮಾನತೆಗಳ ರೂಪರೇಷೆ

	ಜಿಲ್ಲೆ	ಅಡಿಗೆ ಮಾಡಲು ಕಲುಷಿತ ಇಂಧನ (ಸೌದೆ, ಸಗಣಿ, ಸೀಮೆಎಣ್ಣೆ ಮತ್ತು ಕಲ್ಲಿದ್ದಲು) ಬಳಸುವ ಕುಟುಂಬಗಳ ಶೇ. ಸಂಖ್ಯೆ, 1991			ಸುರಕ್ಷಿತ ಕುಡಿಯುವ ನೀರು ಸಿಗದ ಕುಟುಂಬಗಳ ಶೇ: ಸಂಖ್ಯೆ, 1991			ಶೌಚಾಲಯ ಸೌಲಭ್ಯ ಇಲ್ಲದ ಕುಟುಂಬಗಳ ಶೇ. ಸಂಖ್ಯೆ 1991		
		ಗ್ರಾಮ	ನಗರ	ಒಟ್ಟು	ಗ್ರಾಮ	ನಗರ	ಒಟ್ಟು	ಒಟ್ಟು	ಗ್ರಾಮ	ನಗರ
		56	*57*	*58*	*59*	*60*	*61*	*62*	*63*	*64*
1	ಬೆಂಗಳೂರು (ನ)	98	80	69	18	11	19	27	81	19
2	ಬೆಂಗಳೂರು (ಗ್ರಾ)	99	70	96	13	14	11	83	94	34
3	ಬೆಳಗಾವಿ	94	74	85	36	39	24	86	96	52
4	ಬಳ್ಳಾರಿ	99	84	94	16	18	11	87	97	65
5	ಬೀದರ	99	73	97	40	40	36	90	97	52
6	ಬಿಜಾಪುರ	99	65	95	27	31	13	93	99	74
7	ಚಿಕ್ಕಮಗಳೂರು	97	85	93	31	35	7	77	86	33
8	ಚಿತ್ರದುರ್ಗ	95	87	93	12	14	7	83	96	48
9	ದಕ್ಷಿಣ ಕನ್ನಡ	99	82	88	80	88	59	66	80	31
10	ಧಾರವಾಡ	91	87	89	18	22	12	78	92	53
11	ಗುಲ್ಬರ್ಗಾ	99	66	94	37	43	15	88	98	53
12	ಹಾಸನ	99	89	95	20	23	8	84	94	35
13	ಕೊಡಗು	97	81	91	55	62	16	68	75	28
14	ಕೋಲಾರ	99	87	95	10	10	12	80	93	37
15	ಮಂಡ್ಯ	95	80	96	29	30	21	86	94	45
16	ಮೈಸೂರು	98	69	91	17	20	10	75	95	27
17	ರಾಯಚೂರು	99	70	96	35	39	16	93	98	72
18	ಶಿವಮೊಗ್ಗ	96	73	69	34	41	14	74	90	34
19	ತುಮಕೂರು	99	70	96	19	20	13	86	96	36
20	ಉತ್ತರ ಕನ್ನಡ	99	79	88	70	76	51	77	88	44
	ರಾಜ್ಯ	98	84	90	28	33	19	76	93	37

ಕರ್ನಾಟಕದಲ್ಲಿ ಶಿಕ್ಷಣದ ಪ್ರಮಾಣ

	ಸಾಕ್ಷರರಸಂಖ್ಯೆ			ಪ್ರಾಥಮಿಕ			ಹಿರಿಯ ಪ್ರಾಥಮಿಕ		
	ಒಟ್ಟು	ಗಂಡು	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ
ಒಟ್ಟು	21,013	12,872	8,142	27.3	25.6	30.0	26.9	26.0	28.5
ಗ್ರಾಮೀಣ	12,251	7,842	4,409	35.2	32.4	40.2	30.4	29.5	31.9
ನಗರ	8,763	5,030	3,732	16.2	14.9	17.9	22.1	20.4	24.4

	ಪ್ರೌಢಶಾಲೆ			ಎಸ್‌ಎಸ್‌ಎಲ್‌ಸಿ			ಪದವೀಧರರು		
	ಒಟ್ಟು	ಗಂ	ಹೆ	ಒಟ್ಟು	ಗಂ.	ಹೆ	ಒಟ್ಟು	ಗಂ.	ಹೆ
ಒಟ್ಟು	19.5	19.2	20.0	21.0	22.9	17.9	5.3	6.3	3.7
ಗ್ರಾಮೀಣ	17.2	17.7	16.2	15.0	17.4	10.8	2.2	2.9	1.0
ನಗರ	22.8	21.6	24.6	29.3	31.5	26.2	9.6	11.6	6.9

ಕರ್ನಾಟಕದಲ್ಲಿ ವಿವಿಧ ಉದ್ಯೋಗನಿರತರ ಪ್ರಮಾಣ

	ರೈತರು			ಕೃಷಿಕೂಲಿಕಾರರು			ಮೀನುಗಾರಿಕೆ ಪ್ಲಾಂಟೇಷನ್ ತೋಟಗಾರಿಗೆ ಇತ್ಯಾದಿ			ಗಣಿ ಮತ್ತು ಬಂಡೆ ಬಂಡೆ ಒಡೆಯುವುದು		
	ಒಟ್ಟು	ಗಂಡು	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ
ಒಟ್ಟು	34.2	37.7	25.7	28.9	20.5	49.7	3.6	3.8	3.0	0.7	0.8	0.5
ಗ್ರಾಮೀಣ	43.8	50.6	29.6	35.9	26.4	55.6	4.2	4.6	3.3	0.6	0.7	0.4
ನಗರ	5.9	6.1	5.2	8.2	5.8	18.5	1.8	1.9	1.3	0.8	0.9	0.7

	ಗೃಹಕೈಗಾರಿಕೆ ಹಾಗೂ ಮನೆಯಲ್ಲಿ ರಿಪೇರಿ ಇತ್ಯಾದಿ ಕೆಲಸ			ಕೈಗಾರಿಕೆ			ಕಟ್ಟಡ ಕೆಲಸ			ವ್ಯಾಪಾರ		
	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂಡು	ಹೆ	ಒಟ್ಟು	ಗಂಡು	ಹೆ
ಒಟ್ಟು	1.9	1.8	2.1	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
ಗ್ರಾಮೀಣ	1.6	1.7	1.5	4.0	3.5	5.0	1.1	1.5	0.3	3.4	4.3	1.5
ನಗರ	2.6	2.0	5.4	23.3	23.3	23.1	6.5	7.2	3.4	21.6	24.1	10.7


1991ರಲ್ಲಿ ಕರ್ನಾಟಕದ ಜಿಲ್ಲೆಗಳಿಗಾಗಿ ಹೆಚ್‌ಡಿಐ ಮತ್ತು ಜಿಡಿಐಗಳ ತುಲನಾತ್ಮಕ ಸ್ಥಾನ.


ಜಿಲ್ಲೆ	ಹೆಚ್‌ಡಿಐ 1991	ಜಿಡಿಐ 1991	ಹೆಚ್‌ಡಿಐ ಸ್ಥಾನ	ಜಿಡಿಐ ಸ್ಥಾನ	ಜಿಡಿಐ ಸ್ಥಾನದಲ್ಲಿ ಕಳೆದ ಹೆಚ್‌ಡಿಐ ಸ್ಥಾನ
ಕೊಡಗು	0.630	0.615	1		0
ಬೆಂಗಳೂರು (ನ)	0.601	0.546	2		-1
ದಕ್ಷಿಣ ಕನ್ನಡ	0.592	0.588	3		+1
ಉತ್ತರ ಕನ್ನಡ	0.533	0.511	4		0
ಚಿಕ್ಕಮಗಳೂರು	0.524	0.505	5		0
ಶಿವಮೊಗ್ಗ	0.483	0.468	6		0
ಹಾಸನ	0.473	0.460	7		0
ಬೆಂಗಳೂರು (ಗ್ರಾ)	0.472	0.454	8		0
ಬೆಳಗಾವಿ	0.471	0.447	9		-1
ಚಿತ್ರದುರ್ಗ	0.466	0.448	10		+1
ಧಾರವಾಡ	0.459	0.442	11		0
ತುಮಕೂರು	0.447	0.435	12		0
ಮಂಡ್ಯ	0.444	0.423	13		-1
ಬಿಜಾಪುರ	0.443	0.420	14		-1
ಕೋಲಾರ	0.443	0.426	15		+2
ಮೈಸೂರು	0.440	0.414	16		0
ಬಳ್ಳಾರಿ	0.429	0.409	17		0
ಬೀದರ	0.419	0.403	18		0
ಗುಲ್ಬರ್ಗ	0.412	0.388	19		0
ರಾಯಚೂರು	0.399	0.376	20		0
ರಾಜ್ಯ	0.470	0.451			

ಕರ್ನಾಟಕದಲ್ಲಿ ವಿವಿಧ ಭಾಷೆಗಳ ಜನರು

	ಒಟ್ಟು	ಶೇ.	ಗ್ರಾಮೀಣ	ನಗರ	ಶೇಕಡ ಪ್ರಮಾಣ ಗ್ರಾಮೀಣ	ಶೇಕಡ ಪ್ರಮಾಣ ನಗರ
ಕನ್ನಡ	29,785,004	66.220	23,253,783	6,531,221	78.07	21.93
ಉರ್ದು	4,480,038	9.960	1,779,379	2,700,659	39.72	60.28
ತೆಲುಗು	3,325,062	7.390	2,031,627	1,293,435	61.10	38.90
ತಮಿಳು	1,728,361	3.840	436,450	1,291,911	25.25	74.75
ಮರಾಠಿ	1,640,020	3.650	1,019,092	620,928	62.14	37.86
ತುಳು	1,378,779	3.070	1,016,439	362,340	73.72	26.28
ಹಿಂದಿ	885,251	1.970	576,149	309,102	65.08	34 92
ಮಲೆಯಾಳಂ	757,030	1.680	427,300	329,730	56.44	43.56
ಕೊಂಕಣಿ	706,397	1.570	395,800	310,597	56.03	43.97
ಕೊಡಗು	96,291	0.210	73,454	22,837	76.28	23.72
ಗುಜರಾತಿ	53,785	0.120	9,304	44,481	17.30	82.70
ಟಿಬೆಟಿಯನ್	23,182	0.050	22,915	267	98.85	1.15

ಕರ್ನಾಟಕ
ಪರಿಶಿಷ್ಟ ಜಾತಿಗಳ ಪ್ರಮಾಣ
1981




ಕರ್ನಾಟಕ
ಒಟ್ಟು ಕೃಷಿಕೂಲಿಕಾರರಲ್ಲಿ
ಪರಿಶಿಷ್ಟ ಜಾತಿಯ ಕೃಷಿಕೂಲಿಕಾರರು
1981
MAHARASHTRA
ANDHRA PRADESH
INDIA
GOA, DAMAN & DIU
RABIAN SEA
LAKSHADWEEP SEA
KERALA
TAMIL NADU
ಒಟ್ಟು ಕೃಷಿ ಕೂಲಿಕಾರರಲ್ಲಿ
ಪ.ಜಾ. ಕೃಷಿ ಕೂಲಿಕಾರರ
ಶೇಕಡವಾರು
45
35
25
15
ಗರಿಷ್ಟ 62.60
ರಾಜ್ಯ ಸರಾಸರಿ 29.08
ಕನಿಷ್ಟ 3.33
KILOMETRES
40
0
40

'ಐಕ್ಯರಂಗದ ವಿಶೇಷ ಸಂಚಿಕೆಗೆ ಶುಭಾಶಯಗಳು

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ(CITU)

(ರಿ.ನಂ. ಟಿ.ಯು.ಎ. 446/2000)


ಕುಂದಾಪುರ

ವಿ.ನರಸಿಂಹ
ಅಧ್ಯಕ್ಷರು

ಕೆ.ಶಂಕರ್
ಪ್ರಧಾನ ಕಾರ್ಯದರ್ಶಿ

ಬಸ್ ನಿಲ್ದಾಣದ ಬಳಿ, ಕುಂದಾಪುರ - 576201
ಫೋನ್: 20010

ಸ್ವಾತಂತ್ರ್ಯೋತ್ಸವದ ಕ್ರಾಂತಿಕಾರಿ ಶುಭಾಶಯಗಳು



ಹೆಚ್.ಎಂ.ರವಿಕುಮಾರ್
ಅಧ್ಯಕ್ಷರು
ಯುವಜನತಾದಳ(ಎಸ್)

ಮಳವಳ್ಳಿ ತಾಲ್ಲೂಕು

"ತಾಲ್ಲೂಕಿನ ಯುವ ಜನರ ಏಳಿಗೆಯೇ ನಮ್ಮ ಗುರಿ"

ಹುಸ್ಕೂರು, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.

ಐಕ್ಯರಂಗದ ವಿಶೇಷ ಸಂಚಿಕೆಗೆ ಶುಭಾಶಯಗಳು

ಬೀಡಿ ವರ್ಕರ್ಸ್ ಯೂನಿಯನ್
(ಸಿಐಟಿಯು)

(ರಿ.ನಂ.ಟಿಯುಎ270/87)
ಕುಂದಾಪುರ

ತಾಲ್ಲೂಕು ಆಫೀಸು ಹತ್ತಿರ
ಮುಖ್ಯರಸ್ತೆ, ಕುಂದಾಪುರ (ದ.ಕ) 576201

ಐಕ್ಯರಂಗ ಸ್ವಾತಂತ್ರ್ಯೋತ್ಸವದ
ವಿಶೇಷ ಸಂಚಿಕೆಗೆ ಶುಭಾಶಯಗಳು

ಪದವು ಪ್ರದೇಶ
ಬೀಡಿ ಕೆಲಸಗಾರರ ಸಂಘ
ಮಂಗಳೂರು

ಕೆ.ಆರ್.ಶ್ರೀಯಾನ್ — ಅಧ್ಯಕ್ಷರು
ಕೆ.ಬಾಬು ದೇವಾಡಿಗ — ಕಾರ್ಯದರ್ಶಿ

ಖಿರ್ಕ್ಣಿ ಕಟ್ಟೆ, ಕೈಕಂಬ,
ಕುಲಶೇಖರ, ಮಂಗಳೂರು - 575005

ಹಾರ್ದಿಕ ಶುಭಾಶಯ ಕೋರುವ

ಸಂಜೀವಿನಿ ಸಹಕಾರಿ
ಆಸ್ಪತ್ರೆ ನೌಕರರ ಸಂಘ (ರಿ)

ನೊಂದಣಿ ಸಂಖ್ಯೆ : ಟಿಯುಎ ಆರ್.ಜಿ.ಎನ್.00151/98-99

ಶಂಕರ ಮಠ ರಸ್ತೆ,
ಕೆ.ಆರ್.ಪುರಂ, ಹಾಸನ-573201
(ಕರ್ನಾಟಕ)

ಶುಭಾಶಯಗಳೊಂದಿಗೆ,



ಎಲ್.ನಾಗರಾಜ್

[illegible] ಕಾರ್ಯದರ್ಶಿ
ಕರ್ನಾಟಕ ಪ್ರದೇಶ ಯುವ ಜನತಾದಳ(ಜಾ)

ಎಂ.ಬಸವನ ಪುರ, ಮಳವಳ್ಳಿ ತಾ||
ಮಂಡ್ಯ ಜಿಲ್ಲೆ - 571430
ಫೋನ್: 42548

ಹಾರ್ದಿಕ ಶುಭಾಶಯಗಳೊಂದಿಗೆ,

ವ್ಯವಸಾಯ ಸೇವಾ ಸಹಕಾರ
ಬ್ಯಾಂಕ್ ನಿಯಮಿತ,
ಸುಜ್ಜಲೂರು


ಅಧ್ಯಕ್ಷರು — **ಕೆ.ಲಿಂಗಯ್ಯ**, ಬಿ.ಕಾಂ, ಚನ್ನಪಿಳ್ಳೆ ಕೊಪ್ಪಲು
ಕಾರ್ಯದರ್ಶಿ — **ಮರಿಸಿದ್ದೇಗೌಡ**

ನಿರ್ದೇಶಕರು;
ನಂಜುಂಡಪ್ಪ, ನಾ.ಚಿಕ್ಕಣ್ಣಪ್ಪ, ಶಿವಪ್ಪ, ಹೆಚ್.ಸಿ.ಶಂಕರ,
ಎನ್.ಎಂ.ನಾಗರಾಜು, ಚಿಕ್ಕಂಡು, ಸಾಕಮ್ಮ, ಚನ್ನಯ್ಯ

ಸುಜ್ಜಲೂರು, ಮಳವಳ್ಳಿ ತಾ||, ಮಂಡ್ಯ ಜಿಲ್ಲೆ

ಸ್ವಾತಂತ್ರ್ಯೋತ್ಸವದ ಶುಭಾಶಯಗಳೊಂದಿಗೆ,

ಕಟ್ಟಕಡೆಯ ದಾರಿದ್ರ್ಯತನವನ್ನು
ಹೋಗಲಾಡಿಸಲು ಶ್ರಮಿಸುವ ಐಕ್ಯರಂಗ
ಪತ್ರಿಕೆಯು ಯಶಸ್ವಿಯಾಗಿ ಮುನ್ನಡೆಯಲಿ



ಹೆಚ್.ಪ್ರಭಾಕರ ವಕೀಲರು
ನಿರ್ದೇಶಕರು

ಕೃಷಿಉತ್ಪನ್ನ ಮಾರುಕಟ್ಟೆ ಸಮಿತಿ
ಗಂಗಾವತಿ, ಕೊಪ್ಪಳ ಜಿಲ್ಲೆ

ಶುಭಾಶಯಗಳೊಂದಿಗೆ,

ಉತ್ತರ ಕನ್ನಡ ಡಿಸ್ಟ್ರಿಕ್ಟ್ ಟೈಲ್ ವರ್ಕರ್ಸ್ ಯೂನಿಯನ್(ರಿ)

(ಸಿಐಟಿಯು)
ರಿಜಿಸ್ಟರ್ ನಂ. 17/94

ಹೊನ್ನಾವರ, ಉ.ಕ. 581334

ಕ್ರಾಂತಿಕಾರಿ ಶುಭಾಶಯಗಳೊಂದಿಗೆ,

ವಿಮಾ ನೌಕರರ ಸಂಘ

ಜೀವವಿಮಾ ನಿಗಮ, ಶಾಖಾ ಕಚೇರಿ
ಶಿರಸಿ - ಉತ್ತರ ಕನ್ನಡ

ಐಕ್ಯರಂಗ ದುಡಿಯುವ ಜನರ ಹೋರಾಟಕ್ಕೆ
ದಾರಿ ದೀಪವಾಗಿ ಬೆಳಗಲಿ

ಮುನಿಸಿಪಲ್ ಕಾಮಗಾರ ಯೂನಿಯನ್(ಸಿಐಟಿಯು)

ಬಿಜಾಪುರ

ಎನ್.ಕೆ.ಉಪಾಧ್ಯಾಯ
ಅಧ್ಯಕ್ಷರು

ವಿ.ಎಂ.ಸೊನ್ನದ
ಪ್ರಧಾನ ಕಾರ್ಯದರ್ಶಿ

ಶುಭಾಶಯಗಳೊಂದಿಗೆ,

ಜಾಲಹಳ್ಳಿ ಗ್ರಾಮ ಪಂಚಾಯತ್

ದೇವದುರ್ಗ ತಾ।। ರಾಯಚೂರು ಜಿಲ್ಲೆ

2000-2001 ನೇ ಸಾಲಿನ ಅಭಿವೃದ್ಧಿ ಯೋಜನೆಗಳು

ಜವಹಾರ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ಬಿಡುಗಡೆ ಅನುದಾನ	4,13.415
1. ವಾರ್ಡ್ ನಂ. 1,4,7,8 ರಲ್ಲಿ ಬಂಡೆ ಹಾಕಿಸುವುದು	10,000
2. ವಾರ್ಡ್ ನಂ. 2, 3, 4, 6 ಚರಂಡಿ ಮತ್ತು ಬಂಡೆ ಹಾಕಿಸುವುದು	78,366
3. ವಾರ್ಡ್ ನಂ. 1, 4, 5 ರಲ್ಲಿ ಶೌಚಾಲಯ ನಿರ್ಮಾಣ	55,000
4. ರಕ್ಷಣ ಗೋಡೆ ಕಮಾನು ದುರಸ್ತಿ, ಬಾಲವಾಡಿ ಮೆಟ್ಟಿಲು ನಿರ್ಮಾಣ ಕಲ್ಲಿ ಪಿಂಚಿಂಗ್ ಇತ್ಯಾದಿ	87,000
5. ಹರಿಜನ-ಗಿರಿಜನ ಕಲ್ಯಾಣಕ್ಕಾಗಿ	93149
	413415

A/c ನಂ. 1 ರಲ್ಲಿಯ ಕೆಲಸಗಳು

1. ಗ್ರಾಮದಲ್ಲಿ ನೀರು ಪೂರೈಕೆ (4 ಘಟಕಗಳು)
2. ಗ್ರಾಮದಲ್ಲಿ ಬೀದಿ ದೀಪದ ವ್ಯವಸ್ಥೆ
3. ಶೇ 20 ಪಠ್ಯ ಪುಸ್ತಕ ವಿತರಣೆ
4. ಸುಟ್ಟ ಗುಡಿಸಲುಗಳಿಗೆ ಪರಿಹಾರ
5. ಸಹಾಯ ಧನ (ಗಣೇಶ ಚೌತಿಗೆ)
6. ಗ್ರಾಮದಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆ
7. 15 ಜನ ಸಿಬ್ಬಂದಿಗಳಿಂದ ಆಡಳಿತ ವ್ಯವಸ್ಥೆ
8. ಗಿರಕಿ ಹಾಕಿಸುವುದು, ಬಾವಿ ರಿಪೇರಿ ಮಕಂ ಹಾಕಿ ರೋಡಿನ ವ್ಯವಸ್ಥೆ ಮಾಡುವುದು.
9. ತಾ.ಪ.ಯಿಂದ ಮನೆಗಳವಿತರಣೆ
10. ಸಂಘ ಸಂಸ್ಥೆಗಳಿಂದ ಬಿಪಿಎಲ್ ಸರ್ವೆ ಪ್ರಕಾರ ವಿವಿಧ ಘಟಕಗಳಿಗೆ ಸಾಲ ವಿತರಿಸುವುದು.

ಗೋವಿಂದ ರಾಜ ತಿಂಪೂರ	ಅಧ್ಯಕ್ಷರು	**ಹನ್ಮಂತ್ರಾಯ ವಠಾದ**	ಸದಸ್ಯರು
ಯಲ್ಲಮ್ಮ ಚವಳಿಕಿ	ಉಪಾಧ್ಯಕ್ಷರು	**ನಸಿರುದ್ದೀನ ಮುಲ್ಲಾರ**	ಸದಸ್ಯರು
ಮಲ್ಲಿಕಾರ್ಜುನ ಪಾಲ್	ಸದಸ್ಯರು	**ಈರಣ್ಣ ಕಾಟ್ಮಾಳ**	ಸದಸ್ಯರು
ಬಸವರಾಜ ನೆರೆಗಲ್ಲ	ಸದಸ್ಯರು	**ರಂಗಮ್ಮ ಕುರಬರ**	ಸದಸ್ಯರು
ಬುಡ್ಡಯ್ಯ ಕಾವಲಿ	ಸದಸ್ಯರು	**ಉಮಾ ದೇಸಾಯಿ**	ಸದಸ್ಯರು
ರಮೇಶ್ ಅನ್ವರಿ	ಸದಸ್ಯರು	**ಮಲ್ಲಮ್ಮ ಘಸಲಾಧಿ**	ಸದಸ್ಯರು
ಬಾಬು ಯಾದವ	ಸದಸ್ಯರು	**ಯಲ್ಲಮ್ಮ ಬಂಗಾರೆಪ್ಪ**	ಸದಸ್ಯರು
ಮೊನಪ್ಪ ಸರಪೂರ	ಸದಸ್ಯರು	**ರೇಣುಕಾ ಪಾಟೀಲ**	ಸದಸ್ಯರು
ಮೋಗಪ್ಪ ಚಪ್ಪಳಿಕಿ	ಸದಸ್ಯರು	**ಲಿಂಗಮ್ಮ ಸಾಧ್ರಿ**	ಸದಸ್ಯರು
ಶಿವಪ್ಪ ನಾಯಕ	ಸದಸ್ಯರು	**ಮಹದೇವಮ್ಮ ಬಿಸ್ಲ**	ಸದಸ್ಯರು
ರಂಗಪ್ಪ ಗಾಡಗೇರಿ	ಸದಸ್ಯರು	**ಶಿವರಾಂ ಕುಲಕರ್ಣಿ**	ಬಿಲ್ ಕಲೆಕ್ಟರ್
ಅಮರೇಶ ಪೂಜಾರಿ	ಸದಸ್ಯರು	**ಶಿವಣ್ಣ**	**ಕಾರ್ಯದರ್ಶಿ**

With Best Compliments from

HI-TECH DHABHA

Opp. Kuppu Swamy Steel Yard
Graphite Road,HOODY
Bangalore - 560 048

Propritor
A.M.Ravichandran

ಶುಭಾಶಯಗಳೊಂದಿಗೆ,

ಬೇಟೋಳಿ ಗ್ರಾಮ ಪಂಚಾಯ್ತಿ


ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ

ಶ್ರೀ ಬಿ.ಎಸ್.ಪುಷ್ಪರಾಜ್	ಅಧ್ಯಕ್ಷರು
ಶ್ರೀ ಬಿ.ಎಂ.ಗಣೇಶ್	ಉಪಾಧ್ಯಕ್ಷರು
ಶ್ರೀ ಪಿ.ಎಂ.ಬಿದ್ದಪ್ಪ	ಸದಸ್ಯರು
ಶ್ರೀ ರಂಜಿ ಪೂಣಚ್ಚ	ಸದಸ್ಯರು
ಶ್ರೀ ಬಿ.ಪಿ.ಸೋಮಪ್ಪ	ಸದಸ್ಯರು
ಶ್ರೀ ಲಿಯಾಖತ್ ಆಲಿ	ಸದಸ್ಯರು
ಶ್ರೀ ಅಬು ಮೊಹಮ್ಮದ್	ಸದಸ್ಯರು
ಶ್ರೀ ಮೊಹಮ್ಮದ್ ಇಬ್ರಾಹಿಂ	ಸದಸ್ಯರು
ಶ್ರೀ ಮೊಹಮ್ಮದ್ ಅನೀಫ್	ಸದಸ್ಯರು
ಶ್ರೀ ಸುರೇಶ್ ಬಾಬು	ಸದಸ್ಯರು
ಶ್ರೀಮತಿ ಬಿ.ಪಿ.ಯಶೋಧ	ಸದಸ್ಯರು
ಶ್ರೀಮತಿ ಚೋಮವ್ವ ನಾಚಪ್ಪ	ಸದಸ್ಯರು
ಶ್ರೀಮತಿ ಎ.ಯು.ಪಾರ್ವತಿ	ಸದಸ್ಯರು
ಶ್ರೀಮತಿ ಹೆಚ್.ಎಸ್.ಸೀತಮ್ಮ	ಸದಸ್ಯರು
ಶ್ರೀಮತಿ ವೈ.ಸಿ.ಕಾವೇರಿ	ಸದಸ್ಯರು
ಶ್ರೀಮತಿ ಹೆಚ್.ಟಿ.ಜಯಲಕ್ಷ್ಮಿ	ಸದಸ್ಯರು
ಶ್ರೀಮತಿ ಸುಜಾತ ಬಿ.ಎಸ್.	ಸದಸ್ಯರು
ಶ್ರೀಮತಿ ಬಿ.ವಿ. ಜಯಲಕ್ಷ್ಮಿ	ಸದಸ್ಯರು


ಶ್ರೀ ಕೆ.ಸಿ.ಅಪ್ಪಣ್ಣ
ಕಾರ್ಯದರ್ಶಿ

ಶುಭಾಶಯಗಳೊಂದಿಗೆ,

ರಾವ ಎಲೆಕ್ಟ್ರಾನಿಕ್ಸ್







ಟಿ.ವಿ., ಟೇಪ್‌ರೆಕಾರ್ಡರ್ಸ್,
ರೇಡಿಯೋ ಸರ್ವಿಸಿಂಗ್ ಸೆಂಟರ್

ಎಂ.ಜಿ.ರಸ್ತೆ, ಜುಮ್ಮಾಮಸೀದಿ ಹತ್ತಿರ,
ಗಂಗಾವತಿ

With Best Compliments From,

M/S PRATIK AGENCIES

C & F Agents for
ICI India Litd., (Paints)

Vishal Karnataka Building
Pinto Road
Hubli - 580 020
Ph : (0836) 251439
Karnataka State

ಶುಭಾಶಯಗಳೊಂದಿಗೆ,


ಜೀವವಿಮಾ ನಿಗಮ ಸಂಗಾತಿಗಳು

ಉಡುಪಿ

C/o ಗೋಪಾಶೆಟ್ಟಿ,
ಎಲ್.ಐ.ಸಿ.ಆಫ್ ಇಂಡಿಯ
ವಿಭಾಗೀಯ ಕಚೇರಿ, ಉಡುಪಿ-576101

ಕ್ರಾಂತಿಕಾರಿಶುಭಾಶಯಗಳೊಂದಿಗೆ

ಜನಪರ ಚಳುವಳಿಯ
ಚೈತನ್ಯದ ಚಿಲುಮೆ
ಕಾಂ. ಪಿ. ರಾಮಚಂದ್ರರಾವ್
ಲಾಲ್ ಸಲಾಂ



ನೆನಪುಗಳೊಂದಿಗೆ

ಜನರಲ್ ಶಾಖೆ - ಸಿಪಿಐ(ಎಂ)
ಬೆಂಗಳೂರು

ಕ್ರಾಂತಿಕಾರಿ ಶುಭಾಶಯಗಳೊಂದಿಗೆ,

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು)

ತಾಲ್ಲೂಕು ಸಮಿತಿಗಳು
ದೊಡ್ಡಬಳ್ಳಾಪುರ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಮತ್ತು

ದುಡಿಯುವ ಮಹಿಳೆಯರ ಶಾಖೆ

ಬೆಂಗಳೂರು

ನಗರಸಭೆ ವಿಜಾಪೂರ ಸನ್ ೧೯೯೯-೨೦೦೦ ನೇ ಸಾಲಿಗಾಗಿ

ಕಾಯ್ದಿರಿಸಿದ ಶೇ. ೧೮ ರ ಹಣ ವಿನಿಯೋಗಿಸಿದ ಕಾಮಗಾರಿಯ ಸವಿವರ.

ರೂ. ೪೦.೦೯,೦೦೦-೦೦ ಗಳನ್ನು ಕಾಯ್ದಿರಿಸಿದ್ದು ೯೯-೨೦೦೦ ನೇ ಸಾಲಿಗಾಗಿ ಸದರಿ ಹಣವನ್ನು ವಿನಿಯೋಗಿಸುವ ಕುರಿತು ವಿವರ

ಅ.ನಂ.	ಯೋಜನೆಯ ಹೆಸರು	ನಿಗದಿಪಡಿಸಿದ ಮೊತ್ತ
೧.	ಪೌರ ಕಾರ್ಮಿಕರ ವಸತಿಗೃಹಗಳ ನಿರ್ಮಾಣ ಹಾಗೂ ನಿರ್ವಹಣೆ	೭,೨೫,೦೦೦-೦೦
೨.	ನವೋದಯ ಸೈನಿಕ ಶಾಲೆಗಳಿಗೆ ಪ್ರವೇಶ ಪಡೆಯುವ ಪ.ಜಾತಿ/ಪ.ಪಂಗಡಗಳ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು	೨೫,೦೦೦-೦೦
೩.	ವಾ.ನಂ. ೭ ಮನಗೂಳಿ ಅಗಸಿ ಹರಿಜನ ಕಾಲನಿಯಲ್ಲಿ ಒಳಚರಂಡಿ	೩೭,೦೦೦-೦೦
೪.	ವಾ.ನಂ. ೫ ಪೌರ ಕಾರ್ಮಿಕರ ವಸತಿ ಗೃಹಗಳ ಹತ್ತಿರ ಒಳಚರಂಡಿ	೧,೯೨,೦೦೦-೦೦
೫.	ವಾ.ನಂ. ಮಾಂಗವಾಡಿ ಕಾಲನಿ ಹತ್ತಿರ ಒಳಚರಂಡಿ	೩೭,೦೦೦-೦೦
೬.	ವಾ.ನಂ. ಮಾಂಗವಾಡಿ ಕಾಲನಿಯಲ್ಲಿ ಬಿಡಿ ರಸ್ತೆ	೪೯,೯೦೦-೦೦
೭.	ಅತೀವೃಷ್ಠಿಯಿಂದ ಬಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಮನೆಗಳ ದುರಸ್ತಿಗಾಗಿ ಹಾಗೂ ವಯಕ್ತಿ ಶೌಚಾಲಯ ಕಟ್ಟಿಕೊಳ್ಳಲು ಧನ ಸಹಾಯ	೧,೦೦,೦೦೦-೦೦
೮.	ತೀವ್ರವಾದ ಖಾಯಿಲೆ ಹೊಂದಿದ ಪ.ಜಾತಿ/ಪ.ಪಂಗಡದವರಿಗೆ ಧನ ಸಹಾಯ	೩೦,೦೦೦-೦೦
೯.	ಪ.ಜಾತಿ/ಪ.ಪಂಗಡಗಳ ಬಡಾವಣೆಯಲ್ಲಿ ಹೊಸ ರಸ್ತೆ ಒಳಚರಂಡಿ, ಬೀದಿ ದೀಪಗಳ ವಿಸ್ತೀರ್ಣ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳು	೧,೦೦,೯೦೦-೦೦
೧೦.	ಪ.ಜಾತಿ/ಪ.ಪಂಗಡಗಳ ಬಡಾವಣೆಯಲ್ಲಿ ಹಾಗೂ ಆಶ್ರಯ ಲೇಔಟ್‌ನಲ್ಲಿರುವ ಪರಿಶಿಷ್ಟರ ಮನೆಗಳ ಹತ್ತಿರ ಪೈಪ್‌ಲೈನ್ ಅಳವಡಿಸಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವುದು	೧೧,೦೦,೦೦೦-೦೦
೧೧.	ಆಶ್ರಯ ಬಡಾವಣೆಯಲ್ಲಿ ವಾಸಿಸುವ ಪರಿಶಿಷ್ಟರಿಗೆ ಮನೆಗಳಿಗೆ ಸೌರಶಕ್ತಿ ವಿದ್ಯುತ್ ಜೋಡಣೆ	೩,೦೦,೦೦೦-೦೦
೧೨.	ಪರಿಶಿಷ್ಟರ ಬಡಾವಣೆಗಳಲ್ಲಿ ಸಮಾಜ ಮಂದಿರ ನಿರ್ಮಾಣ	೫,೨೩,೦೦೦-೦೦
೧೩.	ಬಾಬು ಜಗಜೀವನ ರಾಂ ವೃತ್ತ ನಿರ್ಮಾಣಕ್ಕೆ ವಂತಿಗೆ	೧,೦೦,೦೦೦-೦೦

ಒಟ್ಟು ರೂ. ೪೭,೩೯,೮೦೦-೦೦ಗಳ ಕಾಮಗಾರಿಗಳಿಗಾಗಿ ಮಂಜೂರಾತಿ ನೀಡಲಾಗಿದೆ. ಹಾಗೂ ರೂ. ೬೯,೨೦೦-೦೦ ಗಳ ಯೋಜನೆ(ಅ.ನಂ.೩) ವಿವರ ಸಲ್ಲಿಸಲು ಸೂಚಿಸಿದೆ.

ಆಯುಕ್ತರು
ನಗರಸಭೆ ಬಿಜಾಪೂರ

ಅಧ್ಯಕ್ಷರು
ನಗರಸಭೆ ಬಿಜಾಪೂರ

PRBDECR 319-79/79 AIKYARANGA WEEKLY **Reg. No. 17015/64 KRNM/BGS-405 MAG (2)**

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : **G.N. NAGARAJ**

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

Printed & Published by **Communist Party of India(Marxist)**, Karnataka State Committee. Editor : **G.N. NAGARAJ**